


ಜ್ಞಾನಪೀಠ
ಪ್ರಶಸ್ತಿ ವಿಜೇತರು

ಮಾಸ್ತಿ



ರಾ. ಲಕ್ಷ್ಮೀನಾರಾಯಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

'ಜ್ಞಾನಪೀಠ ಪ್ರಶಸ್ತಿ ವಿಜೇತರು' ಮಾಲೆ

ಮಾಸ್ತಿ

ರಾ. ಲಕ್ಷ್ಮೀನಾರಾಯಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
ದೂರವಾಣಿ : ೨೨೨೧೧೭೩೦

MASTHI - Written by R. Lakshminarayana and published by Registrar, Karnataka Sahitya Academy, Kannada Bhavana, J. C. Road, Bengalooru - 560 002.

Pages : xiv + 92

Price : Rs. 30/-

ಬೆಲೆ : ರೂ. ೩೦/-

ಪುಟಗಳು : xiv + ೯೨

ಪ್ರತಿಗಳು : ೨೦೦೦

ಮೊದಲನೆಯ ಮುದ್ರಣ : ೧೯೯೪
ಎರಡನೆಯ ಮುದ್ರಣ : ೧೯೯೬
ಮೂರನೆಯ ಮುದ್ರಣ : ೨೦೦೪
ನಾಲ್ಕನೆಯ ಮುದ್ರಣ : ೨೦೦೭

ಪ್ರಕಾಶಕರು :
ವಿ.ಎಸ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
ದೂ : ೨೨೨೧೧೭೩೦

ಮುದ್ರಕರು :
ಭಾಗ್ಯಂ ಬೈಂಡಿಂಗ್ ವರ್ಕ್ಸ್,
ನಂ. ೧೯/೨೦, ೧ನೇ ಮುಖ್ಯರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ,
ಬೆಂಗಳೂರು - ೫೬೦ ೦೨೬ ದೂರವಾಣಿ : ೨೬೭೫೮೨೮೦

ಅಧ್ಯಕ್ಷರ ಮಾತು
(ನಾಲ್ಕನೆಯ ಮುದ್ರಣ)

ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರತಿಯೊಬ್ಬ ಸಾಹಿತಿಯ ಬಗೆಗೂ ಒಂದೊಂದು ಪರಿಚಯಾತ್ಮಕ ಪುಸ್ತಕ ಪ್ರಕಟಿಸುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯು, ಸಾಮಾನ್ಯ ಓದುಗನನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ರೂಪಿಸಿದೆ. ಇಲ್ಲಿ ನಮಗೆ ವಿದ್ವಾಂಸರಿಗಿಂತ ಹೆಚ್ಚಾಗಿ ಸಾಮಾನ್ಯ ಓದುಗ ಮುಖ್ಯವಾಗುತ್ತಾನೆ. ಈ ಮಾಲೆಯಲ್ಲಿ ಬರುವ ಪುಸ್ತಕಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗುತ್ತ ಅವರ ಸಾಹಿತ್ಯಕ ಬೆಳವಣಿಗೆಗೆ ಸಹಕಾರಿಯಾಗಬೇಕೆಂಬುದು ನಮ್ಮ ಆಶಯ. ಈ ನಿಟ್ಟಿನಲ್ಲಿ ಈ ಮಾಲೆಯಲ್ಲಿ 'ಮಾಸ್ತಿ' ಕೃತಿಯು ನಾಲ್ಕನೆಯ ಮುದ್ರಣ ಕಾಣುತ್ತಿರುವುದು, ಇವುಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಈ ಪುಸ್ತಕಗಳ ಮರುಮುದ್ರಣಕ್ಕೆ ಅನುಮತಿಸಿದ ಎಲ್ಲ ಲೇಖಕರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಡಿಸೆಂಬರ್ ೨೦೦೭ — ನಾಡೋಜ ಗೀತಾ ನಾಗಭೂಷಣ

ಅಧ್ಯಕ್ಷರ ಮಾತು
(ಮೂರನೆಯ ಮುದ್ರಣ)

'ಮಾಸ್ತಿ' ಅವರನ್ನು ಪರಿಚಯಿಸುವುದೆಂದರೆ ಹೊಸಗನ್ನಡ ಸಾಹಿತ್ಯದ ಹುಟ್ಟು, ಬೆಳವಣಿಗೆಗಳನ್ನೇ ಪರಿಚಯಿಸಿದಂತೆ. ನವೋದಯ ತಲೆಮಾರಿನ ಹಿರಿಯ ಸಾಹಿತಿಗಳಾದ ಅವರು ಹಲವು ಪ್ರಕಾರಗಳಲ್ಲಿ ಕಾರ್ಯಮಾಡಿ, ಹೊಸಗನ್ನಡ ಸಾಹಿತ್ಯಕ್ಕೆ ಒಂದು ಗಟ್ಟಿ ಬುನಾದಿಯನ್ನು ಹಾಕಿಕೊಟ್ಟಿದ್ದು ಈಗ ಇತಿಹಾಸ.

'ಮಾಸ್ತಿ' -ಸಣ್ಣಕತೆಯ ಜನಕರೂ ಅಹುದು. ಅವರ 'ಜೀವನ' ಪತ್ರಿಕೆ ಅಂದಿನ ಸಾಹಿತಿಗಳಿಗೆ ಬರಹದ ವೇದಿಕೆಯಾಗಿ, ಯುವಕರಿಗೆ ದಾರಿದೀಪವಾಗಿ ಕಾರ್ಯಮಾಡಿದ್ದನ್ನು ಮರೆಯುವಂತಿಲ್ಲ, ಅವರ ಗದ್ಯ ಅವರದೇ ಎನ್ನುವಷ್ಟು ವಿಶಿಷ್ಟವಾದುದು.

ಕರ್ನಾಟಕಕ್ಕೆ ಜ್ಞಾನಪೀಠ ಪ್ರಶಸ್ತಿಯ ಕೀರ್ತಿಯನ್ನು ತಂದುಕೊಟ್ಟ ಹಿರಿಯರಲ್ಲೊಬ್ಬರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರನ್ನು ಶ್ರೀ ಡಾ. ಲಕ್ಷ್ಮೀನಾರಾಯಣ ಅವರು ತುಂಬ ಶ್ರದ್ಧೆಯಿಂದ ಪರಿಚಯಿಸಿದ್ದು, ಪ್ರಸ್ತುತ ಪುಸ್ತಕ ಮೂರನೆಯ ಮುದ್ರಣವಾಗಿ ಪ್ರಕಟವಾಗುತ್ತಿದೆ. ಸಾಹಿತ್ಯಾಸಕ್ತರ ಬೇಡಿಕೆಯನ್ನು ಈ ಕೃತಿ ಪೂರೈಸಿಕೊಡುತ್ತದೆಂದು ನಂಬಲಾಗಿದೆ. ಲೇಖಕರಿಗೆ, ಮುದ್ರಕರಿಗೆ ಸಾಹಿತ್ಯ ಅಕಾಡೆಮಿಯು ಕೃತಜ್ಞವಾಗಿದೆ.

ಮಾರ್ಚ್ ೨೦೦೪ - ಗುರುಲಿಂಗ ಕಾಪಸೆ

ಅಧ್ಯಕ್ಷರ ಮಾತು
(ಎರಡನೆಯ ಮುದ್ರಣ)

'ಮಾಸ್ತಿ' ಓದುಗರನ್ನು ತೀವ್ರ ಆತ್ಮೀಯರನ್ನಾಗಿ ಮಾಡಿಕೊಳ್ಳುವ ಕೃತಿ. ಕಿರಿಯು ಕನ್ನಡಿಯಲ್ಲಿ ಅಡಗಿದಂತೆ ಈ ಚಿಕ್ಕ ಕೃತಿಯು ಮಾಸ್ತಿಯವರ ಚಿತ್ರವನ್ನು ನಮ್ಮ ಮನದಲ್ಲಿ ಮೂಡಿಸುತ್ತದೆ.

ಮಾಸ್ತಿ ಎರಡನೆಯ ಸಲ ಮುದ್ರಣಗೊಳ್ಳುತ್ತಿರುವುದು ಸಂತೋಷದ ಸಂಗತಿ. ಶ್ರೀ ರಾ. ಲಕ್ಷ್ಮೀನಾರಾಯಣ ಅವರಿಗೆ ಅಭಿನಂದನೆಗಳು.

- ಶಾಂತರಸ

ಅಧ್ಯಕ್ಷರ ಮಾತು
(ಮೊದಲನೆಯ ಮುದ್ರಣ)

ಕನ್ನಡದ ಓದುಗ ಮೂಲತಃ ಕನ್ನಡಾಭ್ಯಾಸಿಯಾಗಬೇಕು. ಕನ್ನಡ ಸಾಹಿತ್ಯದ ತಿರುಳನ್ನು ಅರ್ಥಮಾಡಿಕೊಳ್ಳುವ ಕ್ರಿಯಾಶೀಲತೆಯನ್ನು ತೋರಬೇಕು. ಈ ಬಗ್ಗೆ ವಿವಾದವೇ ಇಲ್ಲ. ಆದರೆ ಕನ್ನಡಿಗನ ಅಂತರಂಗದಲ್ಲಿ ಕರ್ನಾಟಕದ ಪ್ರಜ್ಞಾಕೇಂದ್ರ ದೃಢಗೊಳ್ಳುತ್ತಲೇ ಅನ್ಯ ಭಾಷಾ ಸಾಹಿತ್ಯಗಳ ಅರಿವು ಆವರಿಸುವುದು ಅಪೇಕ್ಷಣೀಯ. ಇಂಡಿಯಾದ ಇತರೆ ಭಾಗಗಳಲ್ಲಿ ಸಂಭವಿಸುತ್ತ ಬಂದ ಸಾಹಿತ್ಯೇತಿಹಾಸದ ಮುಖ್ಯ ಘಟ್ಟಗಳಾದರೂ ಕನ್ನಡಿಗನ ಒಳಗೆ ಬಂದು ಕನ್ನಡದೊಂದಿಗೆ ಮಾತಾಡಿದರೆ, ಆಗುವ ಬೌದ್ಧಿಕ ಪರಿಣಾಮ ಅಸಾಧಾರಣ. ಕನ್ನಡಿಗನ ಜೊತೆಗೆ ಕನ್ನಡವೂ ಬೆಳೆಯುವ ಕ್ರಿಯೆಗೆ ಕನ್ನಡ ಸಾಹಿತ್ಯದ ಜೊತೆಜೊತೆಗೇ ಲಭ್ಯವಾಗುವ ಅನ್ಯ ಭಾಷಾ ಸಾಹಿತ್ಯಗಳ ತಿಳುವಳಿಕೆ ಉಪಯುಕ್ತವಾಗಬಲ್ಲದು. ಕನ್ನಡಿಗ, ಜಗತ್ತಿನ ಜೊತೆ ಮಾತಾಡಬೇಕು; ಇಂಡಿಯಾದ ಇತರೆ ಭಾಷೆ – ಸಾಹಿತ್ಯಗಳು ಆತನ ಅರಿವಿನ ಭಾಗವಾಗಬೇಕು; ಭೌಗೋಳಿಕ ಗೆರೆಗಳಿಗ ಮಿತಿಯಿದ್ದರೂ ಬೌದ್ಧಿಕ ಗೆರೆಗಳನ್ನು ಮೀರುತ್ತಿರಬೇಕು. ಆಗ ಕನ್ನಡ ಪ್ರಜೆಗೆ ಮತ್ತೊಂದು ಆಯಾಮ ಲಭ್ಯವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಅನ್ಯ ಭಾಷಾ ಸಾಹಿತ್ಯಗಳ ಪ್ರಮುಖಾಂಶಗಳನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಕೆಲಸ ಕನ್ನಡದ ಕೆಲಸವೇ ಆಗುತ್ತದೆ. ಇಂಥ ಅರ್ಥಪೂರ್ಣ ಕೆಲಸವನ್ನು ಕರ್ನಾಟಕ ಸಾಹಿತ್ಯ

ಅಕಾಡೆಮಿಯು ಕೈಗೆತ್ತಿಕೊಂಡು ಜ್ಞಾನಪೀಠ ಪ್ರಶಸ್ತಿ ಪಡೆದ ವಿವಿಧ ಭಾಷಾ ಸಾಹಿತ್ಯಗಳ ಬರಹಗಾರರನ್ನು ಕುರಿತು ಕಿರು ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಭಾರತೀಯ ಭಾಷಾ ಸಾಹಿತ್ಯಗಳಲ್ಲಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕದಲ್ಲಿ ಈ ರೀತಿ ಕೆಲಸ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯೆಂದು ನನ್ನ ವಿನಮ್ರ ಭಾವನೆ.

ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರತಿಯೊಬ್ಬ ಲೇಖಕರ ಬಗ್ಗೆಯೂ ಒಂದೊಂದು ಪುಸ್ತಕ ಪ್ರಕಟಿಸುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮುಖ್ಯವಾಗಿ ಸಾಹಿತ್ಯದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ರೂಪಿಸಿದೆ. ಈ ಮಾಲೆಯಲ್ಲಿ ಬರುವ ಪುಸ್ತಕಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಬೇಕಾದ ಮೂಲ ಸಾಮಗ್ರಿಯನ್ನು ಒದಗಿಸುವುದರೊಂದಿಗೆ ಅಭಿರುಚಿ ವಿಸ್ತರಣೆಗೆ ಸಹಾಯಕವಾಗಬೇಕೆಂದು ಆಶಿಸಲಾಗಿದೆ.

ಜ್ಞಾನಪೀಠ ಪ್ರಶಸ್ತಿ ಪಡೆದ ವಿವಿಧ ಭಾಷಾ ಸಾಹಿತ್ಯಗಳ ಬರಹಗಾರರ ಬಗ್ಗೆ ಕಿರುಪುಸ್ತಕಗಳನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಅಕ್ಟೋಬರ್ ೧೯೯೪ - ಬರಗೂರು ರಾಮಚಂದ್ರಪ್ಪ

ಬೆಂಗಳೂರು

ಲೇಖಕರ ಮಾತು
(ಮೂರನೆಯ ಮುದ್ರಣ)

ಮಾಸ್ತಿಯವರ ಬದುಕು ಮತ್ತು ಬರಹ ಕುರಿತ ಈ ನನ್ನ ಪುಸ್ತಕ ಜನಪ್ರಿಯವಾಗಿ, ಪ್ರಕಟವಾದ ಈ ಹತ್ತನೇ ವರ್ಷದಲ್ಲಿ ಮೂರನೆಯ ಮುದ್ರಣ ಕಾಣುತ್ತಿರುವುದು ನನಗೆ ತುಂಬ ಸಂತಸ ತಂದಿದೆ. ತೃತೀಯ ಮುದ್ರಣದ ವಿಚಾರದಲ್ಲಿ ಆಸಕ್ತಿ ತಾಳಿ ಇದನ್ನು ಅಂದವಾಗಿ ಪ್ರಕಟಿಸುತ್ತಿರುವ ಅಕಾಡೆಮಿಯ ಈಗಿನ ಅಧ್ಯಕ್ಷರಾದ ಡಾ. ಗುರುಲಿಂಗ ಕಾಪಸೆಯವರಿಗೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನಾನು ಕೃತಜ್ಞನಾಗಿದ್ದೇನೆ.

ಮಾರ್ಚ್ ೨೦೦೪ — ರಾ. ಲಕ್ಷ್ಮೀನಾರಾಯಣ

ಲೇಖಕರ ಮಾತು
(ಮೊದಲನೆಯ ಮುದ್ರಣ)

ಮಾಸ್ತಿಯವರನ್ನು ಕುರಿತ ಈ ಪುಸ್ತಕವು ಅವರ ಜೀವನ ಮತ್ತು ಸಾಹಿತ್ಯ ಕುರಿತ ಸಮಗ್ರ ಪರಿಚಯ ಮತ್ತು ಚರ್ಚೆ ಅಲ್ಲ, ಕಾರಣ ಮಾಸ್ತಿಯವರ ಬದುಕು, ಬರಹ ಎರಡೂ ತುಂಬ ವಿಸ್ತಾರವಾದುವು. ಮಾಸ್ತಿಯವರ ಬದುಕಿನ ಸಂಕ್ಷಿಪ್ತ ಪರಿಚಯ ಮತ್ತು ಅವರ ಸೃಜನಶೀಲ ಸಾಹಿತ್ಯದ ಮುಖ್ಯ ಕೃತಿಗಳನ್ನು ಕುರಿತ ಚರ್ಚೆಯನ್ನು ಮಾತ್ರ ಇದರಲ್ಲಿ ಅಡಕಗೊಳಿಸಲು ಯತ್ನಿಸಲಾಗಿದೆ. ಜೊತೆಗೆ ಅವರ ಸೃಜನಶೀಲ ಸಾಹಿತ್ಯದ ಪ್ರಮುಖ ಪ್ರವೃತ್ತಿಗಳನ್ನು ಕುರಿತು ಚರ್ಚಿಸಲಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಬದುಕು ಬರಹ ಕುರಿತ ಈ ಮಾಲಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತದ್ದಕ್ಕಾಗಿ ನನಗೆ ಸಂತೋಷವಾಗಿದೆ. ಈ ನೆವದಲ್ಲಿ ಮಾಸ್ತಿಯವರ ಸಾಹಿತ್ಯವನ್ನು ಅಧ್ಯಯನ ಮಾಡುವ ಮತ್ತು ಅವರ ಬಗೆಗಿನ ನನ್ನ ಗೌರವವನ್ನು ಹೀಗೆ ಅಭಿವ್ಯಕ್ತಿಸುವ ಅವಕಾಶವೊದಗಿದೆ. ಇದಕ್ಕೆ ಪ್ರೇರಕರೂ, ಕಾರಣಕರ್ತರೂ ಆದ ಅಕಾಡೆಮಿಯ ಅಧ್ಯಕ್ಷ ಶ್ರೀ ಬರಗೂರು ರಾಮಚಂದ್ರಪ್ಪನವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಅವರ ವಿಶ್ವಾಸಪೂರ್ವಕ ಒತ್ತಾಯವೇ ಈ ಬರವಣಿಗೆಗೆ ಒತ್ತಾಸೆಯಾಗಿದೆ. ಅದಕ್ಕಾಗಿ ಅವರನ್ನು ಇನ್ನೊಮ್ಮೆ ವಂದಿಸುತ್ತೇನೆ.

ನವೆಂಬರ್ ೧೯೯೪ — ರಾ. ಲಕ್ಷ್ಮೀನಾರಾಯಣ

ಪರಿವಿಡಿ

ಅಧ್ಯಾಯ ೧

ಮಾಸ್ತಿ : ಬದುಕು

೧

ಹೊಸಗನ್ನಡ ಸಾಹಿತ್ಯವನ್ನು ಸರ್ವ ವಿಧದಲ್ಲೂ ಶ್ರೀಮಂತಗೊಳಿಸಿದ ತಲೆಮಣಿಯಾದ ಸಾಹಿತಿಗಳಲ್ಲಿ ಮಾಸ್ತಿಯವರು ಒಬ್ಬರು. ಕಳೆದ ಅರುವತ್ತು ವರ್ಷಗಳಿಂದ ಸಾಹಿತ್ಯದ ಬಹುತೇಕ ಎಲ್ಲ ಪ್ರಮುಖ ಪ್ರಕಾರಗಳಲ್ಲಿ ದುಡಿದು. ತಮ್ಮ ಬೃಹತ್ ಸಂಖ್ಯೆಯ ಅಮೂಲ್ಯ ಕೃತಿಗಳಿಂದ, ನಿಜವಾದ ಅರ್ಥದಲ್ಲಿ ಕನ್ನಡದ ಆಸ್ತಿ ಎನಿಸಿ, ಕನ್ನಡಿಗರ ಮನಸ್ಸನ್ನು ಸೂರೆಗೊಂಡಿದ್ದಾರೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರಿಗಾಗಿಯೇ ಒಂದು ಪ್ರತ್ಯೇಕ ಅಧ್ಯಾಯ ಮೀಸಲಾಗಿರುತ್ತದೆ.

ಮಾಸ್ತಿಯವರು ಹುಟ್ಟಿದ್ದು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಪುಟ್ಟ ಗ್ರಾಮ ಹೊಂಗೇನಹಳ್ಳಿಯಲ್ಲಿ ೧೮೯೧ ರ ಜೂನ್ ಆರರಂದು. ಅವರ ತಂದೆ ರಾಮಸ್ವಾಮಿ ಐಯ್ಯಂಗಾರ್, ತಾಯಿ ತಿರುಮಲಮ್ಮ. ಮಾಸ್ತಿಯವರಿಗೆ ತಂದೆ ತಾಯಿಗಳು ಇಟ್ಟ ಹೆಸರು ವೆಂಕಟೇಶ ಅಯ್ಯಂಗಾರ್ ಎಂದು. ಅವರ ಮನೆತನದವರ ಊರು ಮಾಸ್ತಿ.

ಮಾಸ್ತಿಯವರ ಮನೆತನ 'ಪೆರಿಯಾತ್' ಮನೆತನ ಎಂದು ಹೆಸರಾಗಿತ್ತು. ಅದರರ್ಥ ದೊಡ್ಡ ಮನೆಯವರು ಎಂದು. ಒಂದು ಕಾಲಕ್ಕೆ ಚೆನ್ನಾಗಿ ಬಾಳಿ

ಬದುಕಿದ ಸಂಪ್ರದಾಯವಂತ ಮನೆತನ. ಇವರ ಕುಟುಂಬದ ಹಿರಿಯರೊಬ್ಬರು, ಗ್ರಾಮದ ಸುಲ್ತಾನನೊಬ್ಬನಲ್ಲಿ ದಿವಾನರಾಗಿದ್ದರು. ಈ ಮನೆತನದ ಮುತ್ತೈದೆಯೊಬ್ಬಳು ಸಹಗಮನ ಮಾಡಿ ಮಹಾಸತಿ ಎನಿಸಿದಳು. ಅದರಿಂದಾಗಿಯೇ ಆ ಊರು ಮಾಸ್ತಿ ಎಂದಾಯಿತು.

ಮಾಸ್ತಿಯವರು ಹುಟ್ಟುವ ಕಾಲಕ್ಕೆ ಕುಟುಂಬಕ್ಕೆ ತೀವ್ರ ಬಡತನ ಬಂದಿತ್ತು. ಆದರೆ ಮರ್ಯಾದೆಗೆ ಕಿಂಚಿತ್ತೂ ಕುಂದು ಬಂದಿರಲಿಲ್ಲ. ಜನ ಅದೇ ಗೌರವಾದರಗಳಿಂದ ಕಾಣುತ್ತಿದ್ದರು. ತಂದೆಯವರು ತಾತ್ಕಾಲಿಕ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದರು. ಯಲದೂರು ಶಾಲೆಗೆ ಬಾಲಕ ಮಾಸ್ತಿಯನ್ನು ಸೇರಿಸಿದರೂ ಕೆಲಕಾಲದಲ್ಲೇ ಮಾಸ್ತಿಯ ಶಾಲೆಗೆ ಸೇರಿಸಿದರು. ಆದರೆ ಅಲ್ಲೂ ಹೆಚ್ಚುದಿನ ಮುಂದುವರಿಯಲಿಲ್ಲ. ಊರಿಗೆ ಪ್ಲೇಗ್ ಆವರಿಸಿದ್ದರಿಂದ, ಅವರ ತಾತ ತಮ್ಮ ಊರಾದ ಹೊಂಗೇನಹಳ್ಳಿಗೆ ಕರೆದುಕೊಂಡು ಹೋಗಿ ಸಮೀಪದ ಶಿವಾರಪಟ್ಟಣದ ಶಾಲೆಗೆ ಸೇರಿಸಿದರು. ಹೊಂಗೇನ ಹಳ್ಳಿಗೆ ಹೋದದ್ದು ತಮ್ಮ ಬದುಕಿನ ಒಂದು ಮುಖ್ಯ ಘಟ್ಟವೆನ್ನುತ್ತಾರೆ ಮಾಸ್ತಿ.

ಬಾಲಕ ಮಾಸ್ತಿ ತುಂಬ ಚುರುಕು. ಓದಿನಲ್ಲಿ ಮುಂದು. ಇದನ್ನು ಮನಗಂಡಿದ್ದ ಅವರ ತಾತ “ಈ ಹುಡುಗ ಓದಿ ಜಾಣನಾಗುತ್ತಾನೆ. ಮನೆಯ ಬಡತನ ನೀಗುತ್ತಾನೆ” ಎಂದು ಹೇಳಿದರಂತೆ. ಮಾಸ್ತಿ ಹೇಳುತ್ತಾರೆ- “ಅವರ ಆಸೆಯೇ ನನ್ನ ಜೀವನವನ್ನೆಲ್ಲ ರೂಪಿಸಿತು.”

ಶಿವಾರಪಟ್ಟಣದ ಶಾಲೆಯಲ್ಲಿದ್ದ ನಾರಣಪ್ಪನವರೆಂಬ ವಿದ್ಯಾರ್ಥಿ ಹಿತಾಕಾಂಕ್ಷಿ, ಸಾತ್ವಿಕ ಶಿರೋಮಣಿ ಹಾಗೂ ಸಾಹಿತ್ಯ ಪ್ರೇಮಿ ಉಪಾಧ್ಯಾಯರಿಂದಾಗಿ ಅವರಿಗೆ ಕಾಲಿದಾಸನ ರಘುವಂಶದ ದಿಲೀಪಚರಿತೆ, ಅಜನೃಪ ಚರಿತೆ, ಗೋವಿನ ಕತೆ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ ಮುಂತಾದ ಉತ್ತಮ ಸಾಹಿತ್ಯದ ಪರಿಚಯವಾಯಿತು. ಹಾಗೆಯೇ ಮನೆಯಲ್ಲಿ ಸುಂದರಕಾಂಡ, ವೆಂಕಟಾಚಾರ್ಯರ ಬಂಗಾಳಿ ಅನುವಾದಗಳು, ಆರ್ಯಕೀರ್ತಿ, ಪುರಂದರದಾಸರ ಹಾಡುಗಳು, ಜೈಮಿನಿ ಭಾರತ ಇವೆಲ್ಲವುಗಳನ್ನು ಓದುವ ಅವಕಾಶವಾಯಿತು. ಇದರಿಂದ ಬಾಲಕ ಮಾಸ್ತಿಗೆ ಎಳವೆಯಲ್ಲೇ ಸಾಹಿತ್ಯದಲ್ಲಿ ಆಸಕ್ತಿ ಮತ್ತು ಅಭಿರುಚಿಗಳು ಉಂಟಾದುವು.

ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾದರು. ಮುಂದೆ ಮಳವಳ್ಳಿಯಲ್ಲಿ ಜಮೀದಾರರಾಗಿದ್ದ ಸೋದರಮಾವ ವೆಂಕಟರಾಮಯ್ಯಂಗಾರ್ಯರ ಮನೆಯಲ್ಲಿದ್ದುಕೊಂಡು ಇಂಗ್ಲಿಷ್ ಲೋಯರ್ ಸೆಕೆಂಡರಿ ಪಾಸ್ ಮಾಡಿದರು.

ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಮೈಸೂರಿನ ವೆಸ್ಲಿಯನ್ ಹೈಸ್ಕೂಲ್‌ಗೆ ಸೇರಿದರು. ಅವರ ಮಾವನವರು ಮಾಸ್ತಿಯನ್ನು ಬಳ್ಳೆ ರಂಗಣ್ಣನವರ ಮನೆಯಲ್ಲಿ ವಾಸಕ್ಕಿಟ್ಟರು. ಆ ಮನೆಯಲ್ಲಿ ತುಂಬ ಜನರಿದ್ದದ್ದರಿಂದ, ಅವರ ತಾಯಿಗೆ ಈ ಹುಡುಗನೊಬ್ಬ ಹೊರೆಯಾದನೆಂಬ ಅಸಮಾಧಾನ ಉಂಟಾಗಿ ಅದನ್ನು ಕಟುವಾಗಿ ಆಡಿಯೂ ಬಿಟ್ಟರು. ಅದರ ಪರಿಣಾಮ, ರಂಗಣ್ಣನವರು ತಮ್ಮ ಮನೆಯೂ ಸೇರಿದಂತೆ, ಏಳು ವಾರಾನ್ನದ ಮನೆಗಳನ್ನು ಗೊತ್ತುಮಾಡಿಕೊಟ್ಟರು. ಹುಡುಗ ಮಾಸ್ತಿ ತಮ್ಮ ಬಡತನದಿಂದಾಗಿ ಎದುರಿಸಬೇಕಾಗಿ ಬಂದ ಈ ಹೀನಾಯ ಸ್ಥಿತಿಯಿಂದ ಬಿಡಿಸಿಕೊಳ್ಳುವುದು ಈ ಬದುಕಿನ ಮೊದಲ ಕರ್ತವ್ಯವೆಂದು ನಿಶ್ಚಯಿಸಿಕೊಂಡರು. ಅವರ ಈ ನಿಶ್ಚಯದ ಪರಿಣಾಮ ಅವರ ಮುಂದಿನ ವ್ಯಾಸಂಗದಲ್ಲೆಲ್ಲಾ ಕಂಡು ಬಂದು, ಯಾವ ಪರೀಕ್ಷೆಗಳಲ್ಲೂ ಮೊದಲ ಸ್ಥಾನವನ್ನು ಯಾರಿಗೂ ಬಿಟ್ಟು ಕೊಡಲಿಲ್ಲ.

ಕಡಿಮೆ ಸಂಬಳ ಪಡೆಯುತ್ತಿದ್ದರೂ ತಮ್ಮ ಸಂಸಾರದ ಭಾರದ ಜೊತೆಗೆ ತಮ್ಮ ತಮ್ಮನಿಗೂ ಸೋದರಳಿಯನಿಗೂ ವಿದ್ಯಾಭ್ಯಾಸಕ್ಕಾಗಿ ಅದರಲ್ಲೇ ಹಣ ಕಳಿಸುತ್ತಿದ್ದ ತಮ್ಮ ಸೋದರಮಾವ, ಅವರ ತ್ಯಾಗ ಬುದ್ಧಿ ಅದನ್ನು ಸಮಾಧಾನವಾಗಿ ಒಪ್ಪಿಕೊಂಡ ಅವರ ಹೆಂಡತಿ ಇಬ್ಬರನ್ನೂ ಮಾಸ್ತಿ ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತಾರೆ.

ಈ ಶಾಲಾದಿನಗಳಲ್ಲಿ ಸುಬ್ಬುಕೃಷ್ಣಯ್ಯನವರೆಂಬ ಅಧ್ಯಾಪಕರಿಂದಾಗಿ ಷೇಕ್ಸ್‌ಪಿಯರ್ ನಾಟಕಗಳ ಪರಿಚಯ ಮತ್ತು ಇಂಗ್ಲಿಷನ್ನು ಚೆನ್ನಾಗಿ ಬಳಸುವುದು ಬಂತು. ಅವರು ಇಂಗ್ಲಿಷಿನಲ್ಲಿ ಗಟ್ಟಿಗರೆಂದು ಹೆಸರುಗಳಿಸಿದರು.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಮಹಾರಾಜಾ ಕಾಲೇಜಿನಲ್ಲಿ ಎಫ್.ಎ.ತರಗತಿಗೆ ಸೇರಿದರು. ಇಲ್ಲಿ ಅವರಿಗೆ ಬಿ.ಎಂ.ಶ್ರೀ, ಕಾನಕಾನಹಳ್ಳಿ ವರದಾಚಾರ್ಯರು, ಪಿ.ಆರ್. ಕರಿಬಸವ ಶಾಸ್ತ್ರಿಗಳು ಇವರೆಲ್ಲ ಅಧ್ಯಾಪಕರಾಗಿ ದೊರೆತರು. ಎಫ್.ಎ ಓದುತ್ತಿದ್ದಾಗಲೇ ಪ್ಲೇಗಿನಿಂದ ಅವರ ತಂದೆ, ತಾತ, ಅಜ್ಜಿ ತೀರಿಕೊಂಡರು. ಅದಕ್ಕೂ ಮುನ್ನ ತಮ್ಮ ತೀರಿಕೊಂಡಿದ್ದ. ಈ ಸಾವು ನೋವುಗಳಿಂದ ಮಾಸ್ತಿ ಕಂಗೆಟ್ಟರೂ ಸೋದರಮಾವನ ಒತ್ತಾಸೆಯಿಂದ ವಿದ್ಯಾಭ್ಯಾಸ ಮುಂದುವರಿಸಿದರು.

ಎಫ್.ಎ. ಪರೀಕ್ಷೆಯನ್ನು ಮೊದಲ ದರ್ಜೆಯಲ್ಲಿ ಪಾಸ್ ಮಾಡಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜ್‌ಗೆ, ಬಿ.ಎ. ತರಗತಿಗೆ ಸೇರಿದರು. ಭೌತಶಾಸ್ತ್ರ ರಸಾಯನಶಾಸ್ತ್ರ ಅವರ ಕಲಿಕೆಯ ವಿಷಯಗಳಾಗಿದ್ದುವು. ಸೆಂಟ್ರಲ್ ಕಾಲೇಜ್

ದಿನಗಳು ಅವರು ಬದುಕಿನ ಮಹತ್ವಪೂರ್ಣ ದಿನಗಳು. ಟೇಟ್ ಸಾಹೇಬರಂಥ ಇಂಗ್ಲಿಷ್ ಪ್ರಾಧ್ಯಾಪಕರು ಪ್ರಿನ್ಸಿಪಾಲರಾಗಿದ್ದರು. ಮೆಟ್ ಕಾಫ್, ಬಿ. ವೆಂಕಟೇಶಾಚಾರ್, ಬೆಳ್ಳಾವೆ ವೆಂಕಟನಾರಣಪ್ಪ ಇವರುಗಳು ಭೌತಶಾಸ್ತ್ರ, ಗರಣಿ ಕೃಷ್ಣಾಚಾರ್ಯರು ಕನ್ನಡಕ್ಕೆ ಅಧ್ಯಾಪಕರು. ಟೇಟ್ ಅವರಂತೂ ಶಿಷ್ಯವಾತ್ಸಲ್ಯಪ್ರಪೂರ್ಣರಾದ ಗುರುಗಳಾಗಿದ್ದರು. ಅವರಿಂದಾಗಿ ಯಾವುದೇ ವಿಷಯದಲ್ಲಿ ಸ್ವತಃ ಯೋಚಿಸಿ ತೀರ್ಮಾನ ಕೈಗೊಳ್ಳಬೇಕೆಂಬುದನ್ನು ಕಲಿತರು. ಮಾಸ್ತಿ ಅತ್ಯಂತ ಬುದ್ಧಿವಂತ ವಿದ್ಯಾರ್ಥಿ ಎಂದು ಹೆಸರು ಗಳಿಸಿದ್ದರು. ಟೇಟ್ ಸಾಹೇಬ ಮತ್ತು ಇನ್ನಿತರ ಅಧ್ಯಾಪಕರ ನೆಚ್ಚಿನ ವಿದ್ಯಾರ್ಥಿಯಾಗಿದ್ದರು. ಬಿ.ಎ. ಪರೀಕ್ಷೆಯ ಪ್ರವೇಶ ಪತ್ರ ನೀಡುವಾಗ ಟೇಟ್ ಸಾಹೇಬರು "Go and cover yourself and your college with glory" ಎಂದು ಹೇಳಿದರಂತೆ. ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆಯಾಗಿ ಚಿನ್ನದ ಪದಕ ಗಳಿಸಿದರು. ಈ ದಿನಗಳಲ್ಲೇ ಅವರ ತಾತ ತೀರಿಕೊಂಡರು.

೨

ಟೇಟ್ ಸಾಹೇಬರು ಅವರನ್ನು ಇಂಗ್ಲಿಷ್ ಲೆಕ್ಚರರ್ ಆಗಿ ನೇಮಿಸಿದರು. ಮೂರು ತಿಂಗಳ ದುಡಿಮೆಯಿಂದ ಬಂದ ಮುನ್ನೂರು ರೂಪಾಯಿ, ಮದ್ರಾಸಿನಲ್ಲಿ ಪ್ರೆಸಿಡೆನ್ಸಿ ಕಾಲೇಜ್‌ನಲ್ಲಿ ಎಂ.ಎ. ವ್ಯಾಸಂಗಕ್ಕೆ ಸೇರಲು ಅನುಕೂಲವಾಯಿತು. ಆದರೆ ಆ ವರ್ಷ ಅವರಿಗೆ ಪರೀಕ್ಷೆಗೆ ಕೂರಲಾಗಲಿಲ್ಲ, ಕಾರಣ ಆ ವರ್ಷ ಸರ್ಕಾರ ನಡೆಸಲು ತೀರ್ಮಾನಿಸಿದ್ದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂರಬೇಕೆಂದು ನಿರ್ಧರಿಸಿ, ತಯಾರಿ ನಡೆಸಲು ಬೆಂಗಳೂರಿಗೆ ಬಂದು ಬಿಟ್ಟರು. ಮುಂದೆ ಅವರು ಎಂ.ಎ. ಮುಗಿಸಿದರು. ತಮ್ಮ ಅಪಾರ ಪರಿಶ್ರಮ ಮತ್ತು ಪ್ರತಿಭೆಯಿಂದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಪ್ರಥಮ ಸ್ಥಾನ ಪಡೆದರು. ತಿಂಗಳಿಗೆ ಇನ್ನೂರು ರೂಪಾಯಿ ಸಂಬಳದ ಮೇಲೆ ಅಸಿಸ್ಟೆಂಟ್ ಕಮಿಷನರ್ ಆಗಿ ನೇಮಕ ಹೊಂದಿದರು. ಅವರ ಬದುಕಿನ ಬವಣೆ ಇಲ್ಲಿಗೆ ನೀಗಿತು. ಮಾಸ್ತಿಯವರದು ಮೊದಲಿನಿಂದಲೂ ಧ್ಯೇಯನಿಷ್ಠ ಬದುಕು. ಹಿಡಿದ ಗುರಿಯನ್ನು ಕೊನೆಯವರೆಗೂ ಛಲ ಹಿಡಿದು ಸಾಧಿಸುವ, – ಅವರಲ್ಲಿ ಎಳೆಯತನದಿಂದ ರೂಢ ಮೂಲವಾಗಿದ್ದ – ಪ್ರವೃತ್ತಿಯನ್ನೇ ಮುಂದಿನ ಅವರ ವೃತ್ತಿ ಜೀವನದಲ್ಲಿ ಹಾಗೂ ಅವರ ಪ್ರವೃತ್ತಿಯಾದ ಸಾಹಿತ್ಯಿಕ ಜೀವನದಲ್ಲಿ ಕಾಣುತ್ತೇವೆ. ತಮಗೆ ಒಪ್ಪಿಸಿದ, ಇಲ್ಲವೆ ತಮ್ಮ ಪಾಲಿಗೆ ಬಂದ ಯಾವುದೇ ಕೆಲಸವನ್ನು ಅತ್ಯಂತ ನಿಷ್ಠೆಯಿಂದ, ಸಮರ್ಪಕವಾಗಿ ಕೊನೆಮುಟ್ಟಿಸುವುದೇ ಅವರ ರೀತಿ. ಪ್ರಾಮಾಣಿಕತೆ

ಮತ್ತು ಸ್ವಾಭಿಮಾನ ಎರಡೂ ಅವರ ವ್ಯಕ್ತಿತ್ವದ ದೊಡ್ಡ ಗುಣಗಳು. ಅವರ ಸ್ವಭಾವ ಯಾವತ್ತೂ ಸ್ನೇಹ ಶೀಲ; ಉದಾರ, ನಡವಳಿಕೆ ಸೌಜನ್ಯಯುತ. ತಮಗೆ ನ್ಯಾಯವೆಂದು ಕಂಡದ್ದನ್ನು, ಸರಿ ಎನಿಸಿದ್ದನ್ನು ಮಾಡುವಲ್ಲಿ ಯಾರ ದಾಕ್ಷಿಣ್ಯಕ್ಕೂ ಒಳಗಾಗುತ್ತಿರಲಿಲ್ಲ. ನಿಯಮಕ್ಕೆ ವಿರುದ್ಧವಾದುದನ್ನು ಎಂದಿಗೂ ಮಾಡುತ್ತಿರಲಿಲ್ಲ. ಈ ಗುಣಗಳಿಂದಾಗಿ ಮಾಸ್ತಿಯವರು ತಮ್ಮ ಮೇಲಧಿಕಾರಿಗಳ ಗೌರವ, ಮೆಚ್ಚುಗೆ ಗಳಿಸಿದರು.

ಕೋಲಾರ, ಮಧುಗಿರಿ, ಚಿಕ್ಕಮಗಳೂರುಗಳಲ್ಲಿ ಸಬ್ ಡಿವಿಜನ್ ಅಧಿಕಾರಿಯಾಗಿ, ತುಮಕೂರು, ಚಿಕ್ಕಮಗಳೂರುಗಳಲ್ಲಿ ಜಿಲ್ಲಾಧಿಕಾರಿಯಗಿ, ಸೆಕ್ರೆಟೇರಿಯಟ್‌ನಲ್ಲಿ ಅಸಿಸ್ಟೆಂಟ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಸೆಕ್ರೆಟರಿಯಾಗಿ, ಸೆನ್ಸಸ್ ಸೂಪರಿಂಟೆಂಡೆಂಟ್ ಆಗಿ, ಮೈಸೂರು ಸರ್ಕಾರದ ಎಕ್ಸೈಸ್ ಕಮೀಷನರಾಗಿ ಕೆಲಸ ನಿರ್ವಹಿಸಿ ವಿಪುಲವೂ ವೈವಿಧ್ಯಮಯವೂ ಆದ ಆಡಳಿತಾನುಭವ ಪಡೆದರು. ಇದರ ವಿಸ್ತಾರವಾದ ನಿರೂಪಣೆ ಅವರ ಆತ್ಮವೃತ್ತದ ಬರಹವಾದ 'ಭಾವ'ದಲ್ಲಿ ಬರುತ್ತದೆ. ಸರ್ಕಾರದ ಉನ್ನತ ಸ್ಥಾನದ ಜವಾಬ್ದಾರಿ, ಗೌರವ, ಮರ್ಯಾದೆ ಎಲ್ಲವೂ ಅವರದಾಯಿತು.

ಮಹಾರಾಜರು ಅವರ ಸಾಹಿತ್ಯಿಕ ಮತ್ತು ಸಾರ್ವಜನಿಕ ಸೇವೆಯನ್ನು, ಮನ್ನಿಸಿ, ರಾಜಸೇವಾಪ್ರಸಕ್ತ ಎಂಬ ಬಿರುದನ್ನು ನೀಡಿ, ಅವರು ಮತ್ತು ಅವರ ಸಾಹಿತ್ಯ ಎಲ್ಲ ಕಾಲಕ್ಕೂ ಶಾಶ್ವತ ಎಂದು ಪ್ರಶಂಸೆ ಮಾಡಿದರು. ಅತ್ಯುನ್ನತ ಸ್ಥಾನವಾದ ಮಂತ್ರಿಪದವಿ ಇನ್ನೇನು ಬರುತ್ತದೆ ಎನ್ನುವಾಗ, ಜಾತೀಯ ರಾಜಕಾರಣದಿಂದಾಗಿ ಮಾಸ್ತಿಯವರ ಕೈ ತಪ್ಪಿ, ಅವರಿಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯ ಹಾಗೂ ಕಡಿಮೆ ಅರ್ಹತೆಯವರಿಗೆ ಸಿಕ್ಕಿತು. ಇದರಿಂದ ಮಾಸ್ತಿಯವರಿಗೆ ಆದ ನೋವು ಅಸದಳ. ತಮ್ಮ ಮನಸ್ಸಿಗೆ ಆದ ಅಪಾರ ವೇದನೆ, ತಳಮಳ, ಮನಸ್ಸಿನ ಗಲಿಬಿಲಿ, ಆಘಾತ ಎಲ್ಲವನ್ನೂ ಸಹಿಸಿಕೊಂಡು, ಸರ್ಕಾರದಲ್ಲಿ ಮುಂದುವರಿಯುವುದು, ಅವರ ಸ್ವಾಭಿಮಾನಕ್ಕೆ ಸರಿ ಕಾಣಲಿಲ್ಲ. ಅದುವರೆಗೂ ತಮ್ಮ ವೃತ್ತಿ ಜೀವನದಲ್ಲಿ ಯಾವತ್ತೂ ಆತ್ಮಗೌರವ ಕಾಯ್ದು ಕೊಂಡವರು; ತಮ್ಮ ನ್ಯಾಯಬದ್ಧ ಹಕ್ಕಿಗೆ ಚ್ಯುತಿ ಬಂದ ಈ ಸಂದರ್ಭದಲ್ಲಿ ಸ್ವಯಂ ನಿವೃತ್ತಿ ಪಡೆದುಕೊಂಡರು. ಯಾರೆಷ್ಟೇ ಒತ್ತಾಯ ಮಾಡಿದರೂ ಕೇಳಲಿಲ್ಲ. ೩೦ ವರ್ಷಗಳ ಸರ್ಕಾರಿ ಸೇವೆಯ ನಂತರ ೧೯೪೩ರಲ್ಲಿ ನಿವೃತ್ತರಾದರು.

೩

ಮಾಸ್ತಿಯವರು ವೃತ್ತಿ ಜೀವನದಲ್ಲಿ ವಿವಿಧ ಸ್ಥಳಗಳಲ್ಲಿ ವಿವಿಧ ಪ್ರಕಾರದ ಜನಗಳೊಂದಿಗೆ ಕೆಲಸ ಮಾಡಬೇಕಾಗಿ ಬಂದದ್ದರಿಂದ, ಅಪಾರ ಅನುಭವ

ಸಂಪತ್ತು ಅವರಿಗೊದಗಿತು. ಇದು ಅವರ ಸಾಹಿತ್ಯ ರಚನೆಗೆ ಪ್ರೇರಣೆಯಾದದ್ದಲ್ಲದೆ, ವಸ್ತುವನ್ನೊದಗಿಸುವ ತವನಿಧಿಯಾಯಿತು. ವ್ಯಕ್ತಿಸ್ವಭಾವಗಳನ್ನು ಚಿತ್ರಿಸಲು ಅನುವಾಯಿತು. ಇದೆಲ್ಲವನ್ನೂ ಅವರು ತಮ್ಮ "ಸಾಹಿತ್ಯ ಪ್ರೇರಣೆ" ಪುಸ್ತಕದಲ್ಲಿ ವಿವರಿಸಿದ್ದಾರೆ. ತಮ್ಮ ಬಿಡುವಿಲ್ಲದ ಕೆಲಸದ ಮಧ್ಯದಲ್ಲೂ ನಿರಂತರವಾಗಿ ಸಾಹಿತ್ಯರಚನೆ ಮಾಡುತ್ತಾ ಬಂದ ಅವರ ಸೃಜನಶೀಲತೆ ಬೆರಗುಗೊಳಿಸುಂಥದು. ಕಳೆದ ಐವತ್ತು ವರ್ಷಗಳಲ್ಲಿ ಅವರ ಒಂದಲ್ಲ ಒಂದು ಕೃತಿ ಪ್ರಕಟವಾಗದಿರುವ ವರ್ಷವಿಲ್ಲ. ೧೯೧೦-೧೧ ರ ಸುಮಾರಿನಲ್ಲೇ ಅವರ ಮೊದಲ ಕತೆ 'ರಂಗನ ಮದುವೆ' ರಚನೆಯಾಗಿತ್ತು, ಮುದ್ದಣನನ್ನು ಕುರಿತು ಇಂಗ್ಲಿಷಿನಲ್ಲಿ ಲೇಖನ ಬರೆದಿದ್ದರು. ಜೊತೆಗೆ ಇಂಗ್ಲಿಷಿನಲ್ಲಿ ಗಟ್ಟಿಗ ಎಂಬ ಭಾವನೆ ಇದ್ದದ್ದರಿಂದ, ಇಂಗ್ಲೀಷನಲ್ಲೇ ಯಾಕೆ ಬರವಣಿಗೆ ಮುಂದುವರಿಸಬಾರದು ಎಂದಿದ್ದ ಸಮಯದಲ್ಲಿ ಕೋಲಾರ ತಾಲ್ಲೂಕು ಮಲ್ಲಸಂದ್ರ ಗ್ರಾಮದಲ್ಲಿ ಜಮಾಬಂದಿ ಕಾಲದಲ್ಲಿ ಅವರಿಗಾದ ಒಂದು ಅನುಭವ ಅವರನ್ನು ಸಂಪೂರ್ಣವಾಗಿ ಕನ್ನಡದ ಕಡೆಗೆ ತಿರುಗಿಸಿತು. ಏನೋ ಒಂದು ತಪ್ಪು ಮಾಡಿದ್ದ ರೈತನನ್ನು "ಯಾಕಯ್ಯ ರೂಲ್ಸ್ ತಿಳಿದಿಲ್ಲವೇ?" ಎಂದು ಕೇಳಿದಾಗ, ಆತ ಹೇಳಿದ "ನಿಮ್ಮ ರೂಲ್ಸ್‌ಗೀಲ್ಸ್ ಎಲ್ಲಾ ಇಂಗ್ಲಿಷನಲ್ಲಿದೆ ಸ್ವಾಮಿ. ನಾವೇನು ತಿಳಿದುಕೊಳ್ಳೋದು?"

ರೈತನ ಈ ಮಾತು ಮಾಸ್ತಿಯವರ ಕಣ್ಣು ತೆರೆಸಿತು. – "ಇದು ಎಂಥ ಅನ್ಯಾಯ! ಈ ಜನ ನನ್ನನ್ನು ಸಾಕುತ್ತಿದೆ. ಇದಕ್ಕೆ ಸೇವೆ ಸಲ್ಲಿಸುವುದು ನನ್ನ ಕರ್ತವ್ಯ ಎಂಬ ಭಾವ ಅನುಭವಿಸಿದೆ."– ಎನ್ನುತ್ತಾರೆ. ಈ ಪ್ರಸಂಗ ಅವರನ್ನು ಪೂರ್ತಿ ಕನ್ನಡದ ಕಡೆಗೆ ತಿರುಗಿಸಿತು.

೧೯೨೦ ರಲ್ಲಿ ಅವರ ಮೊದಲ ಕಥಾ ಸಂಕಲನ ಪ್ರಕಟವಾಯಿತು. ಎ.ಆರ್.ಕೃ. ಅವರು ಪ್ರಬುದ್ಧ ಕರ್ಣಾಟಕದಲ್ಲಿ ಶ್ರೇಷ್ಠ ಸಾಹಿತ್ಯವೆಂದು ಕೊಂಡಾಡಿದರು. ಮಾಸ್ತಿಯವರಿಗೆ ಅದು ಅಪಾರ ಆತ್ಮಸ್ಥೈರ್ಯ ನೀಡಿತು.

ಕನ್ನಡ ನವೋದಯದೊಂದಿಗೆ ಮಾಸ್ತಿಯವರ ಬದುಕು ಬೆಸೆದುಕೊಂಡು ಬಿಟ್ಟಿತು. ಕನ್ನಡಕ್ಕಾಗಿ ಅವರ ಬದುಕು ಸಮರ್ಪಿತವಾಯಿತು. ಅವರು ಸರ್ಕಾರಿ ಸೇವೆಯಲ್ಲಿರುವಾಗಲೇ ಅವರ ಆರು ಕಥಾಸಂಕಲನಗಳು, ಸುಬ್ಬಣ್ಣ, ಕಥನ ಕವನಗಳು, ಶ್ರೀರಾಮ ಪಟ್ಟಾಭಿಷೇಕ ಬಿಟ್ಟು ಬಹುತೇಕ ಕಾವ್ಯ, ಪ್ರಮುಖ ನಾಟಕಗಳು, ಆದಿಕವಿ ವಾಲ್ಮೀಕಿ, ವಿಮರ್ಶೆಯ ನಾಲ್ಕು ಭಾಗಗಳು ಇವೆಲ್ಲ ಪ್ರಕಟವಾದುವು. ಜನಪದ ಸಾಹಿತ್ಯ ಕುರಿತು ೧೯೨೭ರಷ್ಟು ಹಿಂದೆಯೇ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ನೀಡಿದರು. ಆಚಾರ್ಯ ಶ್ರೀಯವರು,

ಎ.ಆರ್.ಕೃ., ಟಿ.ಎಸ್.ವೆಂ, ಮುಂತಾದವರ ಸಂಪರ್ಕದಿಂದ ಕನ್ನಡ ಅವರ ಮಂತ್ರವಾಯಿತು. ಸರ್ಕಾರಿ ಅಧಿಕಾರಿಗಳು ಇವರ ಕನ್ನಡ ಪ್ರೇಮ ಅತಿಯಾಯಿತು ಎಂದು ಆಡಿಕೊಳ್ಳುವಷ್ಟು ಹೆಚ್ಚಾಯಿತು. ಕನ್ನಡದಲ್ಲಿ ಗ್ರಂಥ ಪ್ರಕಟಣೆಗೆ, ಉದಯೋನ್ಮುಖ ಲೇಖಕರಿಗೆ ಒತ್ತಾಸೆ ನೀಡುವ ಸಲುವಾಗಿ ಎಸ್.ಜಿ. ಶಾಸ್ತ್ರೀ, ಸಿ.ಬಿ.ರಾಮರಾಯರು ಮುಂತಾದವರ ಸಹಕಾರದಿಂದ ಲೇಖಕರ ಸಹಾಯನಿಧಿ ಸ್ಥಾಪಿಸಿ ಸೋದರ ಸಾಹಿತಿಗಳ ಕೃತಿಗಳು ಬೆಳಕು ಕಾಣಲು ಕಾರಣವಾದರು. ಕುವೆಂಪು. ಅವರ 'ಕೊಳಲು' ಬೇಂದ್ರೆಯವರ 'ಗರಿ' ಗೊರೂರರ 'ಹಳ್ಳಿಯ ಚಿತ್ರಗಳು', ಪುತಿನ ಅವರ 'ಹಣತೆ', ಈ ಮೊದಲಾದ ಪುಸ್ತಕಗಳು ಈ ನಿಧಿಯಿಂದ ಪ್ರಕಟವಾದವು. ಜಿ.ಪಿ. ರಾಜರತ್ನಂ ಅವರು ಕಛೇರಿಯಲ್ಲಿ ಕೆಲಸ ಕೇಳಲು ಬಂದಾಗ, ಅವರಿಗೆ ಗುಮಾಸ್ತನ ಕೆಲಸ ಕೊಡದೆ, ಅವರಿಗೆ ಫಾಹಿಯಾನ್, ಹ್ಯೂಯನ್‌ತ್ಸಾಂಗ್ ಪ್ರವಾಸದ ವರದಿ, ವಾಲ್ಟೇರನ 'ಕ್ಯಾಂಡಿಡ್' ಗಳನ್ನು ಅನುವಾದಿಸುವ ಕೆಲಸ ಕೊಟ್ಟು 'ಚೀನಾ ದೇಶದ ಬೌದ್ಧ ಯಾತ್ರಿಕರು' ಹೊರಬರಲು, ತನ್ಮೂಲಕ ಬೌದ್ಧಸಾಹಿತ್ಯದ ಕಡೆ ಅವರ ಆಸಕ್ತಿ ಕೆರಳಲು ಕಾರಣರಾದರು.

ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಮೊದಲಿನಿಂದ ಸಂಪರ್ಕವಿತ್ತು. ೧೯೪೨ರಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಐದು ವರ್ಷಕಾಲ ಕೆಲಸ ಮಾಡಿದರು. ಅದುವರೆಗೆ ಕೇವಲ ೬೦೦ ಇದ್ದ ಸದಸ್ಯರ ಸಂಖ್ಯೆ ೨,೫೦೦ಕ್ಕೆ ಏರಿತು. ಪರಿಷತ್ತಿನ ಕೆಲಸಕ್ಕಾಗಿ ನಾಡಿನ ಒಳಗೂ ಹೊರಗೂ ಸ್ವಂತ ಹಣವನ್ನು ಹಾಕಿಕೊಂಡು ಸುತ್ತಾಡಿದರು. ಸಾಹಿತಿಗಳಿಂದ, ಸರ್ಕಾರಿ ಅಧಿಕಾರಿಗಳಿಂದ ಟೀಕೆಗಳು ಬಂದರೂ ಜಗ್ಗದೆ ಸಂಸ್ಥೆಯನ್ನು ಬೆಳೆಸಿದರು.

ನಿವೃತ್ತಿಯ ನಂತರವೂ ತಮ್ಮೆಲ್ಲ ವೇಳೆ ಶ್ರಮವನ್ನು, ಸಾಹಿತ್ಯ ರಚನೆಗೆ ಮೀಸಲಿಟ್ಟರು. ಅವರ ಎರಡು ಪ್ರಸಿದ್ಧ ಕಾದಂಬರಿಗಳು, ೯ ಕಥಾಸಂಕಲನಗಳು, 'ನವರಾತ್ರಿ' ಕಥನ ಕವನದ ಮೂರು ಭಾಗಗಳು, ನಾಟಕಗಳು, 'ಶ್ರೀ ರಾಮಪಟ್ಟಾಭಿಷೇಕ' ಕಾವ್ಯ ಈ ಮುಂತಾದ ಮುಖ್ಯ ಕೃತಿಗಳೆಲ್ಲಾ ರಚಿತವಾದದ್ದು ನಿವೃತ್ತಿಯ ಅನಂತರದಲ್ಲಿ.

ಅವರ ಕನ್ನಡದ ಕೆಲಸ ಕಾರ್ಯಗಳು, ನಿವೃತ್ಯಾನಂತರದ ದಿನಗಳಲ್ಲಿ ಅಖಿಲ ಭಾರತ ವ್ಯಾಪ್ತಿಯನ್ನು ಪಡೆದುಕೊಂಡವು. ಪಿ.ಇ.ಎನ್. ಸಂಸ್ಥೆಯೊಂದಿಗೆ ಸಂಪರ್ಕ ಬೆಳೆಸಿಕೊಂಡರು. ೧೯೬೪ರಲ್ಲಿ ಭಾರತೀಯ ಸಾಹಿತ್ಯ ವಿಭಾಗದ ಉಪಾಧ್ಯಕ್ಷರಾಗಿ, ೧೯೭೭ರಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದರು. ಕೇಂದ್ರ ಸಾಹಿತ್ಯ ಅಕಾದೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸಿದರು.

ಕರ್ನಾಟಕದ ಏಕೀಕರಣ ಅವರ ಬಾಳಿನ ಉಸಿರಾಗಿತ್ತು. ೧೯೪೨ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದಾಗಿನಿಂದಲೂ ಅದಕ್ಕಾಗಿ ಕೆಲಸ ಮಾಡಿದರು. ಕರ್ನಾಟಕದ ಗಡಿ ಭಾಗಗಳಲ್ಲೆಲ್ಲಾ ಸಂಚರಿಸಿ ಭಾಷಣ ಮಾಡಿದರು. ಈ ವಿಷಯದಲ್ಲಿ ವಿರೋಧ ಮಾಡಿದವರನ್ನು ಎಂಥಾ ಆಪ್ತರಾದರೂ ಟೀಕಿಸಲು ಹಿಂಜರಿಯಲಿಲ್ಲ. ಭಾಷಾವಾರು ಪ್ರಾಂತ್ಯ ರಚನೆ ವಿರೋಧಿಸಿ ಭಾಷಣ ಮಾಡಿದ ರಾಜಾಜಿ, ಏಕೀಕರಣ ವಿರೋಧಿಸುತ್ತಿದ್ದ ಡಿ.ವಿ.ಜಿ. ಇವರ ವಿರುದ್ಧ 'ಜೀವನ' ಪತ್ರಿಕೆಯ ಸಂಪಾದಕೀಯದಲ್ಲಿ ಟೀಕಿಸಿದರು. ಕನ್ನಡದ ಸ್ಥಾನ ಮಾನದ ವಿಷಯ ಬಂದಾಗ ಯಾರಿಗೂ ಸೊಪ್ಪು ಹಾಕಲಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯ ೧೯೫೬ರಲ್ಲಿ ಘಟಿಕೋತ್ಸವ ಭಾಷಣ ಮಾಡಲು ಆಹ್ವಾನಿಸಿ, ಗೌರವ ಡಾಕ್ಟರೇಟ್ ನೀಡಬೇಕೆಂದು ಇಚ್ಛೆ ವ್ಯಕ್ತಪಡಿಸಿದಾಗ, ಘಟಿಕೋತ್ಸವ ಭಾಷಣ ಕನ್ನಡದಲ್ಲಾದರೆ ಆಗಬಹುದು ಎಂದು ಷರತ್ತು ಹಾಕಿ ಅದರಂತೆ ಕನ್ನಡದಲ್ಲಿ ಭಾಷಣ ಮಾಡಿದರು. ಅದೇ ಕನ್ನಡದ ಮೊದಲ ಘಟಿಕೋತ್ಸವ ಭಾಷಣ. ಅದನ್ನು ಮಾಡಿದವರು ಮಾಸ್ತಿಯವರು. ೧೯೪೬ರಲ್ಲಿ ಮದ್ರಾಸಿನಲ್ಲಿ ನಡೆದ ದಕ್ಷಿಣ ಭಾರತ ಸಾಹಿತ್ಯಗಳ ಸಮ್ಮೇಳನದ ಅಧ್ಯಕ್ಷತೆಗೆ ಮಾಸ್ತಿಯವರನ್ನು ಆಹ್ವಾನಿಸಲಾಗಿತ್ತು. ವ್ಯವಸ್ಥಾಪಕರು ಹಿಂದಿ ಭಾಷಣಕ್ಕೆ ಒತ್ತಾಯಿಸಿದರೆ ಮಾಸ್ತಿ ಹೋಗದೆ ಕನ್ನಡದಲ್ಲಿ ಭಾಷಣ ಬರೆದು ಕಳಿಸಿದರು.

ಮಾಸ್ತಿಯವರ ಕನ್ನಡ ಸೇವೆಗೆ ತಡವಾಗಿಯಾದರೂ ಯೋಗ್ಯ ಮನ್ನಣೆ ಸಂದಿದೆ. ೧೯೨೯ರಷ್ಟು ಹಿಂದೆಯೇ ಬೆಳಗಾಂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಅವರನ್ನೊಲಿದು ಬಂದಿತ್ತು. ೧೯೫೪ರಲ್ಲಿ ಪೂನಾದಲ್ಲಿ ನಡೆದ ವಿಶ್ವವಿದ್ಯಾಲಯ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರಭಾಷಾ ವಿಭಾಗದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯ ೧೯೫೬ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ೧೯೭೭ರಲ್ಲಿ ಗೌರವ ಡಾಕ್ಟರೇಟ್ ನೀಡಿವೆ. ೧೯೬೧ರಲ್ಲಿ ಅಖಿಲ ಭಾರತ ಸಾಹಿತಿಗಳ ಸಮ್ಮೇಳನದ ಅಧ್ಯಕ್ಷತೆ, ೧೯೬೯ರಲ್ಲಿ 'ಸಣ್ಣ ಕತೆಗಳು' (೧೨-೧೩) ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೬೮ರಲ್ಲಿ ಮೈಸೂರಿನಲ್ಲಿ ಸಾರ್ವಜನಿಕರ ಸನ್ಮಾನ, ೭೩ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್, ೧೯೭೨ರಲ್ಲಿ "ಶ್ರೀನಿವಾಸ" ಅಭಿನಂದನ ಗ್ರಂಥ ಸಮರ್ಪಣೆ, ೧೯೮೩ರಲ್ಲಿ ಇವೆಲ್ಲಕ್ಕೆ ಕಳಶವಿಟ್ಟಂತೆ ಮಾಸ್ತಿಯವರ ಸಮಗ್ರ ಸಾಹಿತ್ಯ ಸಾಧನೆಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ೮೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ಇವೆಲ್ಲ ನಾಡು ಮಾಸ್ತಿಗೆ ಸಲ್ಲಿಸಿರುವ ಮನ್ನಣೆಗಳು. ಮಾಸ್ತಿಯವರಂತೂ ಸನ್ಮಾನ ಬಹುಮಾನಗಳ ಬಗ್ಗೆ ಎಂದಿನಿಂದಲೂ ನಿರ್ಲಿಪ್ತರು.

೪

ಮಾಸ್ತಿಯವರ ಕೌಟುಂಬಿಕ ಬದುಕು ನೆಮ್ಮದಿಯಿಂದ ಕೂಡಿತ್ತು. ಬಿ.ಎ. ಓದುತ್ತಿರುವಾಗಲೇ ಮದುವೆಯಾಗಿದ್ದ ಅಂಬಿಲ್ ಕೃಷ್ಣಸ್ವಾಮಿ ಅಯ್ಯಂಗಾರರ ಮಗಳು ಪಂಕಜಮ್ಮನವರು ಎಲ್ಲ ಅರ್ಥದಲ್ಲೂ ಸಹ ಧರ್ಮಿಣಿ. ಮಾಸ್ತಿಯವರ ಕೃತಿಗಳನೇಕವನ್ನು ಹೇಳುತ್ತಿದ್ದಂತೆಯೇ ಬರೆದುಕೊಂಡು ಸಾಹಿತ್ಯಕ ಜೀವನದುದ್ದಕ್ಕೂ ಜೊತೆಯಾಗಿ ನಿಂತಿದ್ದ ಅವರು ೧೯೬೮ರಲ್ಲಿ ತೀರಿಕೊಂಡಾಗ ಮಾಸ್ತಿಗೆ ಒಂದು ಪಾರ್ಶ್ವವೇ ಬಿದ್ದಂತಾಯಿತು. ಅವರದ್ದು ಆದರ್ಶ ದಾಂಪತ್ಯ. ಆರು ಜನ ಹೆಣ್ಣು ಮಕ್ಕಳು. ಎಲ್ಲರೂ ನೆಮ್ಮದಿಯಾಗಿ ಸಂಸಾರ ಮಾಡಿಕೊಂಡಿದ್ದಾರೆ. ಅವರ ಎರಡನೆಯ ಮಗಳು ಶಾಂತಮ್ಮ ಅಮೇರಿಕನ್ ಕೈಹಿಡಿದು, ಈಚೆಗೆ ತೀರಿಕೊಂಡರು. ಅವರ ಮೊಮ್ಮಕ್ಕಳು ಓದಿ ವಿದ್ಯಾವಂತರಾಗಿ ಒಳ್ಳೆಯ ಕೆಲಸಗಳಲ್ಲಿದ್ದಾರೆ. ಒಟ್ಟಾರೆ ಮಾಸ್ತಿಯವರದು ಸಂತೃಪ್ತ ಬದುಕು. ತೊಂಬತ್ತೈದು ವರ್ಷಗಳ ತುಂಬು ಬಾಳನ್ನು ಬಾಳಿ ೬-೬-೧೯೮೬ರಂದು ತಾವು ಹುಟ್ಟಿದ ದಿನಾಂಕದಂದೇ ಇಹದ ಬದುಕನ್ನು ಮುಗಿಸಿ ಸಾವಿನಲ್ಲೂ ದಾಖಲೆ ಮಾಡಿದರು ಮಾಸ್ತಿಯವರು.

೫

ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸುವುದರ ಜೊತೆ ಜೊತೆಗೆ ಕನ್ನಡ ನಾಡಿನ ಸಾಂಸ್ಕೃತಿಕ ಬದುಕನ್ನು ಸಂಪದ್ಯುಕ್ತಗೊಳಿಸಿದ ಶ್ರೀನಿವಾಸರು, ತಾವೇ ಸಂಸ್ಕೃತಿಯ ಸಾಕಾರ ಪುರುಷರೆಂಬಂತಿದ್ದರು. ಅವರ ಬದುಕು ಬೇರೆಯಲ್ಲ. ಬರಹ ಬೇರೆಯಲ್ಲ. ವೈಯಕ್ತಿಕ ಜೀವದಲ್ಲಿ ಅತ್ಯಂತ ಶ್ರದ್ಧಾಳು. ದೇವರಲ್ಲಿ ದೃಢವಾದ ನಂಬಿಕೆ, ಭಕ್ತಿ. ತಮ್ಮ ಇಡೀ ಬದುಕು ದೈವವೆಂಬ ರೂವಾರಿ ಕಡೆದು ನಿರ್ಮಿಸಿದ್ದು ಎಂಬ ಭಾವನೆ. ಬಡತನದಲ್ಲಿ ಹುಟ್ಟಿ ಬೆಳೆದದ್ದು, ದೇವರ ಬಗೆಗಿನ ಅಹೇತುಕ ನಂಬಿಕೆ ಇವುಗಳಿಂದ ಅವರ ಮನಸ್ಸು ಎಲ್ಲರ ವಿಷಯಕ್ಕೆ ಪ್ರೀತಿ, ಅಕ್ಕರೆ, ಅಂತಃಕರಣ, ಸಹಾನುಭೂತಿ ಹೊಂದಿತ್ತು. ಅವರದು ಅತ್ಯಂತ ಮಾನವೀಯವಾದ ವ್ಯಕ್ತಿತ್ವ. ತಮ್ಮ ಸಂಪಾದನೆಯಲ್ಲಿ ವಿದ್ಯಾರ್ಥಿಗಳಿಗೆ, ಸಾಹಿತಿಗಳಿಗೆ ಎಂದೇ ಹಣ ಮೀಸಲಾಗಿಡುತ್ತಿದ್ದರಂತೆ, ಕಾರಣ ತಾವು ವಾರಾನ್ನದಿಂದ ವಿದ್ಯೆ ಕಲಿತವರು ಎಂಬ ಋಣಭಾರ. ಆದರೆ ಯಾರಿಗೇ ಸಹಾಯ ಮಾಡಿದರೂ ಸಹಾಯ ಪಡೆದವರಿಗೆ ಕಿರಿಕಿರಿ ಎನ್ನಿಸದ ರೀತಿಯಲ್ಲಿ ಮಾಡುತ್ತಿದ್ದರು.

ನಡೆನುಡಿಗಳಲ್ಲಿ ಅತ್ಯಂತ ಸೌಜನ್ಯಶೀಲ; ತುಂಬ ನಮ್ರರು. ಯಾರಿಗೂ ನೋವುಂಟುಮಾಡಬಾರದೆಂಬ ಮನೋಭಾವ. ವೈಯಕ್ತಿಕ ಭಿನ್ನಾಭಿಪ್ರಾಯಗಳು, ಸ್ನೇಹ ವಿಶ್ವಾಸಗಳಿಗೆ ಎರವಾಗುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ, ಅತ್ಯಂತ ಪ್ರಾಮಾಣಿಕ, ನೇರನಡೆ. ಅದೇ ಸಮಯಕ್ಕೆ ಅತ್ಯಂತ ಸ್ವಾಭಿಮಾನಿ. ಆತ್ಮಗೌರವ ಕಾಯ್ದುಕೊಳ್ಳುವ ಬಗ್ಗೆ ಕಟ್ಟೆಚ್ಚರ. ಪರಂಪರಾಗತ ಧರ್ಮದಲ್ಲಿ ಪೂರ್ಣ ನಂಬುಗೆ. ಹಾಗೆಂದು ಕುರುಡು ನಂಬಿಕೆ ಇರಲಿಲ್ಲ, ತಾವು ಭಾರತೀಯನಾಗಿರುವುದಕ್ಕೆ ಹಿಂದುವಾಗಿರುವುದಕ್ಕೆ ಅಪಾರ ಹೆಮ್ಮೆ, ಸಣ್ಣತನಕ್ಕೆ ಅಲ್ಪತನಕ್ಕೆ ಅವರಲ್ಲಿ ಎಡೆಯಿರಲಿಲ್ಲ, ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡೂ ತುಂಬ ಗೌರವಿಸಬಹುದಾದಂಥ ವ್ಯಕ್ತಿತ್ವ ಮಾಸ್ತಿಯವರದು.

ಅಧ್ಯಾಯ ೨

ಸಣ್ಣ ಕತೆಗಳು

ಸಣ್ಣಕತೆಯ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸಿದ ಮಾಸ್ತಿಯವರದು ಆ ಕ್ಷೇತ್ರದಲ್ಲಿ ಅದ್ಭುತ ಸಾಧನೆ. ಹತ್ತಿರ ಹತ್ತಿರ ಏಳು ದಶಕಗಳ ಕಾಲ ಈ ಕ್ಷೇತ್ರದಲ್ಲಿ ಕೆಲಸ ಮಾಡಿ ಸಣ್ಣ ಕತೆಯ ಸಾಧ್ಯತೆಗಳನ್ನು ವಿಸ್ತರಿಸಿ ಅದಕ್ಕೊಂದು ಸುನಿಶ್ಚಿತರೂಪ ಕೊಟ್ಟು ಅದನ್ನೊಂದು ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ನೆಲೆಗೊಳಿಸಿದವರು ಮಾಸ್ತಿಯವರು. ಮಾಸ್ತಿಯವರಿಗಿಂತ ಮುಂಚೆ ಪಂಜೆಯವರು, ಎಂ. ಎನ್. ಕಾಮತರು, ಕೆರೂರು ವಾಸುದೇವಾಚಾರ್ಯರು, ಇವರೆಲ್ಲ ಕನ್ನಡದಲ್ಲಿ ಕತೆಗಳನ್ನು ಬರೆದರಾದರೂ ಮಾರ್ಗಪ್ರವರ್ತಕರೆಂಬ ಅರ್ಥದಲ್ಲಿ ಮಾಸ್ತಿಯವರು ನಿಶ್ಚಯವಾಗಿಯೂ ಸಣ್ಣಕತೆಗಳ ಜನಕ.

ಕತೆ ಹೇಳುವುದು ಮನುಷ್ಯನ ಜನ್ಮಜಾತವಾದ ಸ್ವಭಾವ. ಭಾರತೀಯ ಸಾಹಿತ್ಯದಲ್ಲಿ ಹಾಗೂ ಕನ್ನಡದಲ್ಲಿ ಕಥಾ ಸಾಹಿತ್ಯಕ್ಕೇನೂ ಬರವಿಲ್ಲ. ಪಂಚತಂತ್ರ, ಹಿತೋಪದೇಶ, ಕಥಾಸರಿತ್ಸಾಗರ ಇವುಗಳಲ್ಲದೆ ಜೈನ ಧಾರ್ಮಿಕ ಕಥಾ ಸಂಗ್ರಹಗಳಾದ ಹರಿಷೇಣನ ಬೃಹತ್ಕಥಾ ಕೋಶ, ಭಗವತೀ ಆರಾಧನ, ಅಂತೇ ಕನ್ನಡದಲ್ಲಿ ವಡ್ಡಾರಾಧನೆ, ಧರ್ಮಾಮೃತ ಮೊದಲಾದ ಬರಹಗಳು, ಬುದ್ಧಜಾತಕ ಕತೆಗಳು, ಹಾಗೂ ಎಲ್ಲ ಭಾಷೆಗಳಲ್ಲಿರುವ ಜನಪದ ಕತೆಗಳು ಇತ್ಯಾದಿ. ಆದರೆ ಆಧುನಿಕ

ಅರ್ಥದಲ್ಲಿ ನಾವು 'ಸಣ್ಣಕತೆ' ಎಂದು ಕರೆಯುತ್ತಿರುವುದು ಪಶ್ಚಿಮದ ಕೊಡುಗೆ. ಈ ಶತಮಾನದ ಪ್ರಾರಂಭದಲ್ಲಿ ನಮ್ಮ ಸಾಹಿತ್ಯ ಪಶ್ಚಿಮದ ಆಧುನಿಕ ಸಣ್ಣ ಕತೆಗಳ ಸಂಪರ್ಕಕ್ಕೆ ಬಂದದ್ದರ ಪರಿಣಾಮವಾಗಿ ಮೂಡಿದಂಥದು. ಆದರೆ ಅದು ಪೂರ್ಣವಾಗಿ ಪಶ್ಚಿಮದ ಅನುಕರಣೆಯಾಗಿ ಬರಲಿಲ್ಲ. ಭಾರತೀಯ ಕಥಾಪರಂಪರೆಯ ಕೆಲವೊಂದು ವಿಶಿಷ್ಟ ಅಂಶಗಳನ್ನು ಅಳವಡಿಸಿಕೊಂಡು ಬೆಳೆಯಿತು. ಈ ಬೆಳವಣಿಗೆಯಲ್ಲಿ ಮಾಸ್ತಿಯವರು ಮಹತ್ವದ ಪಾತ್ರವಹಿಸಿದರು.[೧]

ಮಾಸ್ತಿಯವರಿಗೆ ಕನ್ನಡದಲ್ಲಿ ಕತೆಗಳನ್ನು ಬರೆಯಲು ಮೂಲ ಪ್ರೇರಣೆ ದೊರೆತದ್ದು 'ಸ್ಟ್ರಾಂಡ್' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕತೆಗಳನ್ನು ಓದಿ. ರೂಪ, ಬಂಧಗಳ ಮಟ್ಟಿಗೆ ಇಂಗ್ಲಿಷ್ ಸಣ್ಣಕತೆಗಳಿಂದ ಸ್ಫೂರ್ತಿ ಪಡೆದಿದ್ದರೂ ಅವುಗಳ ಹೂರಣ, ನಿರೂಪಣಾ ವಿಧಾನ, ಜೀವನಾನುಭವ, ಜೀವದರ್ಶನ ಎಲ್ಲವೂ ಪೂರ್ತಿಯಾಗಿ ಮಾಸ್ತಿಯವರದೇ.

ಮಾಸ್ತಿಯವರ ಕಥಾ ಜಗತ್ತು ದಿಗ್ಭ್ರಮೆಗೊಳಿಸುವಷ್ಟು ಹಿರಿದಾದ್ದು, ವೈವಿಧ್ಯಪೂರ್ಣವಾದದ್ದು, ವ್ಯಾಪಕವಾದದ್ದು. ಒಟ್ಟಾರೆ ಹದಿನೈದು ಕಥಾ ಸಂಗ್ರಹಗಳಲ್ಲಿ ಒಂದು ನೂರರ ಸಂಖ್ಯೆಯನ್ನು ತಲುಪಿರುವ ಈ ಕತೆಗಳ ವಸ್ತು ವೈವಿಧ್ಯ, ಹಾಸು ಬೀಸುಗಳು, ಅನುಭವ ಲೋಕ ಎಲ್ಲವೂ ಅನ್ಯಾದೃಶ. ಸಾಮಾಜಿಕ ಐತಿಹಾಸಿಕ, ಪೌರಾಣಿಕ ಹೀಗೆ ಎಲ್ಲ ರೀತಿಯ ಕತೆಗಳನ್ನು ಮಾಸ್ತಿ ಬರೆದಿದ್ದಾರೆ. ಒಂದೊಂದು ಕತೆಯ ಮೂಲಕವೂ ಜೀವನದ ಬೇರೆ ಬೇರೆ ಮುಖಗಳ ದರ್ಶನವನ್ನು ಮಾಡಿಸುತ್ತ ಒಟ್ಟಾರೆಯಾಗಿ ಸಮೃದ್ಧ ಬದುಕಿನ ವೈವಿದ್ಯ ಪೂರ್ಣ ಚಿತ್ರಣ ನೀಡುತ್ತಲೇ ಬದುಕಿನ ಸಮಗ್ರವಾದ ದರ್ಶನವನ್ನು ನೀಡುವುದರತ್ತ ಮಾಸ್ತಿಯವರ ಪ್ರಯತ್ನವಿದೆ. ಸಾಮಾಜಿಕ ಸಮಸ್ಯೆಗಳು, ಗಂಡು ಹೆಣ್ಣಿನ ಆಕರ್ಷಣೆ, ದಾಂಪತ್ಯದ ನೋವು ನಲಿವುಗಳು, ಮನುಷ್ಯನ ಘನತೆ, ತ್ಯಾಗ, ನ್ಯಾಯಪರತೆ, ಔದಾರ್ಯ, ಸ್ನೇಹ, ಪ್ರೀತಿ, ಮಾನವ ಕರುಣೆ, ಮನುಷ್ಯನ ಸ್ವಾರ್ಥ, ದೌರ್ಬಲ್ಯ, ಸಣ್ಣತನ ಇವುಗಳನ್ನು ಬಿಂಬಿಸುವಂಥ ಕತೆಗಳು, ಸಂಸ್ಕೃತಿದರ್ಶನದ ಚಿತ್ರಗಳು, ಪರಂಪರಾಗತ ಸದ್ ಮೌಲ್ಯಗಳನ್ನು ಎತ್ತಿ ಹಿಡಿಯುವಂಥ ಪ್ರಸಂಗಗಳ ಚಿತ್ರ, ಸಾರ್ಥಕ ಬದುಕಿನ ರೀತಿ, ಹೆಣ್ಣಿನ ಪಾತಿವ್ರತ್ಯ, ಮಮತೆ ವಾತ್ಸಲ್ಯ, ಸಂಯಮ ಪ್ರೀತಿ ಇವುಗಳನ್ನು ಕೀರ್ತಿಸುವಂಥ ಸಂದರ್ಭದ ಚಿತ್ರಗಳು ಇವನ್ನೆಲ್ಲ ಮಾಸ್ತಿಯವರ ಕತೆಗಳು ಒಳಗೊಳ್ಳುತ್ತವೆ.

ಮಾನವತಾವಾದದ ಉದಾರವಾದೀ ಪರಂಪರೆಗೆ ಸೇರಿದವರು ಮಾಸ್ತಿಯವರು. ಅವರ ಕತೆಗಳಲ್ಲಿ ಎಲ್ಲ ವರ್ಗ, ವರ್ಣಗಳ ಜನರು ಬರುತ್ತಾರೆ.

ಆದರೆ ಎಲ್ಲದರಲ್ಲೂ, ಎಲ್ಲ ಕಡೆಯೂ ಮನುಷ್ಯನ ಘನತೆಯನ್ನು, ಉದಾತ್ತತೆಯನ್ನು ಎತ್ತಿಹಿಡಿಯುವುದೇ, ಮಾಸ್ತಿಯವರ ಉದ್ದೇಶ. ಇದರಿಂದಾಗಿಯೇ ಅವರ ಕತೆಗಳಲ್ಲಿ ಬರುವ ಸಾಮಾನ್ಯರಲ್ಲಿ ಸಾಮಾನ್ಯರಾದ ನೊಂದ ಜೀವಿಗಳು ಕೂಡ ಸೋಲುವುದಿಲ್ಲ. ವಿಷಣ್ಣರಾಗುವುದಿಲ್ಲ. ಅವರು ತಮ್ಮ ಅಂತಃಶಕ್ತಿಯ ಬಲದಿಂದ ದುಃಖ ದುಮ್ಮಾನಗಳನ್ನು ಮೆಟ್ಟಿನಿಲ್ಲುವ ಶಕ್ತಿಯನ್ನು ಬಹು ಕಷ್ಟದಿಂದ ಗಳಿಸಿರುವಂಥವರು. ವೆಂಕಟಿಗ, ವೆಂಕಟಶಾಮಿ, ಜೋಗ್ಯೋರ ಅಂಜಪ್ಪ, ಉಗ್ರಪ್ಪ, ಆಚಾರ್ಯರ ಪತ್ನಿ, ಶಾಲೆಯ ಆಚಾರ್ಯರು, ಮೇಷ್ಟರ ಹೆಂಡತಿ ಕತೆಯ ಮೇಷ್ಟು, ಚಟ್ಟೇಕಾರ ತಾಯಿ, ಗೌತಮಿ, ಇವರೆಲ್ಲ ಅಂಥವರು. ದಿನಿತ್ಯದ ಬದುಕಿನಲ್ಲಿ ನಾವು ಕಾಣಬಹುದಾದ ಇಂಥ ಸಾಮಾನ್ಯ ವ್ಯಕ್ತಿಗಳನ್ನೇ ತಮ್ಮ ಕಥಾವ್ಯಕ್ತಿಗಳನ್ನಾಗಿ ಮಾಡಿಕೊಂಡು, ಅವರ ಬದುಕಿನಲ್ಲಿರಬಹುದಾದ ಅಸಾಮಾನ್ಯತೆಗಳನ್ನು ಗುರುತಿಸುತ್ತಾ ಹೋಗುತ್ತಾರೆ. ಕುರ್ತುಕೋಟಿಯವರು ಹೇಳಿದಂತೆ-"ನಾವು ದಿನನಿತ್ಯ ಓಡಾಡುವ ನೆಲದ ಕೆಳಗೇ ಭೂಗರ್ಭಶಾಸ್ತ್ರಜ್ಞರು ಬಂಗಾರದ ನೆಲೆಯನ್ನು ಗುರುತಿಸುವಂತೆ ಶ್ರೀನಿವಾಸರು, ಈ ವ್ಯಕ್ತಿಗಳ ಹಿಂದಿನ ಉನ್ನತಿಯನ್ನು ತಟ್ಟನೆ ಗುರುತಿಸುತ್ತಾರೆ."[೨]. ಮನುಷ್ಯನ ಘನತೆ ಉನ್ನತಿಗಳನ್ನು ಎತ್ತಿಹಿಡಿಯುವ ಈ ಮಾನವತಾವಾದಿ ದೃಷ್ಟಿಕೋನ ಮಾಸ್ತಿಯವರ ಕಥಾಸಾಹಿತ್ಯದಲ್ಲಿ ಅತ್ಯಂತ ಸಾರ್ಥಕವಾಗಿ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ.

ಸಣ್ಣಕತೆಗಳನ್ನು ಬರೆಯುವುದರಲ್ಲಿ ಮಾಸ್ತಿಯವರಿಗಿರುವ ಉದ್ದೇಶ ತೀರ ಸ್ಪಷ್ಟ. ಅದೆಂದರೆ, "ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸಿರುವ ಚಿತ್ರಗಳನ್ನು ಕೊಡುವುದು. ಇಂದಿನ, ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ ಬೇರೆ ಹತ್ತು ರಾಷ್ಟ್ರಗಳ ಬಹುತೆರನ ಚಿತ್ರಗಳು ನನ್ನ ಕತೆಗಳಲ್ಲಿ ಕಾಣುತ್ತವೆ. ಇವು ಸತ್ಯವನ್ನು ಬಿಂಬಿಸಿವೆ, ಸ್ಫುಟವಾಗಿವೆ, ಇಷ್ಟೋ ಅಷ್ಟೋ ರಸಾನುಭವವನ್ನು ನೀಡುತ್ತವೆ ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು."[೩] ಅವರ ಈ ಉದ್ದೇಶ ಬಹುಪಾಲು ಈಡೇರಿದೆ.

ಮಾಸ್ತಿಯವರ ಕಥಾಲೋಕದಲ್ಲಿ ಅವರ ಅಭೀಪ್ಸೆಗಳು, ಕನಸುಗಳು, ಸದಾಶಯಗಳು, ಎಲ್ಲವೂ ವಾಸ್ತವ ಲೋಕದ ಕ್ಯಾನ್‌ವಾಸ್‌ನ ಮೇಲೆಯೇ ಚಿತ್ರಿತವಾಗುತ್ತವೆ. ಅವರೊಬ್ಬ ಮಹಾನ್ ವಾಸ್ತವವಾದೀ ಲೇಖಕ. 'ಶ್ರೀಕೃಷ್ಣನ ಅಂತಿಮ ಸಂದರ್ಶನ'ದಂಥ ಪೌರಾಣಿಕ ಕತೆಯನ್ನು ಓದಿದರೆ ಅವರೆಂಥ ಕಟ್ಟಾ ವಾಸ್ತವವಾದಿ ಎಂಬುದು ತಿಳಿಯುತ್ತದೆ. ಈ ಕತೆಯಲ್ಲಿ ಬರುವ ಎಲ್ಲ ವ್ಯಕ್ತಿಗಳು, ಕೃಷ್ಣ ಬಲರಾಮ, ರುಕ್ಮಿಣಿ ಎಲ್ಲರೂ ನಮ್ಮೆಲ್ಲರ ಮಧ್ಯೆ ವಾಸಮಾಡುತ್ತಿರುವವರೆಂಬ

ಭಾವ ಉಂಟು ಮಾಡುವಂಥ ವಾಸ್ತವ ಜೀವನದ ವಿವರಗಳಿಂದ ಇಡೀ ಕಥಾ ಸನ್ನಿವೇಶವನ್ನು ತುಂಬಿಬಿಟ್ಟಿದ್ದಾರೆ. ಈ ವಾಸ್ತವ ವಿವರಗಳ ಒಳಗಿನಿಂದಲೇ ಕತೆಯ ದರ್ಶನ ಅರಳಿ ನಿಲ್ಲುತ್ತದೆ. ಆದರೆ ಮಾಸ್ತಿಯವರ ವಾಸ್ತವವಾದೀ ದೃಷ್ಟಿಕೋನಕ್ಕೊಂದು ಮಿತಿಯುಂಟು. "ವಾಸ್ತವ ಬದುಕಿನ ಸಂಕೀರ್ಣತೆ, ಸಂದಿಗ್ಧತೆಗಳನ್ನು ಬಲ್ಲವರಾದರೂ ಅದು ಇರುವಂತೆಯೇ ಚಿತ್ರಿಸುವ ಹಂಬಲಕ್ಕಿಂತ ಅದು ಇರಬೇಕಾದ ಅಂದರೆ ಒಂದು ಆದರ್ಶ ರೀತಿಯೊಂಬಂತೆ ಚಿತ್ರಿಸುವ ಹಂಬಲವೇ ಹೆಚ್ಚು."[೪] –ಎಂಬ ಜಿ.ಎಚ್. ನಾಯಕ್ ಅವರ ಮಾತಿನಲ್ಲಿ ಆ ಮಿತಿಯ ಸೂಚನೆ ಇದೆ. ಒಂದು ಹಳೆಯ ಕತೆ, ಗೌತಮಿ ಹೇಳಿದ ಕತೆ, ಕಲ್ಮಾಡಿಯ ಕೋಣ ಈ ಕತೆಗಳಲ್ಲಿ, ಮಾನಸಿಕ ತುಮುಲುಗಳು, ಬದುಕಿನ ಸಂಕೀರ್ಣತೆಗಳು ಚಿತ್ರಿತವಾಗಿಲ್ಲವೆಂದಲ್ಲ, ಆದರೆ ಅಂಥ ಸಂದರ್ಭಗಳು ಹೆಚ್ಚಿಲ್ಲ.

ಮಾಸ್ತಿಯವರ ದೃಷ್ಟಿಕೋನ ಕುರಿತು, ಬಹಳ ಬೆಲೆಯುಳ್ಳ ಮಾತುಗಳನ್ನು ಹೇಳಿರುವ ನಾಯಕರ ಈ ಮಾತನ್ನು ಎಚ್ಚರಿಕೆಯಿಂದ ಗಮನಿಸಬೇಕು. "ಮಾಸ್ತಿಯವರದು ಸಮಾಜಸೇವಾಕಾಂಕ್ಷಿ ದೃಷ್ಟಿ. ಅದು ಸಾಂಪ್ರದಾಯಿಕ ದೃಷ್ಟಿಕೋನದ್ದು. ವಸ್ತುಸ್ಥಿತಿವಾದಿಯ ನಿಲುವಿನಲ್ಲೇ ಸಮಾಜವನ್ನು ಒಪ್ಪಿಕೊಂಡು, ಅದರ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಸ್ವೀಕರಿಸಿ, ಅವುಗಳ ಉದಾತ್ತ ಸಾಧ್ಯತೆಗಳನ್ನು ವ್ಯಕ್ತಿಗಳ ಜೀವನ ಸಂದರ್ಭಗಳಲ್ಲಿ ಕಂಡು ಕೊಳ್ಳಬೇಕೆನ್ನುವ ಹಿತ ಚಿಂತಕ ದೃಷ್ಟಿಯಾಗಿದೆ."[೫]

ಆದರೆ ಮಾಸ್ತಿಯವರನ್ನು ಹಾಗೆ ಸಾರಾಸಗಟಾಗಿ ಸಾಂಪ್ರದಾಯಿಕ ಎಂದು ತೀರ್ಪುಕೊಡಲು ಸಾಧ್ಯವಾಗುವುದಿಲ್ಲ. ಕಾರಣ ವೆಂಕಟಶಾಮಿಯ ಪ್ರಣಯ, ವೆಂಕಟಿಗನ ಹೆಂಡತಿ, ಪಕ್ಷಿಜಾತಿ, ಆಚಾರವಂತ ಅಯ್ಯಂಗಾರ್ರು ಇಂಥ ಕತೆಗಳಲ್ಲಿ ಸಾಂಪ್ರದಾಯಿಕ ಸಮಾಜದ ದೃಷ್ಟಿಯಲ್ಲಿ ನಿಷಿದ್ಧವೆನ್ನುವಂಥ, ಗಂಡು ಹೆಣ್ಣಿನ ಸಂಬಂಧವನ್ನು ಪುರಸ್ಕರಿಸಲಾಗಿದೆ. ಆದ್ದರಿಂದ ಎಲ್ಲ ಸಂದರ್ಭಗಳಲ್ಲೂ ಅವರದು ವಸ್ತುಸ್ಥಿತಿವಾದಿಯ ನಿಲುವು ಎಂದು ಹೇಳಲು ಸಾಧ್ಯವಿಲ್ಲ. ಆದರೆ ಇವುಗಳಲ್ಲಿ ದಾರಿ ತಪ್ಪಿದವರಿಗೆ ಬದುಕಿನ ದಾರಿಯನ್ನು ಕಲ್ಪಿಸಲಾಗಿದೆ. ಆದರೆ ಇದನ್ನು "ಮನುಷ್ಯ ಸಂದರ್ಭದಲ್ಲಿ ಸಾಧ್ಯವಾಗದ ಅಸಾಧಾರಣ ತಾಳಿಕೆಯ ಗುಣವನ್ನು, ಧಾರಣ ಶಕ್ತಿಯನ್ನು ಉತ್ಪ್ರೇಕ್ಷಿತ ಮಟ್ಟದಲ್ಲಿ ಪಾತ್ರಗಳಿಗೆ ದಾನ ಮಾಡುತ್ತಾರೆ.... ಆ ನೆಲೆಯಲ್ಲಿ ಆ ಪಾತ್ರಗಳು ಮನುಷ್ಯ ಮುಖವನ್ನೇ ಕಳೆದುಕೊಂಡು ಬಿಡುತ್ತವೆ"[೬] ಎಂಬ ಮಾತನ್ನು ಒಪ್ಪುವುದು ಕಷ್ಟ. ಅದೂ ಅಲ್ಲದೆ – "ಈ ಪಾತ್ರಗಳು, ಶೂದ್ರನೆಲೆಗಳಿಂದ ಸೃಷ್ಟಿಯಾಗಿರುವುದರಿಂದ ಮಾಸ್ತಿ ದೃಷ್ಟಿಕೋನ ಉದಾರವಾಯಿತೆ

ಎಂಬ ಒಂದು ಅಸ್ಪಷ್ಟ ಅನುಮಾನವೂ ಸುಳಿದು ಹೋಗುತ್ತದೆ."[೭] ಎಂಬ ಅತ್ಯಂತ ಜಾಣತನದ ಮಾತೂ ಮಾಸ್ತಿಯವರಿಗೆ ನ್ಯಾಯವನ್ನು ಸಲ್ಲಿಸಿದೆ ಎನ್ನುವಂತಿಲ್ಲ.

ಸಾಮಾನ್ಯ ಮನುಷ್ಯನೂ ಅತ್ಯುತ್ಕೃಷ್ಟ ಮೌಲ್ಯಗಳನ್ನು ತನ್ನದಾಗಿರಿಸಿಕೊಂಡು, ತನ್ನ ಬಾಳನ್ನು ಉನ್ನತೀಕರಿಸಕೊಳ್ಳಬಲ್ಲ; ಅದರ ಸೌಂದರ್ಯಕ್ಕೊಂದು ಹೊಸ ಹೊಳಪು ನೀಡಬಲ್ಲ, ಇದು ಮಾಸ್ತಿ ಕತೆಗಳಲ್ಲಿ ಕಂಡು ಬರುವಂಥದು.

ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಈ ಮೂರೂ ಪ್ರಕಾರದ ಕತೆಗಳನ್ನು ಅವರು ರಚಿಸಿದ್ದಾರೆ. ಇದು ಕೇವಲ ಸ್ಥೂಲ ವಿಂಗಡಣೆ ಅಷ್ಟೆ. ಕಾರಣ ಇಲ್ಲಿ ವರ್ತಮಾನವೂ ಅಲೌಕಿಕಾನುಭವಗಳನ್ನು ದಾಖಲಿಸುತ್ತದೆ. ಶ್ರೀಕೃಷ್ಣನೂ ಒಂದು ಮಾನವ ವ್ಯಕ್ತಿಯಾಗಿ ಬರಬಲ್ಲ. ಸೋಲಿಗರ ರಂಗನೇ ಬಿಳಿಗಿರಿರಂಗನಾಗಿ ಕಾಣಬಲ್ಲ. ಕೆಲವೊಮ್ಮೆ ಯಾವುದು ಬದುಕು, ಯಾವುದು ಕತೆ ಎಂಬ ಭ್ರಮೆ ಹುಟ್ಟಿಸುವಂತಿರುತ್ತದೆ. ಈ ಸಂದರ್ಭದಲ್ಲಿ ಕೆ. ಸತ್ಯನಾರಾಯಣ ಅವರ ಈ ವಿಶ್ಲೇಷಣೆ ಮಾಸ್ತಿ ಅವರ ಕತೆಗಳ ಸತ್ವವನ್ನು ಸಮರ್ಥವಾಗಿ ಧ್ವನಿಸುತ್ತದೆ. "ಮಾಸ್ತಿ ಮನುಷ್ಯರ ಕತೆಗಳನ್ನು ಚರಿತ್ರೆಯಂತೆಯೂ, ಚರಿತ್ರೆಯನ್ನು ಮನುಷ್ಯರ ಕತೆಗಳಂತೆಯೂ ಹೇಳುತ್ತಾ ಹೋಗುತ್ತಾರೆ"[೮]. ಕಾರಣ ಅವರೇ ಹೇಳುವಂತೆ "ಮಾಸ್ತಿಯವರಿಗೆ ಒಂದು ಕಾಲದ ಚಾರಿತ್ರಿಕ ಸನ್ನಿವೇಶದ ಬದುಕಿಗಿಂತಲೂ ಮತ್ತೆ ಮತ್ತೆ ಎದುರಾಗುವ ಮನುಷ್ಯನ ಮೂಲಭೂತ ಆಶಯಗಳಿಗೆ ಸಂಬಂಧಿಸಿದ ಮಾದರಿಗಳನ್ನು ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಹಿನ್ನಲೆಯಲ್ಲಿ ಇಟ್ಟು ನೋಡುವುದೇ ಹೆಚ್ಚು ಅರ್ಥಪೂರ್ಣವಾಗಿ ಕಂಡಂತಿದೆ."[೯] ಹೀಗಾಗಿ ಇತಿಹಾಸ, ಪುರಾಣ, ವರ್ತಮಾನ ಹೀಗೆ ಭಿನ್ನ ಭಿನ್ನ ಹಿನ್ನೆಲೆಯ ಕಥಾವಸ್ತು ತೆಗೆದುಕೊಂಡಾಗಲೂ ಅವುಗಳನ್ನು ನಿರ್ವಹಿಸುವ ಕ್ರಮದಲ್ಲಿ ಒಂದೇ ಧೋರಣೆ-ಇರುವುದನ್ನು ನೋಡಬಹುದು. ಆದ್ದರಿಂದ ಮಾಸ್ತಿಯವರಿಗೆ ಸಮಕಾಲೀನ ಮೌಲ್ಯಗಳಿಗಿಂತ ಸಾರ್ವಕಾಲಿಕ ಮೌಲ್ಯಗಳಲ್ಲಿ ಹೆಚ್ಚು ಆಸಕ್ತಿ. ಹಾಗೆಂದಾಕ್ಷಣ ವರ್ತಮಾನದ ಬದುಕಿಗೆ, ಅದರ ಸಮಸ್ಯೆಗಳಿಗೆ, ಅದರ ಮೌಲ್ಯಗಳಿಗೆ ನಿರ್ಲಕ್ಷ್ಯ ತಾಳಿದ್ದಾರೆಂದಲ್ಲ, ಅದನ್ನು ಗ್ರಹಿಸುವ ಪರಿ ಬೇರೆಯಾಯಿತು. ಪಾರಂಪರಿಕವಾದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಗಹನವೂ ಸಂಕೀರ್ಣವೂ ಆದ ಬದುಕಿನ ಅರ್ಥವನ್ನು ಕಂಡುಕೊಳ್ಳುವುದು ಅವರ ಗುರಿಯಾಗಿದೆ.

ಮಾಸ್ತಿಯವರ ಕಥಾಲೋಕದಲ್ಲಿ ಎಲ್ಲ ಕಾಲಕ್ಕೂ ನಿಲ್ಲಬಲ್ಲ ಶ್ರೇಷ್ಠ ಕತೆಗಳಿವೆ, ಸಾಮಾಜಿಕ ಕತೆಗಳಲ್ಲಿ ವೆಂಕಟಶಾಮಿಯ ಪ್ರಣಯ, ವೆಂಕಟಿಗನ ಹೆಂಡತಿ, ಜೋಗ್ಯೋರ ಅಂಜಪ್ಪನ ಕೋಳಿ ಕತೆ, ಮೊಸರಿನ ಮಂಗಮ್ಮ ಇತ್ಯಾದಿ. ಐತಿಹಾಸಿಕ

ಕತೆಗಳಲ್ಲಿ ಬಾದಶಹನ ದಂಡನೆ, ಸಾರಿಪುತ್ರನ ಕಡೆಯ ದಿನಗಳು, ನಿಜಗಲ್ಲಿನ ರಾಣಿ, ಆಚಾರ್ಯರ ಪತ್ನಿ, ಪ್ರಿಯದರ್ಶಿ ಅಶೋಕ, ಕವಿಯ ಬಾಳ ಕೊನೆಯ ದಿನ, ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜವೃಕ್ಷಗಳು, ಪಂಡಿತನ ಮರಣ ಶಾಸನ, ಮೊದಲಾದುವು. ಪೌರಾಣಿಕವೆನ್ನಬಹುದಾದ ಕತೆಗಳಲ್ಲಿ - ಹೇಮಕೂಟದಿಂದ ಬಂದ ಮೇಲೆ, ಗೌತಮಿ ಹೇಳಿದ ಕತೆ, ಒಂದು ಹಳೆಯ ಕತೆ, ಮಂತ್ರೋದಯ ಮೊದಲಾದುವು. ಈ ಕತೆಗಳು ಅವರ ಕಲೆಗಾರಿಕೆ, ಜೀವನ ದರ್ಶನ ಮತ್ತು ಅವರು ಹೇಳುವ ರಸಾನುಭವ ಇವುಗಳನ್ನು ನಮ್ಮ ಅನುಭವಕ್ಕೆ ತಂದುಕೊಡುವ ಕತೆಗಳಿಗೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಕೆಲವನ್ನು ವಿಶ್ಲೇಷಿಸಿ ನೋಡಬಹುದು.

ಒಂದು ಹಳೆಯ ಕತೆ, ಸನ್ಯಾಸಿಯೊಬ್ಬ ಒಡ್ಡಿಕೊಳ್ಳುವ ಅನುಭವವನ್ನು ವಸ್ತುವಾಗಿ ಉಳ್ಳದ್ದು. "ಯಾವ ವೃದ್ಧನನ್ನೇ ಆಗಲಿ, ಯಾವ ಜ್ಞಾನಿಯನ್ನೇ ಆಗಲಿ, ಯಾವ ಸನ್ಯಾಸಿಯನ್ನೇ ಆಗಲಿ, ಸ್ತ್ರೀರೂಪು ನಿಜವಾಗಿಯೂ ಸೆಳೆಯಬಲ್ಲುದು" - ಎಂಬ ವ್ಯಾಸರ ಮಾತನ್ನು, ವೃದ್ಧನನ್ನೂ, ಜ್ಞಾನಿಯನ್ನೂ ಸೆಳೆಯಬಹುದು; ಸನ್ಯಾಸಿಯನ್ನು ಸೆಳೆಯಲಾರದು ಎಂದು ತನ್ನ ಶಿಷ್ಯನಿಂದ - ತಿದ್ದಿಸಿದ ಸನ್ಯಾಸಿಗೆ ಜ್ಞಾನೋದಯವಾದ ಕತೆ. ಕತೆಗೆ ಪರಿಣಾಮಕಾರಿಯಾದ ವಾತಾವರಣವನ್ನು ನಿರ್ಮಿಸಲಾಗಿದೆ. ಸಂಜೆಯ ವರ್ಣನೆ, ಹೆಣ್ಣಿನ ಚೆಲುವಿನ ವರ್ಣನೆ, ಇವೆಲ್ಲ ಅತ್ಯಂತ ಉಚಿತವಾದ ರೀತಿಯಲ್ಲಿ ಬಂದಿದ್ದು, ಮಾಸ್ತಿ ಕಥನ ಕಲೆಗೆ ಒಳ್ಳೆಯ ಉದಾಹರಣೆಯಾಗಿದೆ.

"ಹೇಮಕೂಟದಿಂದ ಬಂದ ಮೇಲೆ" ಮತ್ತು "ಗೌತಮಿ ಹೇಳಿದ ಕತೆ" ಎರಡೂ ಕಾಳಿದಾಸನ ಶಾಕುಂತಲದ ಆಧಾರದ ಮೇಲೆ ಮಾಸ್ತಿ ಪುನರ್ನಿರ್ಮಿಸಿರುವ ಅಲಿಖಿತ ಮಹಾಕಾವ್ಯದ ಎರಡು ಅಧ್ಯಾಯಗಳಂತಿವೆ. ಮಾಸ್ತಿಯವರ ಕಲ್ಪನಾ ಭವ್ಯತೆ, ಭಾಷೆಯ ಬಂಧುರತೆ, ಭಾವನೆಗಳ ಉತ್ಕಟತೆ, ಮನುಷ್ಯ ಸ್ವಭಾವದ ಪರಿಪೂರ್ಣ ಪರಿಜ್ಞಾನ ಈ ಎಲ್ಲ ದೃಷ್ಟಿಗಳಿಂದ ಶ್ರೇಷ್ಠ ಕತೆಗಳಾಗಿವೆ. ಕಾಳಿದಾಸನ ನಾಟಕದ ಆಧಾರದ ಮೇಲೆ ಎರಡೂ ಕತೆಗಳಿಗೆ ಸುಂದರವೂ, ವೈಚಿತ್ರ್ಯ ಪೂರ್ಣವೂ ಆದ ಪರಿವೇಶ ನಿರ್ಮಿಸಿ, ಉತ್ತರ ಶಾಕುಂತಲ ಎನ್ನಬಹುದಾದ ರೀತಿಯಲ್ಲಿ ಕಂಡರಿಸಿದ್ದಾರೆ. ಶಕುಂತಲೆ ಕಳೆದ ಹಿಂದಿನ ಆ ದಿನಗಳನ್ನು ನೆನೆಸಿಕೊಳ್ಳಲೆಂದೇ ಆಶ್ರಮಕ್ಕೆ ಬರುತ್ತಾಳೆ. ಆಶ್ರಮದಲ್ಲಿ ಎಲ್ಲವೂ ಹಿಂದಿನಂತೆ ಹಾಗೆಯೇ ಇದೇ. ಆದರೆ ಅದನ್ನು ಮರಳಿ ಕಾಣುವ ಶಕುಂತಲೆಯಲ್ಲಿ ಹಿಂದಿನ ನಗೆ ಮಾತ್ರ ಮಾಯವಾಗಿದೆ. ಅಂದಿನ ಉಲ್ಲಾಸ ಅವಳಲ್ಲಿ ಮತ್ತೆ ಮೂಡಲಿಲ್ಲ. "ಹದಿನೆಂಟು ವರ್ಷದ ತರುಣಿ ಮುವತ್ತೈದು ವರ್ಷದ ಹೆಂಗಸಿನಂತೆ ಜೀವನದ ಭಾರದಿಂದ

ಬಳಲಿ ಹೋಗಿದ್ದಳು." "ಮಗನನ್ನು ಕರೆದುಕೊಂಡು ರಾಜಧಾನಿಗೆ ಬಂದಾಗಲಾಗಲಿ ಅವಳ ಮನಸ್ಸು ಉತ್ಸಾಹದಿಂದ ಉಬ್ಬಲಿಲ್ಲ." "ಒಂದು ಸ್ಥಿತಿ ಮೀರಿದ ನಂತರ ಮನಸ್ಸು ಎಂಥ ಸಂತೋಷದಲ್ಲೂ ಉಬ್ಬುವುದನ್ನು ಮರೆಯುತ್ತದೆ." ಶಕುಂತಲೆಗೆ ಏನೋ ಒಂದು ರೀತಿಯ ಉತ್ಕಂಠೆ. ಶಕುಂತಲೆಯ ಬದುಕನ್ನು ವಿಶ್ಲೇಷಿಸುತ್ತ ಮಾಸ್ತಿ ಹೇಳುತ್ತಾರೆ- "ನೋವನ್ನು ಕಾಣದೆ ನಕ್ಕ ನಗೆಯೇ ನಗೆ. ನೊಂದು ನೋವನ್ನು ನುಂಗಿ ಆಮೇಲೆ ನಗುವ ನಗೆ, ನಗೆಯಲ್ಲ." ಬದುಕಿನಲ್ಲಿ ಒಂದು ಸುತ್ತು ಬಂದ ಶಕುಂತಲೆಗೆ ಇದು ಸ್ವಯಂ ಅನುಭವಕ್ಕೆ ಬಂದಿತು. ಅವಳ ಮನಸ್ಸಿನ ಭಾವಲಹರಿಗಳನ್ನು, ಹಾಗೆಯೇ ಉಳಿದ ವ್ಯಕ್ತಿತ್ವಗಳನ್ನು ಅತ್ಯಂತ ಸ್ಫುಟವಾಗಿ ನಮ್ಮೆದುರು ಕಡೆದು ನಿಲ್ಲಿಸಿದ್ದಾರೆ. ಹಾಗೆಯೇ ಬದುಕಿನ ಸಂಕೀರ್ಣತೆಯನ್ನೂ ಗುರುತಿಸಿದ್ದಾರೆ.

"ಗೌತಮಿ ಹೇಳಿದ ಕತೆ" ಗಂಡು ಹೆಣ್ಣಿನ ಶಾರೀರಿಕ ಬಯಕೆಯ ನಿಯಂತ್ರಣವನ್ನು ಕೇಂದ್ರ ವಸ್ತುವನ್ನಾಗಿ ಹೊಂದಿದೆ. ಕಾಳಿದಾಸನ ಶಾಕುಂತಲದಲ್ಲಿ ಕಣ್ವ ಮತ್ತು ಗೌತಮಿಯರ ಬದುಕಿನ ಬಗೆಗಿರುವ ಸೂಚನೆಗಳನ್ನು ಗ್ರಹಿಸಿ, ಅದನ್ನು ತನ್ನದೇ ಆದ ಒಳನೋಟದಿಂದ ನೋಡಿ ಅವರ ಬದುಕನ್ನು ವಿವರಗಳಿಂದ ತುಂಬಿ ಅನನ್ಯ ದರ್ಶನವನ್ನೇ ಹೊರಡಿಸುತ್ತಾರೆ.

ಗೌತಮಿ, ಶಕುಂತಲೆ ಮತ್ತು ಗೆಳತಿಯರಿಗೆ ತನ್ನ ಕತೆಯನ್ನು ಮಾಲಿನಿ-ದತ್ತ ಕಾಶ್ಯಪರ ಕತೆಯಾಗಿ ಹೇಳುತ್ತಿದ್ದಾಳೆ. ಮಾಲಿನ ಭರದ್ವಾಜನನ್ನು ಒಲಿದಿದ್ದವಳು; ಇದ್ದಕ್ಕಿದ್ದಂತೆ ಬಂದ ಮಾಲಿನಿಯ ಪ್ರವಾಹ ಮಾಲಿನಿಯ ಭರದ್ವಾಜನನ್ನು ಬಲಿತೆಗೆದುಕೊಂಡು ಬಿಟ್ಟಿತು. ಇತ್ತ ಮಾಲಿನೀ ನದಿಯ ನೆರೆ ಇಳಿದರೂ ಅತ್ತ ಮಾಲಿನಿಯ ಬದುಕಿನಲ್ಲಿ ಬಯಕೆಯ ನೆರೆ ಬಲಿಯಿತು. ತನ್ನನ್ನು ಸಂಯಮಿಸಿಕೊಳ್ಳಲಾರದಾದಳು. ದತ್ತ ಕಾಶ್ಯಪನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಹಂಬಲ ಹುಚ್ಚೆದ್ದು ಕುಣಿಯಿತು. ಆದರೆ ದತ್ತನಾದರೋ ತನ್ನ ಧರ್ಮವನ್ನು ಮೀರಕೂಡದೆಂಬ ವ್ರತದವನು. ಆ ಧರ್ಮವೆಂದರೆ ಭರದ್ವಾಜನಿಗೆಂದು ಗೊತ್ತಾದವಳು ತನಗೆ ಅತ್ತಿಗೆ ಎಂಬುದು. ಭರದ್ವಾಜ ಇಲ್ಲವಾದರೂ ಅವಳು ಅತ್ತಿಗೆಯೇ. ಮಾಲಿನಿ ಬಲವಂತ ಮಾಡಿದಾಗ ದತ್ತ ಅವಳ ಕಾಲು ಹಿಡಿದು ತನ್ನನ್ನು ಕಾಪಾಡಬೇಕೆಂದೂ ಅವಳು ಅನುಗ್ರಹಿಸಿದರೆ ಮಾತ್ರ ತಾನು ಉಳಿಯಬಲ್ಲೆನೆಂದೂ ಅಂಗಲಾಚುತ್ತಾನೆ. ಅವನ ಅಂಗಲಾಚಿಕೆಯ ದನಿ ಅವಳನ್ನು ತಟ್ಟಿತು. ಅವಳಿಗೆ ಆ ಕ್ಷಣದಲ್ಲಿ ಅವನು- "ತನ್ನ ಸಹಾಯದಿಂದ ಮಾತ್ರ ಬದುಕಬಲ್ಲ ನಿಸ್ಸಹಾಯ ಬಾಲಕನಾಗಿ ಕಂಡನು. ಗಂಡೆಂದು ಅವನನ್ನು

ಅಪ್ಪಿಕೊಳ್ಳಬಯಸಿದ ತೋಳು ಆಗ ಅವನನ್ನು ಮಗುವಂತೆ ಸಂತೈಸಲು ಬಯಸಿತು." ಅವನು ಮಾಲಿನಿಯ ಮಾತೃತ್ವವನ್ನು ಜಾಗೃತಗೊಳಿಸಿ ಅವಳನ್ನು ಉಳಿಸಿ ತಾನೂ ಉಳಿದ.

ಮಾಲಿನಿ ನದಿಯ ಪ್ರವಾಹಕ್ಕೆ ಎದುರಾಗಿ ಈಜಿ ಗೆದ್ದ ದತ್ತ "ಮಾಲಿನಿಯ ಬಯಕೆಯ ಪ್ರವಾಹವನ್ನೂ ಗೆಲ್ಲುತ್ತಾನೆ. ಗೆದ್ದು ಮಹರ್ಷಿ ಕಣ್ವನಾಗಿದ್ದಾನೆ. ಮಾಲಿನಿಯ ಒಳಶಕ್ತಿಯನ್ನು ಎಚ್ಚರಿಸಿ ಅವಳನ್ನು ಗೌತಮಿಯನ್ನಾಗಿ, ಶಕುಂತಲೆಯನ್ನು ನೋಡಿಕೊಳ್ಳುವ ತಾಯಿಯಾಗಿ ಬೆಳೆಸಿದ್ದಾನೆ."[೧೯] ಅದಮ್ಯವಾದ ಮನುಷ್ಯ ಪ್ರವೃತ್ತಿ ಮತ್ತು ನಿಗ್ರಹದ ಈ ಸಂಘರ್ಷದಲ್ಲಿ ಕೊನೆಗೂ ಮನುಷ್ಯ ವಿಜಯಿಯಾಗಿ ತನ್ನ ಘನತೆಯನ್ನೇ ಮೆರೆಯುವುದನ್ನು ಮಾಸ್ತಿ ಅತ್ಯಂತ ಅನನ್ಯವಾಗಿ ಚಿತ್ರಿಸಿದ್ದಾರೆ.

ಮಾಸ್ತಿಯವರ ಸಾಮಾಜಿಕ ಮತ್ತು ಐತಿಹಾಸಿಕ ಕತೆಗಳಲ್ಲಿ ವ್ಯಕ್ತಿಗಳ ಜೀವನ ಸಂದರ್ಭಗಳಲ್ಲಿ ಮೂಡಿಬರುವ ದರ್ಶನ ಅವರ ಪೌರಾಣಿಕ ಕತೆಗಳಲ್ಲಿ ನೇರವಾಗಿ ವಾಚ್ಯವಾಗಿಯೇ ಮೂಡಿಬಂದಿದೆ. ಉದಾಹರಣೆಗೆ 'ಶ್ರೀ ಕೃಷ್ಣನ ಅಂತಿಮ ಸಂದರ್ಶನ' ಮತ್ತು 'ಮಂತ್ರೋದಯ' ಕತೆಗಳಲ್ಲಿ ಇದನ್ನು ನೋಡಬಹುದು.

ಶ್ರೀ ಕೃಷ್ಣ ಅಂತಿಮ ಪ್ರಯಾಣಕ್ಕೆ ಸಜ್ಜಾಗುತ್ತಿದ್ದಾನೆ. ಅರ್ಜುನ ತನ್ನ ಮನಸ್ಸಿನ ಕೆಲವು ಸಂದೇಹ ಪರಿಹಾರಾರ್ಥವಾಗಿ ಪ್ರಶ್ನೆಗಳನ್ನು ಕೇಳುತ್ತಿದ್ದಾನೆ. ಅರ್ಜುನ ಕೇಳಿದ ಒಂದು ಪ್ರಶ್ನೆ- "ಒಂದೊಂದು ಜೀವ ತನ್ನ ದಾರಿಯನ್ನು ಹೇಗೆ ಕಾಣಬೇಕು?"

ಅದಕ್ಕೆ ಶ್ರೀ ಕೃಷ್ಣನ ಉತ್ತರ "......ತನ್ನ ಸುಖ ಯಾವುದು ಅಂತ ಯೋಚನೆ ಮಾಡಿದ ಮನುಷ್ಯ ದಾರಿ ತಪ್ಪುತ್ತಾನೆ. ಸಮುದಾಯದ ಸುಖ ಯಾವುದು ಅಂತ ಯೋಜನೆ ಮಾಡಿದವ ಸರಿಯಾಗಿ ನಡೆಯುತ್ತಾನೆ. ಆ ಸಮುದಾಯ ಎಷ್ಟು ದೊಡ್ಡದಾದರೆ ಆ ನಡತೆ ಅಷ್ಟು ಒಳ್ಳೆಯದಾಗುತ್ತೆ. ತನ್ನ ಗುರಿ ಲೋಕದ ಸುಖ ಎಂದು ಕೊಂಡವನು ಲೋಕದ ಸುಖವನ್ನೇ ಬಯಸುತ್ತಾನೆ. ಅದಕ್ಕಾಗಿ ದುಡಿಯುತ್ತಾನೆ. ಅದಕ್ಕಾಗಿ ತನ್ನ ಪ್ರಾಣವನ್ನು ಬೇಕಾದರೂ ಒಪ್ಪಿಸಿ ಬಿಡುತ್ತಾನೆ. ಈ ಸ್ಥಿತಿಯನ್ನು ಮುಟ್ಟುವುದು ಮನುಷ್ಯ ಪ್ರಾಣಿಯ ಅಪೇಕ್ಷೆ ಆಗಬೇಕು."

'ಮಂತ್ರೋದಯ' ಕತೆಯಲ್ಲಿ ಇದೇ ದರ್ಶನ ವ್ಯಕ್ತವಾಗಿದೆ. ಹಾಗೆ ನೋಡಿದರೆ ಇದೊಂದು ಕತೆ ಎಂದೇ ಹೇಳಲಾಗುವುದಿಲ್ಲ. ಸಂದರ್ಭದ ಚಿತ್ರ ಅಷ್ಟೇ. ಮಹರ್ಷಿ ವಾಮದೇವ ದ್ವೈಪಾಯನ ಅರುಣೇಯನಿಗೆ ನೂರು ವರ್ಷ ತುಂಬಿದೆ. ಅವನು ಜಗತ್ತನ್ನು ಬಿಡುವ ಅಂತಿಮ ಸಮಯ ಬಂದಿದೆ. ತನ್ನ ಮರಣದ ದಿನ

ತನ್ನ ನಿಕಟವರ್ತಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ ತಾನು ಕಂಡುಕೊಂಡ ಸತ್ಯಗಳನ್ನು ಹೇಳುತ್ತಿದ್ದಾನೆ. "ಕೆಟ್ಟದ್ದನ್ನು ದಯೆಯಿಂದ ಕಾಣುವುದು ಹೇಗೆ?" ಎಂಬ ಪ್ರಶ್ನೆಗೆ-

"ಎಲ್ಲವೂ ಒಂದೇ ಆತ್ಮ ಇದನ್ನು ಅಭ್ಯಾಸ ಮಾಡು. ಆಗ ದುಷ್ಟನೆನ್ನುವುದರ ವಿಷಯದಲ್ಲಿ ಕನಿಕರವೇ ಮೂಡುತ್ತದೆ. ಬೇಸರ ಮೂಡುವುದಿಲ್ಲ. ನಿನ್ನ ಕಾಲು ಕೆಸರಾದಾಗ ಕಾಲನ್ನು ನೋಯಿಸದೆ ಕೆಸರನ್ನು ತೊಳೆಯುತ್ತೀಯೆ. ಈ ಎಚ್ಚರದ ಕಾರಣ, ಕಾಲು ನೀನೆ; ಬೇರೆ ಅಲ್ಲ ಎಂಬುದರ ಅರಿವು, ಎಲ್ಲ ಜೀವದ ವಿಷಯದಲ್ಲಿ ಇದು ನಾನೇ ಎಂಬ ಭಾವ ಇದೇ ತಾಳ್ಮೆಯನ್ನು ತರುತ್ತದೆ."

"ಎಲ್ಲವೂ ನಾನೇ ಎನ್ನುವಾಗ ಸ್ವಾರ್ಥವೇ ಬೆಳೆದು ಪರಹಿತ ಮರೆಯಾಗಬಹುದಲ್ಲವೇ?"

ಎಲ್ಲವೂ ನಾನೇ ಎನ್ನುವುದು ಚರ್ಚೆ ಮಾತ್ರ ಆದಾಗ ಹೀಗಾಗುವುದು ಸಾಧ್ಯ. ಅನುಭಾವವಾದಾಗ ಸಾಧ್ಯವಿಲ್ಲ. ಕಾಲನ್ನು ಜಿಗುಟಿ ಕೈ, ಕೈಯನ್ನು ಕಚ್ಚಿ ಬಾಯಿ ಯಾವ ಸುಖವನ್ನೂ ಪಡೆಯುವುದಿಲ್ಲ. ಕಾಲಿಗೆ ಪೆಟ್ಟಾದಾಗ ಕೈ ಅದನ್ನು ಸವರುತ್ತದೆ. ಕೈ ಸುಟ್ಟಾಗ ಬಾಯಿ ಅದನ್ನು ಊದುತ್ತದೆ. ಒಂದು ಎಂದು ಬಾಯಲ್ಲಿ ಹೇಳುವುದಲ್ಲ, ಒಂದು ಎಂದು ಬಾಳುವುದು ಗುರಿ. ಹೀಗೆ ಬಾಳುವ ಜೀವಕ್ಕೆ ಮೋಹ ಮಾತ್ರ ಅಳಿಯುವುದಿಲ್ಲ; ಶೋಕವೂ ಇಲ್ಲವಾಗುತ್ತದೆ."

ಧರ್ಮಸಾಧನೆ ಪ್ರತ್ಯಕ್ಷ ಕರ್ಮದಲ್ಲಿ ಎಂಬುದಕ್ಕೆ ಅವರ ಎಲ್ಲ ಕತೆಗಳೂ; ಐತಿಹಾಸಿಕ, ಸಾಮಾಜಿಕ ಎಲ್ಲವೂ ಉದಾಹರಣೆಗಳಾಗಿವೆ.

ಮಾಸ್ತಿಯವರ ಐತಿಹಾಸಿಕ ಕತೆಗಳಲ್ಲಿ "ಸಾರಿ ಪುತ್ರನ ಕಡೆಯ ದಿನಗಳು" ಅತ್ಯಂತ ಯಶಸ್ವೀ ಕಲಾತ್ಮಕ ಕತೆಗಳಲ್ಲೊಂದು. ವೇದಶಾಸ್ತ್ರಗಳಲ್ಲಿ ನಿಷ್ಣಾತನಾಗಿದ್ದು ಪೂರ್ವಾಶ್ರಮದಲ್ಲಿ ನರಸಿಂಹ ಶರ್ಮನಾಗಿದ್ದ, ಬುದ್ಧ ಗುರುವಿನ ಶಿಷ್ಯ ಸಾರಿಪುತ್ರ ನಲವತ್ತು ವರ್ಷಗಳ ನಂತರ ತನ್ನವರನ್ನು ಕಾಣಲೆಂದು ಊರಿಗೆ ಹಿಂತಿರುಗಿದ್ದಾನೆ. ಬುದ್ಧ ಗುರುವಿನ ಸಾನ್ನಿಧ್ಯದಲ್ಲಿ ಜ್ಞಾನಸಿದ್ಧಿ ಮತ್ತು ಮನಃಪರಿಪಾಕ ಎರಡನ್ನೂ ಸಾಧಿಸಿದ್ದಾನೆ. ಅವನ ಹೆಂಡತಿಯಾದರೂ ಧೀರೋದಾತ್ತೆ. ತನಗೆ ಒದಗಿ ಬಂದ ಸ್ಥಿತಿಗೆ ಧೃತಿಗೆಡದೆ ಗಂಡು ಮಗನಿಗಿಂತ ಹೆಚ್ಚಾಗಿ ತನ್ನ ಅತ್ತೆ ಮಾವಂದಿರನ್ನು ಚೆನ್ನಾಗಿ ನೋಡಿಕೊಂಡು, ಮಗಳನ್ನು ಸಾಕಿ, ಬೆಳೆಸಿ ತನ್ನ ಸತೀಧರ್ಮವನ್ನು ಮೆರೆದಿದ್ದಾಳೆ. ಗಂಡ ಸನ್ಯಾಸಿಯಾಗಿ ಹಿಂತಿರುಗಿದಾಗಲೂ ತನ್ನ ಸತೀತ್ವದ ಧರ್ಮವನ್ನು ಬಿಡದೆ ನಡೆಸುತ್ತಾಳೆ. ಕತೆಯಲ್ಲಿ ವೇದವತಿಯ ಈ ಸಾಹಸಪೂರ್ಣ ಕರ್ತವ್ಯದ ಬದುಕಿನ ವಿವರದ ಜೊತೆ ಜೊತೆಯಲ್ಲೇ ಘನ ಪಂಡಿತನಾದ ಮಗನನ್ನು ಕೊನೆಗಾಲದಲ್ಲೂ ಕಾಣಲಾಗದ ಸಾರಿಪುತ್ರನ ತಂದೆತಾಯಿಗಳ ವ್ಯಥೆಯ ಮಾತೂ

ಬಂದಿದೆ. ಆದರೆ ಒಂದು ಹಿರಿದಾದ ಗುರಿ ಸಾಧನೆಯ ಸಲುವಾಗಿ ಅದಕ್ಕಿಂತ ಕಿರಿದಾದ ಕರ್ತವ್ಯವನ್ನು ಅಲಕ್ಷಿಸಿದ್ದು, ಆಕ್ಷೇಪಾರ್ಹವಾಗುವುದಿಲ್ಲ. ಜಡ ವೈದಿಕ ಧರ್ಮವನ್ನು ತ್ಯಜಿಸಿ ಬೌದ್ಧನಾದ ಸಾರಿಪುತ್ರನಿಗೆ ಬುದ್ಧನನ್ನು ದೇವರ ಅವತಾರವೆಂದು ಕಂಡರೇ ಸಮಾಧಾನ. ಸಾರಿಪುತ್ರ ಮತ್ತೆ ಸಂಸಾರ ಸಮೇತವಾಗಿ ಬೌದ್ಧ ಧರ್ಮ ಪ್ರಚಾರಕ್ಕೆ ಹೊರಡುತ್ತಾನೆ. ಕಾರಣ ಬುದ್ಧನ ಮೂಲಕವಾಗಿ ವೈದಿಕ ಧರ್ಮ ತನ್ನೆಲ್ಲ ಕೊಳೆ ಕಳೆದುಕೊಂಡು ಹೊಸ ಕಳೆಯಿಂದ ಬೆಳಗುತ್ತಿದೆ ಎಂದು. ಕತೆಯ ಈ ದರ್ಶನ, ಮಾಸ್ತಿಯವರ ಮೂಲ ದರ್ಶನವನ್ನೇ ಪ್ರತಿಧ್ವನಿಸುತ್ತಿದೆ.

'ಬಾದಶಹನ ದಂಡನೆ', 'ಪಂಡಿತನ ಮರಣ ಶಾಸನ' ಈ ಐತಿಹಾಸಿಕ ಕತೆಗಳಲ್ಲಿ ರಾಜಕೀಯ ಸೂಕ್ಷ್ಮದ ಜೊತೆಜೊತೆಯಲ್ಲೇ ಮತಧರ್ಮಗಳ ಮಿತಿಯನ್ನು ಮೀರಿದ ಮಾನವೀಯ ಉದಾತ್ತತೆಯ, ಎಂಥ ಸಂದರ್ಭದಲ್ಲೂ ಮೌಲ್ಯನಿಷ್ಠೆಯನ್ನು ಕಾಯ್ದುಕೊಳ್ಳುವ ಚಿತ್ರವಿದೆ.

ತನ್ನ ಬಲಿದಾನದ ಮೂಲಕ ಪಾತಿವ್ರತ್ಯದ ಮಹಾನತೆಯನ್ನು ಮೆರೆದ ರಾಮರಸನ ಕಿರಿಯ ಹೆಂಡತಿ ಗಿರಿಜವ್ವೆಯ ಧೀರೋದಾತ್ತ ವ್ಯಕ್ತಿತ್ವವನ್ನು ಚಿತ್ರಿಸುವ 'ನಿಜಗಲ್ಲಿನ ರಾಣಿ' ಒಂದು ಸುಂದರ ಐತಿಹಾಸಿಕ ಕತೆ. ತನಗೆ ಆಶ್ರಯಕೊಟ್ಟ ಮನೆಗೆ, ನಾಡಿಗೆ ಎರಡು ಬಗೆದ ದುಷ್ಟ ತಮ್ಮ ಕಸ್ತೂರಿನಾಯಕನನ್ನು ತನ್ನೊಂದಿಗೇ ಬಲಿ ತೆಗೆದುಕೊಳ್ಳುವ ಅವಳ ಉದ್ದೇಶವನ್ನು ಕೊನೆಯ ಹಂತದವರೆಗೂ ನಿಗೂಢವಾಗಿ ಉಳಿಸಿ, ಮಾಸ್ತಿಯವರು ಶ್ರೇಷ್ಠ ಕಲೆಗಾರಿಕೆ ತೋರಿದ್ದಾರೆ.

ಐತಿಹಾಸಿಕ ಕತೆಗಳಲ್ಲಿ ಬೇರೆ ದೇಶದ ವ್ಯಕ್ತಿಗಳನ್ನು ಕುರಿತ ಎರಡು ಕತೆಗಳನ್ನು ಮಾತ್ರ ನೋಡಬಹುದು: ಕವಿಯ ಬಾಳ ಕೊನೆಯ ದಿನ ಹಾಗೂ ಟಾಲಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳು.

'ಕವಿಯ ಬಾಳ ಕೊನೆಯ ದಿನ' ಅದರ ಹೆಸರೇ ಸೂಚಿಸುವಂತೆ ಜರ್ಮನ್ ಮಹಾಕವಿ ಗಯಟೆಯ ಅಂತಿಮ ದಿನದಂದು, ಸಾವಿಗೆ ಮುಂಚೆ ತನ್ನ ಬದುಕನ್ನು ಕುರಿತು ಅವನು ಚಿಂತಿಸುವುದು, ಅವನ ಮನೋವ್ಯಾಪಾರ ಇವುಗಳನ್ನು ವಸ್ತುವಾಗಿ ಉಳ್ಳ ಕತೆ. ಕವಿಯ ಅನುಭವದ ಮೂಲಕವೇ ಅವನ ವ್ಯಕ್ತಿತ್ವ ಮಾಗಿದ ಪರಿಯನ್ನು ಚಿತ್ರಿಸಲಾಗಿದೆ. ಗಯಟೆಯ ಹೆಣ್ಣುಬಳುತನ, ಹೆಣ್ಣುಗಳೊಂದಿಗಿನ ಅವನ ಅನುಭವ ಬದುಕಿನಲ್ಲಿ ನೀತಿಯ ಸಾಪೇಕ್ಷಿತ ಸ್ವರೂಪವನ್ನು ಕುರಿತಾದ ಅವನ ಮಾತು-“ಬಾಳಿನಲ್ಲಿ ಈ ತಪ್ಪು, ಸರಿ ಎನ್ನುವವರ ಸರಿ ಅಷ್ಟನ್ನೇ ಮಾಡಿದರೆ, ಲೋಕದಲ್ಲಿ ಯಾರು ಉಳಿಯಬೇಕು- ನೀತಿ ನೀತಿ ಎಂದು ನಾವು ಹೇಳುತ್ತಲೇ ಇರುವುದು” ಇವೆಲ್ಲವನ್ನು ಉದಾರವಾದಿ ದೃಷ್ಟಿಕೋನದಿಂದಲೇ

ನೋಡಿದ್ದಾರೆ. "ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳು" ಬದುಕಿನ ಸಂಕೀರ್ಣತೆಯನ್ನು ಚಿತ್ರಿಸುವ ಕತೆ. ಆಸ್ತಿಯ ಸ್ವಾಮ್ಯವನ್ನು "ಮನುಕುಲದ ಕ್ಷೇಮಕ್ಕೆ ಎಡರಾದ ಮೊಮ್ಮೊದಲ ಕುತ್ತು" ಎಂದು ತಿಳಿದ ಟಾಲ್‌ಸ್ಟಾಯ್ ತಾನು ಬೆಳೆಸಿದ ಭೂರ್ಜವೃಕ್ಷಗಳ ಮೇಲಿನ ವ್ಯಾಮೋಹವನ್ನು ಮಾತ್ರ ಬಿಡಲಾರದವನಾಗಿದ್ದಾನೆ. ಅವುಗಳನ್ನು ಕಡಿಸಲು ಬಂದ ಮಿತ್ರರಿಗೆ ಏನೂ ಹೇಳದೆ ಮೌನ ತಾಳುತ್ತಾನೆ. ಹೆಂಡತಿ ಸೋಫಿಯಾ ಅಡ್ಡಿ ಮಾಡುತ್ತಾಳೆ. ಭೂರ್ಜವನ ಇನ್ನಿಲ್ಲದಾದಾಗ ಟಾಲ್‌ಸ್ಟಾಯ್‌ಗೆ ಅಪಾರ ದುಃಖವುಂಟಾಗಿ ಮನೆ ಬಿಟ್ಟು ಹೋಗಿ ರೈಲ್ವೆ ಸ್ಟೇಷನ್‌ನಲ್ಲಿ ಸಾಯುತ್ತಾನೆ. ಅವನ ಮನಸ್ಸಿನ ತುಮುಲವನ್ನು ಕತೆಗಾರರು ಚಿತ್ರಿಸುವುದು ಹೀಗೆ - "ಮರ ಹೋದವೆಂಬ ದುಃಖವೇ? ಹೆಂಡತಿ ಔದಾರ್ಯಕ್ಕೆ ಅಡ್ಡಿ ಆದಳೆಂಬ ಬೇಸರವೇ? ಸ್ವಾಮ್ಯ ಕೂಡದೆಂದು ಬುದ್ಧಿ ಹೇಳುತ್ತಿರುವಲ್ಲಿ ಮರ ತನ್ನದೆಂಬ ಅಭಿಮಾನ ಕಾಡಿತೆಂಬ ಉದ್ವೇಗವೇ? ಅವನ ಜೀವ ಈ ಭಾವ ಯಾವುದರಲ್ಲಿ ತೊಳಲುತ್ತ ಮುಳುಗುತ್ತ ಮುಗಿಯಿತು? ಇಲ್ಲ ಮೂರೂ ಭಾವ ಆ ಮನಸ್ಸಿನಲ್ಲಿ ಸಾಯುವ ವೇಳೆ ತುಮುಲ ಮಾಡಿದವೋ? - ಇದನ್ನು ಯಾರೂ ಈಗ ಹೇಳುವಂತಿಲ್ಲ".

ಅವರ ಐತಿಹಾಸಿಕ ಮತ್ತು ಪೌರಾಣಿಕ ಕತೆಗಳಿಗಿಂತ ಹೆಚ್ಚು ಚರ್ಚೆಗೆ ಒಳಗಾಗಿರುವುದು ಅವರ ಸಾಮಾಜಿಕ ಕತೆಗಳು. ದೊಂಬರ ಹುಡುಗಿಯಲ್ಲಿ ಅನುರಕ್ತನಾದ ನಾಯಿಂದರ ಹುಡುಗನೊಬ್ಬನ ಅದಮ್ಯ ಪ್ರಣಯಕತೆ 'ವೆಂಕಟಶಾಮಿಯ ಪ್ರಣಯ'. ತಂದೆ ತಾಯಿಗಳನ್ನು ತೊರೆದು ಜೊತೆಯಲ್ಲೇ ಹೋದ ಕೆಲದಿನಗಳನಂತರ ಹಿಂತಿರುಗಿ ರಾತ್ರಿ ಮನೆಯ ಬಾಗಿಲು ತಟ್ಟಿದರೆ ತಾಯಿಯ ತಿರಸ್ಕಾರದ ನುಡಿ ಕೇಳಿ ಹೊರಟು ಹೋಗುತ್ತಾನೆ. ಇದೀಗ ಅವನಿಗೆ ಬದುಕಿನ ಕಾಠಿಣ್ಯತೆಯ, ಸಮಾಜದ ವಿಧಿ ನಿಷೇಧಗಳ ಅರಿವಾಗಿದೆ. ನಾಲ್ಕು ದಿನಗಳ ನಂತರ ಹಳ್ಳಿಯ ಗೌಡನೊಬ್ಬ ತಮ್ಮ ಹಳ್ಳಿಯಲ್ಲಿ ಜ್ವರ ಹಿಡಿದು ಬೆಂಡಾಗಿದ್ದ ವೆಂಕಟಶಾಮಿಯನ್ನು ಅವನ ಮನೆಗೆ ಕರೆತಂದ. ವೆಂಕಟಶಾಮಿ ಚೇತರಿಸಿಕೊಳ್ಳಲಿಲ್ಲ. ತಾನು ಮತ್ತು ತನ್ನ ಪ್ರೇಮದ ಹುಡುಗಿ ಮೂರು ರಾತ್ರಿ ಮಲಗಿದ್ದ ತಮ್ಮ ಹೊಲದ ಬದಿಯಲ್ಲಿ ತನಗೆ ಸಮಾಧಿಗೆ ಎಡೆಮಾಡಿಕೊಡಬೇಕೆಂದು ಅಪ್ಪನಿಗೆ ಹೇಳುತ್ತಾನೆ. ತಂದೆ ತಾಯಿ ಅವನ ಮಾತು ನಡೆಸಿಕೊಡುತ್ತಾರೆ.

ಕತೆಯಲ್ಲಿ ಪ್ರೇಮದ ವೈಭವೀಕರಣವಿಲ್ಲ. ಕೇವಲ ವಸ್ತು ಕಥನವಿದೆ. ವೆಂಕಟಶಾಮಿ ತನ್ನ ಪ್ರೀತಿಗಾಗಿ ಧೀರನಂತೆ ಬದುಕನ್ನೇ ಬಲಿಕೊಟ್ಟ. ಕತೆಯಲ್ಲಿ ಅನುಕ್ತವಾದ ಅಂಶ ಎಂದರೆ ದೊಂಬರ ಹುಡುಗಿಯ ಭಾವನೆಗಳೇನು ಎಂಬುದು?

ಪ್ರೀತಿ ಪ್ರಣಯಗಳು ಜಾತಿಯ ಕಟ್ಟು ಪಾಡನ್ನು ಮೀರಿ ಹೋಗಬಲ್ಲವು ಎಂಬುದನ್ನು-ಆಗಿನ ಸಮಾಜ ಅದನ್ನು ಆಗಗೊಳಿಸಲಿಲ್ಲ ಎಂಬುದನ್ನು ಅತ್ಯಂತ ನಿರುದ್ವಿಗ್ನವಾಗಿ ಮಾಸ್ತಿಯವರು ಸಾರಿ ಹೇಳಿದ್ದಾರೆ. ಸಮಾಜದ ವಿಧಿ ನಿಷೇಧಗಳ ಹಂಗನ್ನು ನೀಗಿಕೊಂಡ, ಈ ಮನುಷ್ಯ ಸಂಬಂಧಕ್ಕೆ ಉನ್ನತ ಪ್ರಣಯದ ಅದಮ್ಯತೆಗೆ ನಿರೂಪಕನ ಮೌನ ಸಮ್ಮತಿ ಇದೆ. ಇದು ಮಾಸ್ತಿ ಹೊಸ ಮೌಲ್ಯಗಳ ಶೋಧಕರಲ್ಲ ಎಂಬ ಎಂ.ಜಿ.ಕೆ. ಯವರ ಮಾತಿಗೆ ಸವಾಲಿನಂತಿದೆ. ಆದರೆ ಇದರ ಒಂದು ಮಿತಿಯನ್ನು ಶ್ರೀ ರಾಜೇಂದ್ರ ಚೆನ್ನಿ ಸರಿಯಾಗಿಯೇ ಗುರುತಿಸಿದ್ದಾರೆ. ವ್ಯಕ್ತಿಗಳ ಮಟ್ಟದ-"ಈ ಪ್ರವೃತ್ತಿಗಳನ್ನು ಸುತ್ತಲಿನ ಸಮಾಜದ ಮೌಲ್ಯ ಕಲ್ಪನೆಗಳ ಜತೆ ಕರ್ಷಣಕ್ಕೊಳಿಸಿ ಆಳಕ್ಕಿಳಿದು ಅವುಗಳನ್ನು ಪರೀಕ್ಷಿಸುವ ಸಾಮಾಜಿಕತೆಯ ಅಂಶ ಅವರಲ್ಲಿ ಇಲ್ಲದಿರುವುದು ಒಂದು ಮುಖ್ಯ ಕೊರತೆ".[೧೧] "ವೆಂಕಟಿಗನ ಹೆಂಡತಿ' ಕತೆಯೂ ಇಂಥದೇ, ತನ್ನ ಹೆಂಡತಿ ತನಗಿಂತ ಶ್ರೀಮಂತನಾದ ರೆಡ್ಡಿಯನ್ನು ಮೆಚ್ಚಿ ಅವನೊಂದಿಗೆ ಬದುಕಲು ಹೋದರೂ ಅವಳ ವಿಷಯಕ್ಕೆ ಯಾವುದೇ ಕಹಿ ಇಟ್ಟುಕೊಳ್ಳದೆ ಅಸಾಧಾರಣ ಸಹನೆ, ಔದಾರ್ಯ, ಅನುಕಂಪೆಯಿಂದ ನಡೆದುಕೊಳ್ಳುತ್ತಾನೆ.

ಅವನ ಅತ್ತೆ, ಅವನ ಹೆಂಡತಿ, ಅವಳ ಪ್ರಿಯಕರ ಎಲ್ಲರೂ ಬೇರೊಂದು ಮದುವೆ ಆಗುವಂತೆ ತಿಳಿಸಿದರೂ ವೆಂಕಟಿಗ ಮಾತ್ರ - "ಇಂದಲ್ಲದಿದ್ದರೆ, ಇನ್ನೊಂದು ದಿನ, ಈ ಜನ್ಮದಲ್ಲಿಲ್ಲದಿದ್ದರೆ, ಇನ್ನೊಂದು ಜನ್ಮಕ್ಕಾದರೂ ನಾನು ಇವಳಿಗೆ ದಿಕ್ಕಾಗಬೇಕು" - ಎಂಬ ನಂಬಿಕೆ ತಾಳಿ ಊರು ಬಿಟ್ಟು ಹೋಗಿ ಸೌದೆ ಮಾರಿಕೊಂಡು ಬಾಳುವೆ ನಡೆಸುತ್ತಾನೆ. ಕೆಲದಿನಗಳ ನಂತರ ಪ್ರಿಯಕರನ ಹೀನ ಸ್ವಭಾವಕ್ಕೆ ಬೇಸತ್ತು ವೆಂಕಟಿಗನೊಂದಿಗೆ ಬಾಳಬೇಕೆಂದು, ಹಿಂತಿರುಗಿ ಬಂದವಳಿಗೆ ಒಂದು ಮಗುವಿರುವುದು ತಿಳಿದೂ, ಒಪ್ಪಿಕೊಂಡು ಅವಳಿಗೆ ಆಸರೆಯಾಗಿ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ವೆಂಕಟಿಗ ತೋರುವ ತಾಳ್ಮೆ, ಸಹನೆ, ಔದಾರ್ಯ, ಅದ್ಭುತ. ವೆಂಕಟಿಗನ ಈ ಉದಾತ್ತ ನಡವಳಿಕೆ ವ್ಯಕ್ತಿಯ ಮಟ್ಟದ್ದೇ ನಿಜ. ಸಮುದಾಯ ಅಥವಾ ಸಂಸ್ಕೃತಿಯ ಹಿನ್ನಲೆಯಿಂದ ಬಂದದ್ದೆಂದು ಹೇಳಲಾಗುವುದಿಲ್ಲ.

"ಸಂಯಮಿ ಕೇಟೋ" ಎಂಬ ಕತೆ ಕೂಡ ಇದೇ ರೀತಿಯ ವಸ್ತುವನ್ನು ಒಳಗೊಂಡಿದೆ. ಕೇಟೋನ ಗೆಳೆಯ ಹೋರ್ಟೆನ್ಸಿಯಸ್, ಕೇಟೋನ ಹೆಂಡತಿ ಮಾರ್ಸಿಯಾಳನ್ನು ಬಿಟ್ಟುಕೊಡುವುದಾದರೆ ತಾನು ಮದುವೆ ಮಾಡಿಕೊಳ್ಳುವುದಾಗಿ ಹೇಳುತ್ತಾನೆ. ಕೇಟೋ ಮರುಮಾತಿಲ್ಲದೆ ಒಪ್ಪುತ್ತಾನೆ. ಮುಂದೆ ಹೋರ್ಟೆನ್ಸಿಯಸ್ ಸಾವಿಗೀಡಾದಾಗ ಮಾರ್ಸಿಯಾಳನ್ನು ಮತ್ತೆ ಕೈಹಿಡಿಯುತ್ತಾನೆ. ಎರಡೂ

ಸಂದರ್ಭಗಳಲ್ಲಿ ಅತ್ಯಂತ ನಿರ್ಲಿಪ್ತ ನಿರುದ್ವೇಗ ಭಾವದಲ್ಲಿ ಕೇಟೋ ನಡೆದುಕೊಂಡ. ಕೇಟೋ ಬದುಕಿ ಬಾಳಿದ ರೋಂ ಸಮಾಜದಲ್ಲಿ ಇಂಥದು ಉಂಟೆಂದು, ಕೇಟೋ ಕೂಡ ಇಂಥ ಸಂಯಮದ ನಡವಳಿಕೆಗೆ ಹೆಸರಾಗಿದ್ದನೆಂದೂ ಹೇಳುತ್ತಾರೆ.

'ಮೊಸರಿನ ಮಂಗಮ್ಮ' ಮಾಸ್ತಿಯವರ ಹೆಚ್ಚು ಚರ್ಚಿತವಾದ ಇನ್ನೊಂದು ಕಥೆ. ಮೊಸರು ಮಾರಿ ಜೀವಿಸುವ ಮಂಗಮ್ಮನಿಗೂ, ಅವಳ ಸೊಸೆಗೂ ಉಂಟಾಗುವ ಬಿಕ್ಕಟ್ಟನ್ನು ವಸ್ತುವಾಗಿ ಉಳ್ಳ ಕತೆ. ಅತ್ತೆ ಸೊಸೆ ನಡುವಿನ ಯಾಜಮಾನ್ಯದ ಮೇಲಾಟ ಜಗಳದಲ್ಲಿ ಕೊನೆಗೊಂಡು ಮಂಗಮ್ಮ ಮಗನನ್ನು ಒಂದು ಹಂತದಲ್ಲಿ ಬೈದು ಮನೆ ಬಿಟ್ಟು ಹೊರ ಹೋಗುವ ತೀರ್ಮಾನ ಕೈಗೊಳ್ಳುತ್ತಾಳೆ. ತಾನೇ ಬೇರೆಯಾಗಿ ಒಂಟಿಯಾಗಿ ಇರತೊಡಗುತ್ತಾಳೆ. ಆದರೆ ಮಗು ಅತ್ತೆ ಸೊಸೆಯನ್ನು ಸೇರಿಸುವ ಕೊಂಡಿಯಾಗುತ್ತದೆ. ಒಂಟಿ ಹೆಂಗಸು ಬೇರೆ ಇದ್ದರೆ ಅವರಿವರ ಕಣ್ಣು ಬಿದ್ದೀತು ಎಂಬ, ಹಾಗೂ ಆರ್ಥಿಕ ಭದ್ರತೆಯ ಸಮಸ್ಯೆಯೂ ತಲೆದೋರಿ ಮತ್ತೆ ಮಗನ ಮನೆ ಸೇರುತ್ತಾಳೆ; ಅತ್ತೆ ಸೊಸೆ ಹೊಂದಿಕೊಂಡು ಬಾಳುತ್ತಾರೆ. ಅತ್ತೆ ಸೊಸೆಯರ ನಡುವಿನ ಈ ವೈಮನಸ್ಯವೆಂಬುದು ಸಾರ್ವತ್ರಿಕವೆಂಬ, ಇದೊಂದು ಕೊನೆಯಹಂತ ಕಾಣದ ನಾಟಕ ಎಂಬ ನಿರೂಪಕನ ತಾತ್ವಿಕ ಉದ್ಗಾರದೊಂದಿಗೆ ಕತೆ ಮುಗಿಯುತ್ತದೆ.

ಈ ಇಂಥ ಕೆಲವು ಕತೆಗಳನ್ನು ನಿರ್ವಹಿಸುವಲ್ಲಿ ಮಾಸ್ತಿಯವರು ಬೇಕೆಂದೇ ಸಂಘರ್ಷವನ್ನು ನಿವಾರಿಸುತ್ತಾರೆಂಬುದು ಅವರ ಬಗೆಗಿನ ಆಕ್ಷೇಪಗಳಲ್ಲೊಂದು. ಮಾನವ ಬದುಕಿನ ಶ್ರೇಷ್ಠತೆಯಲ್ಲೇ ಅವನ ಉದಾತ್ತತೆಯನ್ನು ಕಾಣಿಸಬೇಕೆಂಬ ಉದ್ದೇಶಕ್ಕೆ ಅನುಗುಣವಾಗಿ ಅವರಿಗೆ ಸಂಘರ್ಷಗಳು ಮುಖ್ಯವೆನಿಸದೆ ಹೋಗಿವೆ. ಮಾಸ್ತಿಯವರು ಸಂಘರ್ಷಗಳನ್ನು, ತುಮುಲಗಳನ್ನು ಪೂರ್ತಿಯಾಗಿ ತರದೆ ಬಿಟ್ಟಿಲ್ಲ, ಎಂಬುದನ್ನು ಗಮನಿಸಬೇಕು. ಆ ಸಂಘರ್ಷಗಳು, ತುಮುಲಗಳ ನಡುವಿನಿಂದಲೇ ವ್ಯಕ್ತಿತ್ವ ಎತ್ತರಕ್ಕೇರುವ ಪರಿಯನ್ನು ಚಿತ್ರಿಸುವ ಕತೆಗಳನ್ನೂ ಬರೆದಿದ್ದಾರೆಂಬುದನ್ನು ಗಮನಿಸದೇ ಹೋದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಕಲ್ಮಾಡಿಯ ಕೋಣ, ಗೌತಮಿ ಹೇಳಿದ ಕತೆ, ಕರಿಯ ಸವಾರ, ಪ್ರಿಯದರ್ಶಿ ಅಶೋಕ ಇವೆಲ್ಲ ಅಂಥ ಕತೆಗಳು. ಇವುಗಳು ಮಾನವೀಯವಾದ ಸಂದರ್ಭಗಳಿಂದ ಕೂಡಿದ್ದು ಬಹುಮುಖ್ಯವಾದ ತಾತ್ವಿಕ ಸವಾಲುಗಳನ್ನು ಎದುರಿಸಿವೆ. ಈ ಸಂದರ್ಭದಲ್ಲಿ ಪುರುಷೋತ್ತಮ ಬಿಳಿಮಲೆಯವರು ಹೇಳಿರುವ ಈ ಮಾತು ಮಾಸ್ತಿಯವರ ಮಿತಿ ಮತ್ತು ಮಹತಿ ಎರಡನ್ನೂ ಒಟ್ಟಾಗಿಯೇ ಧ್ವನಿಸುತ್ತದೆ – "ಅವರ ಶ್ರೇಷ್ಠತೆ ಇರುವುದು ಅಂಥ ಸಂಘರ್ಷದ ನೆಲೆಗಳನ್ನು ಆಯ್ದುಕೊಳ್ಳುವುದರಲ್ಲಿ ಮತ್ತು ಮೌನವಾಗಿ ಅದನ್ನು ಧ್ವನಿಸುವಲ್ಲಿ."[೨]

ಮಾಸ್ತಿಯವರು ಕತೆಯಲ್ಲಿ ತಂತ್ರಕ್ಕಾಗಿ ತಲೆ ಕೆಡಿಸಿ ಕೊಂಡವರಲ್ಲ. ಅವರಲ್ಲಿ ಪಶ್ಚಿಮದ ಕತೆಗಳ ತಂತ್ರವಾದ ನಾಟಕೀಯ ಆರಂಭ, ಕುತೂಹಲ ಕೆರಳಿಸುತ್ತ ಹೋಗುವ ಬೆಳವಣಿಗೆ, ಅನಿರೀಕ್ಷಿತ ತಿರುವಿನ ಮುಕ್ತಾಯ, ಚುರುಕಾದ ಸಂಭಾಷಣೆಗಳ ಮೂಲಕ ಪ್ರಸಂಗಗಳ ನಾಟ್ಯೀಕರಣ ಇತ್ಯಾದಿಗಳು ಇಲ್ಲ. ಅವರ ಕತೆಗಳ ವಿಧಾನ ಭಾರತೀಯ ಪರಂಪರೆಯದು. ಆದರೆ ಅದು ಮಾಸ್ತಿಯವರ ಕೈಯಲ್ಲಿ ಪಡೆದುಕೊಂಡ ಒಟ್ಟಾರೆ ಸ್ವರೂಪ ಬೇರೆಯದೇ ಆಗಿತ್ತು. ಆ ಕಾಲಕ್ಕು ಹೊಸದೇ ಆಗಿತ್ತು. ಇದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ.[೯] ಮಾಸ್ತಿಯವರ ಕಥಾ ನಿರೂಪಣಾ ತಂತ್ರದಲ್ಲಿ ಶ್ರೀ ಗಿರಡ್ಡಿಯವರು ಎರಡು ಬಗೆಗಳನ್ನು ಗುರುತಿಸುತ್ತಾರೆ. ಮೊದಲನೆಯದು ಹಲವಾರು ನಿರೂಪಕರ ಸರಣಿ. ಇದರಲ್ಲಿ ಯಾರೋ ಇನ್ನೊಬ್ಬರು ತಮಗೆ ಹೇಳಿದ ಕತೆಯನ್ನು ತಾವು ಮತ್ತೆ ಓದುಗರಿಗೆ ಹೇಳುತ್ತಿರುವಂತಿರುವ ಕತೆಗಳು. ಇದರಲ್ಲಿ ಕೆಲವು ಕತೆಗಳು ಮತ್ತೆ ಹಲವಾರು ಮುಖಗಳಿಂದ ಹರಿದು ಬಂದಂತಿರುತ್ತವೆ. ಈ ನಿರೂಪಣಾ ತಂತ್ರ ಪ್ರಾಚೀನ ಭಾರತೀಯ ಕಾವ್ಯ ಪುರಾಣಗಳ ತಂತ್ರವನ್ನು ಹೋಲುವಂಥದು.

ಇದರಿಂದ ಹಲವಾರು ಪ್ರಯೋಜನಗಳನ್ನು ಸಾಧಿಸಲಾಗಿದೆ. ಮೊದಲನೆಯದಾಗಿ ಮಾಸ್ತಿಯವರ ಕತೆಗಳ ಪ್ರಾಚೀನ ಸಾಹಿತ್ಯದ ಸಂಬಂಧ ಗುರುತಿಸುತ್ತ ಚಿತ್ತಾಲರು ಹೇಳಿರುವ ಮಾತು. ಅದೆಂದರೆ "ರಾಮಾಯಣ, ಮಹಾಭಾರತ ಕತೆಗಳನ್ನು ಹೇಳುವದು, ಕೇಳುವುದು ಒಂದು ಪುಣ್ಯದ ಕೆಲಸ. ಋಷಿಗಳು ಕೂಡ ಅವನ್ನು ಕೇಳಲು ಅಪೇಕ್ಷಿಸುತ್ತಿದ್ದರು ಎನ್ನುವಂಥ ಶ್ರದ್ಧೆಗೆ ಸಂವಾದಿಯಾಗಿ ನಮ್ಮ ಜೊತೆಯ ಜೀವದ ಬಗ್ಗೆ ಬೇರೆ ಜೀವಕ್ಕೆ ಹೇಳುವ ಕೆಲಸ ಕೂಡ ಅಷ್ಟೇ ಒಳ್ಳೆಯದು ಎಂಬ ಶ್ರದ್ಧೆಯನ್ನು, ಅಂಥ ಪ್ರಭೆಯುಳ್ಳ ಉತ್ಸಾಹವನ್ನು ಹುಟ್ಟಿಸಿದ್ದು ಮಾಸ್ತಿ ಪರಂಪರೆಯ ಅತಿ ಮುಖ್ಯ ಸಾಧನೆ ಎಂಬುದು."[೧೪]

ಎರಡನೆಯದಾಗಿ ಕಥಾಲೇಖಕನನ್ನು ಕಥಾನಿರೂಪಕನಿಂದ ಬೇರೆ ಎಂದು ತೋರಲು ಕತೆಯೊಳಗೇ ಕಥಾ ನಿರೂಪಕನಿಗೂ ಒಂದು ವಿಶಿಷ್ಟ ವ್ಯಕ್ತಿತ್ವ ನೀಡುವುದು. ಇವುಗಳಲ್ಲಿ ನಿರೂಪಕನ ಜಾತಿ, ವಯಸ್ಸು, ವರ್ಗ, ವೃತ್ತಿ ಇತ್ಯಾದಿ ಖಚಿತಪಡಿಸುವುದರ ಮೂಲಕ ವಾಸ್ತವಿಕತೆಯ ದೃಷ್ಟಿಯಿಂದ ಹೆಚ್ಚಿನ ಅಧಿಕೃತತೆ ತಂದು ಕೊಡುವುದು.

ಮೂರನೆಯದಾಗಿ ಕತೆ ನಡೆದ ಕಾಲ ಮತ್ತು ಅದನ್ನು ಹೇಳಿದ ಕಾಲದ ನಡುವಿನ ಅಂತರವನ್ನು ಸ್ಥಾಪಿಸುವುದು. ಈ ದೂರದಿಂದಾಗಿ ಎರಡು ಮೌಲ್ಯ

ವ್ಯವಸ್ಥೆಗಳ ಮುಖಾಮುಖಿ ಸಾಧ್ಯ. ಮಾಸ್ತಿಯವರ ಬಹುಮಟ್ಟಿನ ಸಾಮಾಜಿಕ ಕತೆಗಳೆಲ್ಲ ಮೊದಲ ಗುಂಪಿಗೆ ಸೇರುತ್ತವೆ.

ಎರಡನೇ ಗುಂಪಿನಲ್ಲಿ ಅವರ ಪೌರಾಣಿಕ ಮತ್ತು ಐತಿಹಾಸಿಕ ಕತೆಗಳು ಸೇರುತ್ತವೆ. ಇವುಗಳ ನಿರೂಪಣಾ ವಿಧಾನ ಸರ್ವಸಾಕ್ಷಿತ್ವ ವಿಧಾನ. ಜನಪದ ಕತೆಗಳಲ್ಲಿ, ವಡ್ಡಾರಾಧನೆ, ಧರ್ಮಾಮೃತ, ಕಥಾ ಸರಿತ್ಸಾಗರ ಇವುಗಳಲ್ಲಿ ಇದೇ ನಿರೂಪಣಾ ವಿಧಾನ ಕಾಣುತ್ತೇವೆ. ಇದರಲ್ಲಿ ಅವರ ಮೂಲ ಉದ್ದೇಶ ಒಂದು ದೂರವನ್ನು ಸಾಧಿಸುವುದೇ ಆಗಿದೆ. ಕತೆಗಳು ನಡೆದ ಕಾಲ ದೇಶಗಳಿಗೂ ಅವನ್ನು ಕೇಳುತ್ತಿರುವ ಕಾಲದೇಶಗಳಿಗೂ ನಡುವೆ ಅಂತರ ಬೇಕಾಗುತ್ತವೆ. ಈ ಕಾಲದೇಶಗಳ, ಮೌಲ್ಯವ್ಯವಸ್ಥೆ, ಸಂಸ್ಕೃತಿಗಳ ಅಂತರದಿಂದಾಗಿಯೇ ಅವುಗಳು ನಮಗೆ ಕುತೂಹಲಕರವಾಗಿಯೂ ಅರ್ಥಪೂರ್ಣವಾಗಿಯೂ ಕಾಣುತ್ತವೆ. ಈ ನೇರ ನಿರೂಪಣೆಯ ಮಾದರಿ ಜನಪದ ಕತೆಗಳ ಮಾದರಿಯದು.

ಮಾಸ್ತಿಯವರ ಬರವಣಿಗೆಯಂತೂ ಅತ್ಯಂತ ನಿರುದ್ವಿಗ್ನವಾದ ಶಾಂತರೀತಿಯ, ಅವಸರ, ಅಬ್ಬರ, ವಿಸ್ಮಯಗಳಿಲ್ಲದೆ ಸಮಾಧಾನದಿಂದ ಕೂಡಿದ ಬರವಣಿಗೆ ಎಂಬುದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ. ಅವರ ಗದ್ಯ ಶೈಲಿಯೂ ಅದಕ್ಕೆ ತಕ್ಕಂತೆ ತಿಳಿಯಾದ, ಪಾರದರ್ಶಕವೂ ಅಕ್ಲಿಷ್ಟವೂ ಆದ ಶೈಲಿ.

ಕತೆಗಳು, ಅದೆಷ್ಟೋ ಹಿಂದಿನ ಘಟನೆಗಳನ್ನು ನೆನಪಿಸಿಕೊಳ್ಳುವ ರೀತಿಯಲ್ಲಿರುತ್ತವೆ. ಅವರು ಬದುಕನ್ನು ಗ್ರಹಿಸುವ ಕ್ರಮವೇ ಹೀಗೆ. ಗಿರಡ್ಡಿಯವರು ಹೇಳುವಂತೆ “ಇವು ಉದ್ದೇಶಪೂರ್ಣ ಅನುಭವದ ಪುನಃ ಸೃಷ್ಟಿಯಾಗುವುದಕ್ಕಿಂತ ನಿರುದ್ವಿಗ್ನ ನಿರೂಪಣೆಯಾಗುತ್ತವೆ.”[೧೫] ಇದರಿಂದ ನಿರೂಪಣೆಯಲ್ಲಿ ವೈವಿಧ್ಯ ಸಾಧ್ಯವಾಗದೆ, ಸಂಘರ್ಷದ ಸ್ವರೂಪವೂ ತಣ್ಣನೆಯ ರೀತಿಯಲ್ಲಿ ಅಭಿವ್ಯಕ್ತವಾಗುವುದರಿಂದ ಅನೇಕ ವೇಳೆ ಅದೊಂದು ಮಿತಿಯೂ ಆಗುವುದುಂಟು.

ಮಾಸ್ತಿಯವರು ಕನ್ನಡದಲ್ಲಿ ಸಣ್ಣಕತೆಗೆ ಸುನಿಶ್ಚಿತ ರೂಪ ಕೊಟ್ಟು ಅದನ್ನೊಂದು ಸಾಹಿತ್ಯ ಪ್ರಕಾರವಾಗಿ ಬೆಳೆಸಿದವರು. ಗಿರಡ್ಡಿಯವರು ಹೇಳುವಂತೆ ಸಣ್ಣಕತೆಯಂಥ ಮೈನರ್ ಸಾಹಿತ್ಯ ಪ್ರಕಾರವನ್ನು ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡು ಮೇಜರ್ ಬರಹಗಾರರೆನಿಸಿದವರು. ಸಣ್ಣಕತೆಗೆ ಕಲಾತ್ಮಕತೆಯನ್ನು, ಅರ್ಥಸಂಪತ್ತಿಯನ್ನು ತಂದುಕೊಟ್ಟರು. ಎಷ್ಟೇ ಮಿತಿಗಳನ್ನು ಹೊಂದಿದ್ದಾಗ್ಯೂ ಮತ್ತೆ ಮತ್ತೆ ಓದಬೇಕೆಂಬಂಥ ಕತೆಗಳನ್ನು ಅತ್ಯಧಿಕ ಸಂಖ್ಯೆಯಲ್ಲಿ ನೀಡಿರುವ ಲೇಖಕರೆಂದರೆ ಮಾಸ್ತಿಯವರೇ. ಮನುಷ್ಯನಲ್ಲಿರುವ ಒಳ್ಳೆಯತನ, ಪ್ರೀತಿ, ಘನತೆ, ಉದಾತ್ತತೆ, ಮಾನವ ಕರುಣೆ ಮುಂತಾದ ದೈವೀಗುಣಗಳಿಗೆ ಕತೆಗಳಲ್ಲಿ ಆಕೃತಿ ನೀಡಿರುವ ಮಾಸ್ತಿಯವರು ಎಲ್ಲ ಕಾಲಕ್ಕೂ ಉಳಿಯುವಂಥವರು.

○

ಅಧ್ಯಾಯ ೩
ಸಾಮಾಜಿಕ ಕಾದಂಬರಿಗಳು

೧

ಮಾಸ್ತಿಯವರು ಬರೆದದ್ದು ನಾಲ್ಕು ಕಾದಂಬರಿಗಳನ್ನು. ಅವುಗಳಲ್ಲಿ ಮೊದಲು ಬರೆದ ಸುಬ್ಬಣ್ಣ ಹಾಗೂ ಕೊನೆಯಲ್ಲಿ ಬರೆದ ಶೇಷಮ್ಮ ಒಂದು ರೀತಿಯಾದರೆ, ಈ ಮಧ್ಯೆ ಬರೆದ ಚೆನ್ನಬಸವನಾಯಕ ಮತ್ತು ಚಿಕವೀರರಾಜೇಂದ್ರ ಇನ್ನೊಂದು ರೀತಿಯವು. ಸುಬ್ಬಣ್ಣ ಮತ್ತು ಶೇಷಮ್ಮ ವ್ಯಕ್ತಿಗಳ ಬದುಕಿನ ಚಿತ್ರಣವಾಗಿದ್ದು, ಅವರ ವ್ಯಕ್ತಿತ್ವ ವಿಕಾಸದ ಕತೆಯನ್ನು ಹೇಳುತ್ತವೆ. ಚಿಕವೀರರಾಜೇಂದ್ರ ಮತ್ತು ಚೆನ್ನಬಸವನಾಯಕ ಎರಡೂ ಐತಿಹಾಸಿಕ ಕಾದಂಬರಿಗಳಾಗಿದ್ದು, ರಾಜ್ಯಗಳ ಅವನತಿಯ ಕತೆಯನ್ನು ಹೇಳುತ್ತವೆ. ಬಾಳಿನಲ್ಲಿ ಬಂದೊದಗಿದ ಸಂಕಷ್ಟಗಳಿಂದ ಬೆಂದರೂ ಸೋಲದೆ, ಆ ಸಂಕಷ್ಟಗಳಿಂದಲೇ ಸಂಸ್ಕಾರಗೊಂಡ ಜೀವಗಳೆರಡು ಉದ್ಧಾರದ ಹಾದಿ ಹಿಡಿದ ಕತೆ ಮೊದಲೆರಡು ಕಾದಂಬರಿಗಳಲ್ಲಿದ್ದರೆ, ಚೆನ್ನಾಗಿ ಬಾಳಿಬದುಕಿದ ರಾಜ್ಯಗಳೆರಡು ಅಧಿಕಾರ ಕೇಂದ್ರಸ್ಥಾನದಲ್ಲಿದ್ದವರ ಅವಿವೇಕ, ಸ್ವಾರ್ಥ, ದುಷ್ಟತನಗಳಿಂದ ಪತನದತ್ತ ಸಾಗುವ ಕತೆ ಕೊನೆಯ ಎರಡು ಐತಿಹಾಸಿಕ ಕಾದಂಬರಿಗಳಲ್ಲಿದೆ.

೨
ಸುಬ್ಬಣ್ಣ

ಸುಬ್ಬಣ್ಣ ಪುಸ್ತಕರೂಪದಲ್ಲಿ ಪ್ರಕಟವಾದದ್ದು ೧೯೨೮ರಲ್ಲಿ. ಕನ್ನಡದಲ್ಲಿ ಸಾಮಾಜಿಕ ಕಾದಂಬರಿಗಳು ವಿಪುಲವಾಗಿ ರಚನೆಯಾಗತೊಡಗಿದ್ದೇ ಆಗ.

ಶ್ರೀ ನವರತ್ನ ರಾಮರಾಯರು ಹೇಳಿದ ತಮ್ಮ ಪರಿಚಯದ ಶಾಮಣ್ಣ ಎಂಬ ಗಾಯಕನೊಬ್ಬನ ಕತೆ ಮಾಸ್ತಿಯವರ ಸುಬ್ಬಣ್ಣಕ್ಕೆ ಮೂಲ. ಕತೆಯಲ್ಲಿ ಅಲ್ಲಲ್ಲಿ ಸಂಭಾಷಣೆಗಳು ಬರುತ್ತವಾದರೂ ನಿರೂಪಕನೇ ಸರ್ವಸಾಕ್ಷಿತ್ವದ ದೃಷ್ಟಿಕೋನದಿಂದ ಕತೆ ಹೇಳಿದ್ದಾನೆ. ಕತೆಯಲ್ಲಿ ಸುಬ್ಬಣ್ಣನ ಸಂಗೀತ ಸಾಧನೆಯ ವಿಷಯ ಬರುವುದಾದರೂ ಇದು ಮುಖ್ಯವಾಗಿ ಸುಬ್ಬಣ್ಣನ ಬದುಕಿನ ಕತೆ. ವ್ಯಕ್ತಿ ಕೇಂದ್ರಿತವಾಗಿದ್ದ ಅವನ ಬದುಕಿನ ಪರಿಧಿ ವಿಸ್ತರಿಸುತ್ತ ವಿಶ್ವಕೇಂದ್ರಿತವಾಗುತ್ತ ಹೋಗುವ ವಿಸ್ಮಯದ ಪರಿಯನ್ನು ಇದರಲ್ಲಿ ನಾವು ಕಾಣುತ್ತೇವೆ. ಇದರಿಂದ ಅವನ ಸಂಗೀತ ಕಲೆಗೂ ವಿಶೇಷ ಕಳೆ ಪ್ರಾಪ್ತವಾಗುತ್ತದೆ. ಮೂರ್ತಿರಾಯರು ಹೇಳುವಂತೆ "ಸುಬ್ಬಣ್ಣ ಉದ್ಧಾರವಾದದ್ದರಿಂದ ಅವನ ಸಂಗೀತ ಉದ್ಧಾರವಾಯಿತು."[೧೬] ನಿರೂಪಕರೇ ಹೇಳುವಂತೆ- "ಮೊದಲಲ್ಲಿ ಕಠಿಣತೆಯಿಂದ ಕೂಡಿದ್ದ ಇವರ ಮನಸ್ಸು ದೇವರ ಕೃಪೆಯಿಂದ ನಯವಾಗುತ್ತ ಆಗುತ್ತ ಪೂರ್ಣವಾದ ಸಂಸ್ಕಾರ ಪಡೆದು ಕೊನೆಗೆ ಅಪರಂಜಿಯಾಯಿತು." ಕಾಠಿಣ್ಯದಿಂದ ಮೃದುತ್ವದತ್ತ, ಸಂಕುಚಿತತೆಯಿಂದ ವೈಶಾಲ್ಯದತ್ತ, ಜೀವನ ನಿರಾಕರಣೆಯಿಂದ ಜೀವನ ಸ್ವೀಕರಣೆಯತ್ತ, ಸಾಂಸಾರಿಕ ಬಂಧನದಿಂದ ವಿಮುಕ್ತಿಯತ್ತ ಸುಬ್ಬಣ್ಣನ ಬದುಕು ಸಾಗುತ್ತ ಹೋಗುವ, ಮಾಗುತ್ತ ಹೋಗುವ ಪರಿಯನ್ನು ಕಾದಂಬರಿ ಅತ್ಯಂತ ನಿರುದ್ವಿಗ್ನವಾಗಿ ನಿರಾಡಂಬರವಾಗಿ ನಮ್ಮ ಮುಂದಿಡುತ್ತದೆ.

ಸುಬ್ಬಣ್ಣನ ಬದುಕನ್ನು ನಾಲ್ಕು ಘಟ್ಟಗಳಲ್ಲಿ ಕಾದಂಬರಿ ಚಿತ್ರಿಸುತ್ತದೆ. ಕಲ್ಕತ್ತೆಗೆ ಹೋಗುವವರೆಗಿನ ಮೊದಲ ಇಪ್ಪತ್ತೈದು ವರ್ಷಗಳು, ಅನಂತರದ ೩೫ ವರ್ಷಗಳ ಕಲ್ಕತ್ತೆಯ ಬದುಕು. ಅಲ್ಲಿ ತನ್ನವರೆಲ್ಲರನ್ನೂ ಸರ್ವಸ್ವವನ್ನೂ ನೀಗಿಕೊಂಡು ನಿರ್ಲಿಪ್ತ ಮನೋಭಾವದಿಂದ ಬೊಂಬಾಯಿಗೆ ಬಂದು ಕಳೆದ ಅಲ್ಪ ಕಾಲಾವಧಿ. ಕೊನೆಯದಾಗಿ ತೊರೆಯಪುರಕ್ಕೆ ಬಂದು ಅಲ್ಲಿ ೧೩ ವರ್ಷಗಳನ್ನು ಕಳೆದು ಲೋಕಬಿಟ್ಟದ್ದು.

ಮೊದಲಿನಿಂದಲೂ ಸುಬ್ಬಣ್ಣನದು ಆತ್ಮಕೇಂದ್ರಿತವಾದ ವ್ಯಕ್ತಿತ್ವ. ತಂದೆಯ ಇಚ್ಛೆಗೆ ವಿರುದ್ಧವಾಗಿ ಸಂಗೀತ ಕಲಿಯಬೇಕೆಂದು ಬಯಸಿ, ಅದಕ್ಕಾಗಿ ಅಪಾರ ಸಾಧನೆ ಮಾಡಿದ. ಹದಿನೈದು ವರ್ಷಗಳಲ್ಲಿ ಹಾಡುಗಾರಿಕೆಯಷ್ಟೇ ಅಲ್ಲದೆ ಪಿಟೀಲು,

ವೀಣೆಗಳಲ್ಲೂ ನಿಪುಣನಾದ. ತನ್ನ ಅಭಿಲಾಷೆಯ ಸಾಧನೆಯ ಹಾದಿಯಲ್ಲಿ ಹೆಂಡತಿಯ ವಿಷಯಕ್ಕೆ ಕೂಡ 'ಇದೊಂದು ಶನಿ' ಎಂಬ ಧೋರಣೆ. ಮನೆಯಲ್ಲಿಯ ಕಾರ್ಪಣ್ಯದ ಬದುಕು, ತಾಯಿಯ ಪಕ್ಷಪಾತದ ವರ್ತನೆ, ಸಂಗೀತಗಾರರ ಅಸೂಯೆ, ಎಲ್ಲಕ್ಕಿಂತ ಹೆಚ್ಚಾಗಿ ಹೆಂಡತಿಯನ್ನು ತಾನು ಹೊಡೆದಾಗ, ಆಕೆ ಅದಕ್ಕೆ ಪ್ರತಿಯಾಗಿ ತನ್ನ ಕೈಯನ್ನು ಮುತ್ತಿಟ್ಟು ಪ್ರೀತಿ ತೋರಿಸಿದ್ದು–ಇವೆಲ್ಲದರಿಂದ ಅವನ ಆತ್ಮಕೇಂದಿತ ಮನಸ್ಸು ತನ್ನ ಸಂಸಾರದ ಕಡೆಗೆ, ತನ್ನ ಸ್ವಜನರ ಕಡೆಗೆ ತಿರುಗುತ್ತದೆ. ಅದರಿಂದ ಏನೇ ಆಗಲಿ ಅವರನ್ನು ಕಷ್ಟದಿಂದ ಪಾರುಮಾಡಿ ಸುಖವಾಗಿರಿಸಬೇಕೆಂಬ ಭಾವನೆ ಬಲಿತು ಒಮ್ಮೆಗೇ ನಿರ್ಧರಿಸಿ ಹೆಂಡತಿ ಮಗುವಿನೊಂದಿಗೆ ಮನೆ ಬಿಟ್ಟು ಹೊರಡುತ್ತಾನೆ. ಹೀಗಾಗಿ ಅವನ ಅಹಂಕಾರಕ್ಕೆ ಬಿದ್ದ ಮೊದಲ ಪೆಟ್ಟಿನಿಂದ, ತನ್ನ ಕಡೆಗಿದ್ದ ದೃಷ್ಟಿ ಸರಿದು, ತನ್ನವರ ಸುಖದತ್ತ ಹರಿಯುತ್ತದೆ. ಅವರ ಕಷ್ಟ ಕೋಟಲೆ ಕೊನೆಗಾಣಿಸಬೇಕೆಂಬ ಸಾನುಕ್ರೋಶಪರತೆಗೆ ಮೊದಲಿಡುತ್ತದೆ. ಹೀಗೆ ಪ್ರಾರಂಭವಾದ ಸ್ವಜನರ ವಿಷಯವಾದ ಹಿತಚಿಂತನೆ ಕಲ್ಕತ್ತೆಯ ದೀರ್ಘಾವಧಿಯಲ್ಲಿ ಅಪೂರ್ವ ಅನುರಕ್ತಿಯಾಗಿ ಗಾಢಗೊಳ್ಳುತ್ತದೆ.

ಸುಬ್ಬಣ್ಣನ ಬದುಕಿನಲ್ಲಿ ಅವನ ಹೆಂಡತಿ ಲಲಿತಮ್ಮನ ಪಾತ್ರ ಅತ್ಯಂತ ಮಹತ್ವಪೂರ್ಣವಾದದ್ದು. ಪ್ರೀತಿಯ ನಿಜವಾದ ಅರ್ಥವೇನೆಂಬುದನ್ನು ಮನವರಿಕೆ ಮಾಡಿಕೊಟ್ಟವಳೇ ಆಕೆ. ತನ್ನ ಶಾಂತ, ಸ್ನಿಗ್ಧ ನಡೆವಳಿಕೆಯಿಂದ, ತನ್ನ ಪ್ರೇಮಲ ಸ್ವಭಾವದಿಂದ, ಸುಬ್ಬಣ್ಣನ ಹೃದಯದ ಮೇಲೆ ಅಪಾರ ಪ್ರಭಾವ ಬೀರಿದಳು. ತನ್ನ ಪಾಲಿನ ಸುಖ, ಸಂತೋಷಗಳನ್ನು ಮರೆಯಲು ಕಲಿತಿದ್ದ ಅವಳು, ಗಂಡ, ಮಕ್ಕಳ ಪಾಲಿಗೆ ದೇವಿಯ ಅವತಾರವೆಂಬಂತೆ, ರಕ್ಷಕಳಾದಳು. ಸುಬ್ಬಣ್ಣನಿಗೆ ಹೆಂಡತಿಯ ವಿಷಯಕ್ಕೆ ಅತೀವ ಅಕ್ಕರೆ, ಅಣ್ಣ ತಂಗಿಯರೆಂಬಂಥ ವಿಚಿತ್ರ ಸ್ನೇಹ ಮೊಳೆಯಿತು. ಅವನಲ್ಲಿ ಎಂಥ ಪರಿವರ್ತನೆ ಉಂಟಾಯಿತೆಂದರೆ, ಗಂಡನನ್ನು ದೇವರೆಂದು ಆರಾಧಿಸುವ ಇವಳ ಈ ದೇವರ ಭಕ್ತಿ ಎಂಥದು! ಇವಳ ಜೀವ ಎಷ್ಟು ಸಂಸ್ಕಾರ ಪಡೆದದ್ದು! ಎಂದು ಅನ್ನಿಸಿತು. ಕೊನೆಗೆ ಅವಳು ತನ್ನನ್ನು ತಿದ್ದುವುದಕ್ಕೆಂದು ಬಂದಿದ್ದ ದೇವಿಯ ಅವತಾರವೇ ಎಂದು ಭಾವಿಸಿಕೊಂಡನು. ಅವಳು ಗಂಡನನ್ನು ದೇವರೆಂದು ಆರಾಧಿಸುತ್ತ ಅವನನ್ನು ದೈವತ್ವದ ದಾರಿಗೆ ತಂದಳು.

ಹೆಂಡತಿ ಮಕ್ಕಳ ಪ್ರೀತಿ ಸುಬ್ಬಣ್ಣನ ಬದುಕನ್ನು ಆವರಿಸುವ ಈ ಅವಧಿಯಲ್ಲೇ ಅವನ ದುರ್ವಿಧಿಯಿಂದಾಗಿ ಅವರೆಲ್ಲರೂ ಅವನ ಬಾಳಿನಿಂದ ಶಾಶ್ವತವಾಗಿ ಕಣ್ಮರೆಯಾಗಿ ಆತನ ಬಾಳು ಬರಿದಾಗಿ ಕೇವಲ–"ಕಾಗೆ ಮಳೆಯಲ್ಲಿ ನೆನೆದ

ಹಾಗೆ" ಬರೀ ದುಃಖದಲ್ಲೇ ನೆನೆದದ್ದಾಗುತ್ತದೆ. ನಾವು ಹುಟ್ಟುವುದು ಏಕೆ? ಬಾಳುವುದು ಹೇಗೆ। ಬಾಳಿನಲ್ಲಿ ಯಾವುದು ನಿಜ, ಯಾವುದು ಭ್ರಮೆ ಎಂಬ ಪ್ರಶ್ನೆಗಳಿಗೆ ಉತ್ತರ ತೋಚದೆ ಜೀವನವೆನ್ನುವುದು ಸಭಿಕರಿಗೆ ವೇಷ ಹಾಕಿ ಕುಣಿಸಿದ ನಾಟಕ ಎನಿಸಿತು. ತನ್ನ ಇದುವರೆಗಿನ ಬದುಕು ಒಂದು ಮಕ್ಕಳ ಆಟವಾಗಿ ಕಂಡಿತು. ಎಲ್ಲರನ್ನೂ ಕಳೆದುಕೊಂಡು ಬದುಕೇ ಶೂನ್ಯವಾದ ಈ ಅನಾಥ ಸ್ಥಿತಿಯಲ್ಲಿ, ಅಸಹನೀಯವಾದ ಏಕಾಕಿತನದಲ್ಲಿ ಆತನ ಬದುಕು ಕೋಪ ತಾಪ ಕಾರ್ಣ್ಯ ಅಸಹನೆಗಳಿಗೆ ಇಂಬು ಕೊಡದೆ ತನ್ನ ಹೆಂಡತಿಯ-'ಪತಿಯೇ ಪರದೈವವೆಂಬ'- ದೈವಭಕ್ತಿ ಎಂಥದೆಂದು ತಿಳಿಯಲು ತೀರ್ಥಯಾತ್ರೆ ಕೈಗೊಂಡ.

ಸುಬ್ಬಣ್ಣನ ಬದುಕಿನಲ್ಲಿ ಈ ಅನಾಥ ಪ್ರಜ್ಞೆ ತಲೆ ಹಾಕಿದಾಗಲೇ ಅವನಿಗೆ ತನ್ನವರಲ್ಲದ, ಮಿಠಾಯಿ ಮಾರುವ ಮುದುಕಿ ಮರುಕ ತೋರುವುದು, ಬೊಂಬಾಯಿ ಸಾಹುಕಾರ ಇವನ ಪಿಟೀಲು ಸಂಗೀತದಿಂದ ಆನಂದ ಪಡೆದು, ಗೌರವ ತೋರುವದು, ಅವನ ಮಗಳು ಹಣ್ಣು ಕೊಡುವುದು-ಇವೆಲ್ಲ ಸಂಗತಿಗಳಿಂದ ತನಗರಿಯದಂತೆಯೇ ಮೊದಲು ಮೂಡಿದ್ದ ಜಂಬ, ಉಪಕಾರ, ಬುದ್ಧಿಗಳು ತೊಲಗಿ ಮನಸ್ಸು ಮೃದುವಾಯಿತು. ಯಾವುದನ್ನೂ, ಯಾರನ್ನೂ ಹಚ್ಚಿಕೊಳ್ಳಬಾರದೆಂದಿದ್ದ, ಸನ್ಯಾಸಿಯಂತೆ ಇದ್ದು ಬಿಡಬೇಕೆಂದಿದ್ದವನಿಗೆ ಪ್ರೀತಿ ಎಂಬುದು ಸಂಕುಚಿತ ಪರಿಧಿಯಲ್ಲಿ ಬಂದಿಸಲ್ಪಟ್ಟಿರು ವಂಥದಲ್ಲವೆಂಬುದು ಅನುಭವಕ್ಕೆ ಬಂತು. "ಕಟ್ಟಿಕೊಂಡವನಿಗೆ ಬಿಟ್ಟ ದುಃಖ ತಪ್ಪಿದ್ದಲ್ಲ. ಬಿಟ್ಟೇ ಇರುವವನಿಗೆ ದುಃಖವೇ ಇಲ್ಲಿ" -ಎಂಬ ಗೀತೆಯ ಮಾತಿನ ಸತ್ಯ ಅನುಭವಕ್ಕೆ ಬಂದಿತು.

ಅವನಲ್ಲಿ ಈ ನಿಸ್ಸಂಗಿತನದ ಭಾವ, ನಿರಹಂಕಾರದ ಭಾವ ಮೂಡಿದ ಸಮಯಕ್ಕೆ ಸಾಹುಕಾರನ ಮನೆಯಲ್ಲಿ ಶ್ರೀಕೃಷ್ಣನನ್ನು ಕುರಿತ ರಾಧೆಯ ವಿರಹಗೀತೆ ನುಡಿಸುತ್ತಿದ್ದಾಗ-"ವಿರಹದಿಂದ ವ್ಯಥೆಪಡುತ್ತಿರುವ ರಾಧೆಯೇ ತಾನು, ಮಾನವರೆಲ್ಲ ಈ ವಿರಹದಲ್ಲಿದ್ದಾರೆ. ಅವರಿಗೆ ಅದರ ಜ್ಞಾನ ಬಂದಿಲ್ಲ. ಸಂಸಾರವೇ ಈ ವಿರಹ. ತಾವು ತಮ್ಮ ದೇವರನ್ನು ಕಾಣದೆ ಹುಡುಕುತ್ತ ಪಡುತ್ತಿದ್ದ ಕ್ಷೋಭೆಯೇ ಸಂಸಾರ ದುಃಖ ಎಂಬ ತಿಳಿವು, ಅಷ್ಟು ವರ್ಷಗಳಲ್ಲಿ ಪ್ರಥಮ ಬಾರಿಗೆಂಬಂತೆ ಕಾಣಿಸಿಕೊಂಡಿತು." ಈ ಭಾವ ಮೂಡಿದ ಮೇಲೆ ಇನ್ನು ಅವನಲ್ಲಿ ಅನನ್ಯ ಶರಣಾಗತಿಯೊಂದೇ ಉಳಿದಿರುವುದು. ಆತನ ಈ ಭಗವದ್ವಿಷಯಕವಾದ ಭಕ್ತಿ ಮುಂದಿನ ಬದುಕನ್ನೆಲ್ಲಾ ಆವರಿಸಿತು. ಸರ್ವವೂ, ಕೊನೆಗೆ ಸಂಗೀತವೂ ದೇವರ ಸೇವೆಗೆ ಮೀಸಲಾಗಿಡತಕ್ಕದ್ದೆನಿಸಿತು.

ಇದುವರೆಗೆ ತಂದೆ ತಾಯಿಗಳ ವಿಷಯಕ್ಕೆ ಉಂಟಾಗಿದ್ದ ಬಲವಂತದ

ವಿಸ್ಮೃತಿಯನ್ನು ತೊಡೆದು ಊರಿಗೆ ಹೊರಟ. ಅವರಲ್ಲಿ ಅಪರಾಧ ಕ್ಷಮಾಪಣೆ ಮಾಡಿರೆಂದು ಕೇಳಬೇಕೆಂದುಕೊಂಡ. ಅವರಿಗೆ ತರ್ಪಣ ಕೊಡುವಾಗ – "ಇದೇ ನಾನು ನಿಮ್ಮ ಮಗನಾದುದಕ್ಕೆ ಮಾಡುವ ಶುಶ್ರೂಷೆ"– ಎಂದುಕೊಂಡ. ಇನ್ನು ಮುಂದಿನ ಬದುಕೆಲ್ಲವೂ ಲೋಕದಿಂದ ತನಗೇನಾಯಿತು ಎಂಬುದು ಹೋಗಿ ತನ್ನಿಂದ ಲೋಕಕ್ಕೇನು ಮಾಡಲು ಸಾಧ್ಯ ಎಂಬುದರತ್ತ ತಿರುಗಿತು. ಯಾರ ಸಂಗವೂ ಬೇಡ ಎಂದು ನಿಸ್ಸಂಗ ಭಾವದಿಂದಿದ್ದವನು ನಟುವರ ವೆಂಕಟರಮಣನಿಗೆ ಪ್ರೀತಿಯಿಂದ ಪಾಠ ಹೇಳಿದ.

ಮೊದಲು ನಿರಾಕರಿಸಿದರೂ ಅನಂತರ ಸುಬೇದಾರರ ಮಗಳಿಗೂ ಪಿಟೀಲು ಹೇಳಿಕೊಡಲೊಪ್ಪಿದ. ಅಷ್ಟೇ ಅಲ್ಲ ಅತ್ಯಂತ ಹಾರ್ದಿಕ ಆತ್ಮೀಯ ಸಂಬಂಧ ಬೆಳೆಸಿಕೊಂಡ. ಒಂದು ರೀತಿಯಲ್ಲಿ ತನ್ನ ಅಂತರಂಗದ ಶೂನ್ಯವನ್ನು ತುಂಬಲು ಹೊರಗಿನ ಜನರೊಡನೆ ಬೆರೆತು ಅವರೊಂದಿಗೆ ಮಾನವ ಪ್ರೇಮವನ್ನು ಹಂಚಿಕೊಳ್ಳುವುದೊಂದೇ ದಾರಿ ಎಂದು ಅನುಭವದಿಂದ ಕಂಡುಕೊಂಡ, ಮನುಷ್ಯ ಮನುಷ್ಯರನ್ನು ಬೆಸೆಯುವ ಪ್ರೀತಿಯೊಂದೇ ನಮ್ಮ ಬದುಕನ್ನು ನೂರು ದುಃಖಗಳ ಮಧ್ಯದಲ್ಲೂ ಸಹ್ಯವಾಗಿಸಬಲ್ಲುದು ಎಂಬುದು ಮನಸ್ಸಿಗೆ ವೇದ್ಯವಾಯಿತು.

ಸುಬ್ಬಣ್ಣನ ಅಂತರಂಗ ವಿಕಾಸದ ಈ ಕತೆಯಲ್ಲಿ ಅವನ ಸಂಗೀತ ಕಲೆ ಆದಕ್ಕೆ ಪೋಷಕವಾಗಿ ಬರುತ್ತದೆಂಬುದು ಮುಖ್ಯ ವಿಷಯ. ಅವನ ಬದುಕಿನ ಕೊನೆಯವರೆಗೂ ಉಳಿದದ್ದು ಅವನ ಪಿಟೀಲೊಂದೇ. ಬದುಕಿನ ಅನುಭವಗಳು ಅವನನ್ನು ಪರಿಪಕ್ವಗೊಳಿಸಿದ ಹಾಗೆ ಅವನ ಕಲೆಯನ್ನೂ ಪರಿಪಕ್ವಗೊಳಿಸಿದವು. ಸುಬ್ಬಣ್ಣನಿಗೆ ಗಾನದ ಮೂಲಕ ಸರ್ವಸ್ವವೂ ತಿಳಿದು ಹೋಗಿತ್ತು ಎಂಬುದು ನಿರೂಪಕರದೇ ಮಾತು.

ಈ ಕಾದಂಬರಿಯಲ್ಲಿ ಬರುವ ಇತರ ಪಾತ್ರಗಳು ಕೆಲವೇ ಆದರೂ ಸ್ಫುಟವಾಗಿ ನಮ್ಮ ಮನೋಭಿತ್ತಿಯಲ್ಲಿ ನಿಲ್ಲುವಂಥವು. ನೀಲಾಸಾನಿ, ಲಲಿತಮ್ಮ ಯಜಮಾನಿತಿ ಈ ಮೂರು ಪಾತ್ರಗಳನ್ನು ಮಾಸ್ತಿಯವರು ತಮಗೆ ಸಹಜವಾದ ಎಂದಿನ ಸಹಾನುಭೂತಿಯಿಂದಲೇ ಚಿತ್ರಿಸಿದ್ದಾರೆ. ಸತಿಸಾಧ್ವಿ, ಗಂಡನ ಪಾಲಿಗೆ ದೇವಿ ಸ್ವರೂಪಿಯಾದ, ಅವನ ವ್ಯಕ್ತಿತ್ವದಲ್ಲಿ ತನ್ನನ್ನು ಕರಗಿಸಿಕೊಂಡು, ಇನ್ನೊಬ್ಬರ ಸುಖವೇ ತನ್ನ ಸುಖವೆಂಬಂತಿರುವ ಲಲಿತಮ್ಮ; ಇನ್ನು ಯಜಮಾನಿತಿಯದು, ಮಾತು ಕಠಿಣವಾದರೂ, ನಡತೆ ಕಠಿಣವಾದರೂ ಮನಸ್ಸಿನಲ್ಲಿ ಕಠಿಣರಲ್ಲವೆಂಬ, ಅಂಥ ಸೊಸೆಯೊಡನೆ ಸಂಸಾರ ನಡೆಸುವ ಭಾಗ್ಯ ತನಗಿಲ್ಲವೆಂದು ಕೊರಗುವ ಹೆಣ್ಣಾಗಿ ಚಿತ್ರಿಸಿದ್ದಾರೆ. ಆ ಕಾಲದ ಸಾಂಸಾರಿಕ ವಾತಾವರಣದಲ್ಲಿ ಆಕೆಯ

ನಡವಳಿಕೆ ಅಷ್ಟೇನೂ ಆಕ್ಷೇಪಾರ್ಹವಾದುದಲ್ಲ ಎಂಬ ಅಭಿಪ್ರಾಯ ನಿರೂಪಕರ ಮಾತಿನಲ್ಲಿದೆ. ಇನ್ನು ನೀಲಾಸಾನಿಯ ಪ್ರೇಮ ಸ್ವಭಾವ, ಸದ್ಗುಣ, ಸುಬ್ಬಣ್ಣನ ಬದುಕಿನಲ್ಲಿ ಒಬ್ಬ ರಕ್ಷಕ ದೇವತೆಯಂತೆ ಆಕೆ ವಹಿಸಿದ ಪಾತ್ರ, ಸುಬ್ಬಣ್ಣ ಅವಳಿಂದ ತೆಗೆದುಕೊಂಡ ಸಾಲವನ್ನು ತೀರಿಸಿದಾಗ ಆಕೆ ಪಡುವ ವೇದನೆ ಇವೆಲ್ಲ ಅವಳ ಮಾನವೀಯ ವ್ಯಕ್ತಿತ್ವವನ್ನೇ ಪ್ರಕಟಿಸುತ್ತವೆ. ಕಲಾವಿದನ ಬದುಕನ್ನು ಚಿತ್ರಿಸುವ ಈ ಕಾದಂಬರಿ ಕನ್ನಡದಲ್ಲಿ ಇಂಥ ಕಾದಂಬರಿ ಪರಂಪರೆಗೆ ನಾಂದಿ ಹಾಡಿತು. ಅ.ನ.ಕೃ. ಅವರ ಸಂಧ್ಯಾರಾಗ, ಉದಯರಾಗ, ಕಾರಂತರ ಮೊಗಪಡೆದ ಮನ ಇವೆಲ್ಲ ಕಲಾವಿದರ ಬದುಕನ್ನು ಕುರಿತು ಕಾದಂಬರಿಗಳು. ಅನಕೃ ಅವರ ಕಾದಂಬರಿಗಂತೂ ಇದೇ ಮೂಲ ಪ್ರೇರಣೆಯಾಗಿರಬೇಕೆನಿಸುತ್ತದೆ.

೩

ಶೇಷಮ್ಮ

ಸುಬ್ಬಣ್ಣ ಕಾದಂಬರಿಯಂತೆ, ಶೇಷಮ್ಮ ಕಾದಂಬರಿ ಕೂಡ, ವ್ಯಕ್ತಿಯೊಬ್ಬರ ಬದುಕು ತನಗೊದಗಿ ಬಂದ ಅನುಭವಗಳ ಮೂಲಕ ಮಾಗುತ್ತ ಹೋಗುವ ಪರಿಯನ್ನು ಚಿತ್ರಿಸುತ್ತದೆ. ಈ ಕಾದಂಬರಿಯ ನಾಯಕಿ ಶೇಷಮ್ಮ ಸುಬ್ಬಣ್ಣನಂತೆಯೇ ಸಂಕಷ್ಟಗಳು ಬಂದಷ್ಟೂ ಅವುಗಳನ್ನು ಸಹಿಸುವ ಸಹನೆ, ತಾಳ್ಮೆಗಳನ್ನು ಬೆಳೆಸಿಕೊಳ್ಳುತ್ತಾಳೆ. ಸಾವು ನೋವು ಎರಡರಲ್ಲೂ ಬರುತ್ತವಾದರೂ ಅವುಗಳು ತಂದೊಡ್ಡುವ ಸಮಸ್ಯೆಗಳ ಸ್ವರೂಪ ಬೇರೆ. ಇಬ್ಬರೂ ಅವುಗಳನ್ನು ಎದುರಿಸುವ ರೀತಿಯೂ ಬೇರೆ. ಹೆಂಡತಿ, ಮಕ್ಕಳ ಸಾವು, ಸುಬ್ಬಣ್ಣನನ್ನು ನಿವೃತ್ತಿ ಮಾರ್ಗಕ್ಕೆ ಹಚ್ಚಿದರೆ, ಗಂಡನನ್ನು ಕಳೆದುಕೊಂಡ ಶೇಷಮ್ಮ ಬದುಕಿನಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಮಕ್ಕಳನ್ನು ಸಾಕಿ ಬೆಳೆಸುವ ಹೊಣೆಗಾರಿಕೆ ಹೊರಬೇಕಾಗುತ್ತದೆ. ಬದುಕು ಒಡ್ಡುವ ನೂರು ಸಂಕಷ್ಟಗಳನ್ನು ಎದುರಿಸುವುದೇ ಶೇಷಮ್ಮನ ಸಮಸ್ಯೆಯಾದರೆ, ತನ್ನ ಅನಾಥ ಸ್ಥಿತಿಯನ್ನು, ಏಕಾಂತವನ್ನು ಎದುರಿಸುವುದೇ ಸುಬ್ಬಣ್ಣನ ಸಮಸ್ಯೆ. ದೈವದ ಬಗೆಗಿನ ನಂಬಿಕೆ ಸುಬ್ಬಣ್ಣನಲ್ಲಿ ಹೆಂಡತಿ ಮಕ್ಕಳ ಸಾವಿನ ನಂತರ, ಅದೂ ಹೆಂಡತಿಯ ದೈವ ಭಕ್ತಿ ಸಮನ್ವಿತವಾದ ಬಾಳನ್ನು ಕಂಡ ಪರಿಣಾಮವಾಗಿ ಬಂದಿದ್ದರೆ, ಶೇಷಮ್ಮನಲ್ಲಿ ಆ ಭಕ್ತಿ ಸಂಸ್ಕಾರ ಮೊದಲಿನಿಂದ ಇದ್ದದ್ದೇ. ಹೀಗೆ ಈ ಎರಡೂ ಕಾದಂಬರಿಗಳಲ್ಲಿ ಸಾಮ್ಯವಿದೆ.

ಶೇಷಮ್ಮ ಸದ್ಗೃಹಸ್ಥರ ಮನೆಯಲ್ಲಿ ಹುಟ್ಟಿ, ಉತ್ತಮ ಸಂಸ್ಕಾರವನ್ನು ರೂಢಿಸಿಕೊಂಡವಳು. "ಕಣ್ವಾಶ್ರಮದಲ್ಲಿ ಬೆಳೆದ ತಾಪಸ ಬಾಲೆಯಂತೆ, ಸುತ್ತಣ ಪ್ರಕೃತಿಯಲ್ಲಿ ಆತ್ಮೀಯ ಭಾವ ತಳೆದವಳು." ಎಲ್ಲರ ಬಗೆಗೂ ಅಕ್ಕರೆ,

ಪ್ರೀತಿಗಳನ್ನು ಬೆಳೆಸಿಕೊಂಡವಳು. "ಜೀವರಾಶಿಯ ಕಷ್ಟ ಸುಖವನ್ನು ಸುಲಭವಾಗಿ ಅರಿವ ವರವನ್ನು ಪಡೆದವಳು." ಸದ್ಗೃಹಿಣಿಯಾಗಿ ಬಾಳುವುದಕ್ಕೆ ಬೇಕಾದ ಎಲ್ಲ ಸಂಸ್ಕಾರ ಪಡೆದಿದ್ದರೂ ರಂಗಪ್ಪನಂಥ ನೀತಿಗೆಟ್ಟವನ ಹೆಂಡತಿಯಾದದ್ದು ಅವಳ ಸತ್ ಸ್ವಭಾವಕ್ಕೇ ಸವಾಲಾಯಿತು. ಆದರೆ ಸದಸದ್ವಿವೇಕ ದೃಷ್ಟಿ ನಿಚ್ಚಳವಾಗಿದ್ದದ್ದರಿಂದ, ಆಕೆ ಏಕಾಂಗಿಯಾಗಿ, ತನ್ನ ಮಕ್ಕಳನ್ನು ಬೆಳೆಸಿ ಒಂದು ನೆಲೆಗೆ ತರುವುದರಲ್ಲಿ ಯಶಸ್ವಿಯಾದಳು. ಬಡತನ. ತಂದೊಡ್ಡುವ ಅವಮಾನ, ಅಸಹಾಯಕತೆಗಳನ್ನು ಮೌನವಾಗಿ ನುಂಗಿಕೊಂಡರೂ, ಆತ್ಮಗೌರವವನ್ನು ಕಾಯ್ದು ಕೊಳ್ಳುವ, ಸತ್ಯದಿಂದ ಬದುಕುತ್ತಿದ್ದೇನೆಂದು ಮನಗಾಣಿಸುವ ಛಲ ತೋರುತ್ತಾಳೆ.

ಮೂರಾಬಟ್ಟೆಯಾಗುವ ಹಾದಿಯಲ್ಲಿದ್ದ, ತನ್ನ ಬದುಕನ್ನು ಎಲ್ಲ ಕಷ್ಟಗಳ ಮಧ್ಯದಲ್ಲೂ ಸರಿಪಡಿಸಿಕೊಂಡ, ಮಕ್ಕಳ ಏಳಿಗೆಯನ್ನು ಸಾಧಿಸುವುದರಲ್ಲಿ, ಸುತ್ತು ಮುತ್ತಿನವರ ಬದುಕಿನ ಸಂಕಷ್ಟಗಳನ್ನು ತೊಡೆದು ಹಾಕಿ ಅವರಿಗೂ ನೆಮ್ಮದಿಯನ್ನು ತಂದುಕೊಡುವುದರಲ್ಲಿ ಶೇಷಮ್ಮ ಜೀವನ ಸಾರ್ಥಕತೆ ಕಂಡುಕೊಳ್ಳುವುದನ್ನು ಕಾದಂಬರಿ ಚಿತ್ರಿಸುತ್ತಾ ಹೋಗುತ್ತದೆ.

ಆದರೆ ಇಲ್ಲಿಯೂ ಎಲ್ಲವನ್ನೂ ದೈವಕ್ಕೆ ಅಂಟಿಸಿ ಬಿಡುವ, ದೇವರು ಕಷ್ಟ ಕೊಡುವುದು ಒಳ್ಳೆಯದಕ್ಕಾಗಿ ಎನ್ನುವ, ಗಂಡನ ಅನೀತಿಯುತ ವರ್ತನೆಯನ್ನು, ಅದಕ್ಕೆ ಅವನು ಎಷ್ಟು ಮಾತ್ರಕ್ಕೂ ಕಾರಣನಲ್ಲ, ಅವನ ಸ್ವಭಾವ ರೂಪುಗೊಳ್ಳಲು ಕಾರಣವಾದ ದೈವ, ವಿಧಿ ಕಾರಣ ಎಂದು ಹೇಳಿಬಿಡುವುದು ಸಮಸ್ಯೆಯ ಸಾಮಾಜಿಕ ಮುಖವನ್ನು ತೀರ ಕಡೆಗಣಿಸಿ ಸರಳೀಕರಿಸಿದಂತಾಗುತ್ತದೆ. ಮಾಸ್ತಿಯವರ ಸಾಹಿತ್ಯದಲ್ಲಿ ದೈವಕ್ಕೆ ಸಿಕ್ಕಿರುವ ಈ ಅತಿಯಾದ ಪ್ರಾಧಾನ್ಯದಿಂದ ಸಾಮಾಜಿಕ ಸಮಸ್ಯೆಯಗಳೂ ದೈವ ಯೋಜನೆಯ ಅಂಗವಾಗಿಬಿಡುವುದರಿಂದ ಮನುಷ್ಯನ ಅಸ್ತಿತ್ವವೇ ನಗಣ್ಯವಾಗಿ ಬಿಡುವ ಅಪಾಯವಿದೆ.

ಅಧ್ಯಾಯ ೪

ಐತಿಹಾಸಿಕ ಕಾದಂಬರಿಗಳು

೧

ಈಗಾಗಲೇ ತಿಳಿಸಿದಂತೆ ಚೆನ್ನಬಸವನಾಯಕ ಮತ್ತು ಚಿಕವೀರರಾಜೇಂದ್ರ ಎರಡೂ ಐತಿಹಾಸಿಕ ಕಾದಂಬರಿಗಳು. ಆದರೆ ನಾವು ಮರೆಯಬಾರದ ಸಂಗತಿ ಎಂದರೆ, ಯಾವುದೇ ಐತಿಹಾಸಿಕ ಕಾದಂಬರಿಕಾರ ಇತಿಹಾಸವನ್ನು ಬರೆಯುತ್ತಿರುವದಿಲ್ಲ, ಇತಿಹಾಸದ ಅಸ್ಥಿಪಂಜರಕ್ಕೆ ರಕ್ತಮಾಂಸಗಳನ್ನು ತುಂಬಿ ಜೀವ ಸಂಚಾರ ಮಾಡುವ ಮೂಲಕ ಇತಿಹಾಸದ ಪುನರ್ನಿರ್ಮಾಣ ಮಾಡಿ ಆ ಮೂಲಕ ಸಾರ್ವಕಾಲಿಕ ಸತ್ಯವನ್ನು ಹೊಳೆಯಿಸುತ್ತಾನೆ. ಅಂತೆಯೇ ಮಾಸ್ತಿಯವರು ಈ ಕಾದಂಬರಿಗಳಲ್ಲಿ ಆಯಾ ಕಾಲದ ಸಮಾಜವನ್ನು ಪುನಃ ನಿರ್ಮಿಸುವ ಪ್ರಯತ್ನ ಮಾಡಿದ್ದಾರೆ. ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ನಾವು ಕಾಣುವ ಗತ ಇತಿಹಾಸದ ವೈಭವೀಕರಣವಾಗಲಿ, ಪಾತ್ರಗಳ ಉಜ್ವಲೀಕರಣವಾಗಲಿ ಮಾಸ್ತಿಯವರ ಆಸಕ್ತಿಯ ವಿಷಯವಾಗಿಲ್ಲ. ಅವರ ಆಸಕ್ತಿ ಇರುವುದು ಮನುಷ್ಯರಲ್ಲಿ, ಜೀವನದ ಸಮಸ್ಯೆಗಳಲ್ಲಿ, ವ್ಯಕ್ತಿ ಮತ್ತು ಸನ್ನಿವೇಶಗಳ ಸಂಬಂಧಗಳಲ್ಲಿ. ಇತಿಹಾಸ ಮತ್ತು ಅದರ ಘಟನೆಗಳು ಇದಕ್ಕೆ ಅವರಿಗೆ ಕೇವಲ ಭಿತ್ತಿಯನ್ನೊದಗಿಸುವ ಕೆಲಸ ಮಾಡುತ್ತವೆ. ಗತಕಾಲದ ಯುಗವನ್ನು ನಮ್ಮ ಕಣ್ಮುಂದೆ ಚಿತ್ರಿಸುವುದರಲ್ಲಿ ಕೇವಲ ಹಳೆಯ ಇತಿಹಾಸವನ್ನು ಚಿತ್ರಿಸುವುದಷ್ಟೇ ಆಗಿರದೆ, ಆ ಯುಗವನ್ನು

ಅದರೆಲ್ಲ ಒತ್ತಡಗಳನ್ನು, ಸಂಘರ್ಷಗಳನ್ನು, ಮನೋಧರ್ಮ, ಮೌಲ್ಯಗಳನ್ನು ಆ ಯುಗದ ಸಂಸ್ಕೃತಿಯನ್ನು ಬಿಂಬಿಸುವ ಕೆಲಸವನ್ನು ಕಾದಂಬರಿಕಾರ ಮಾಡಬೇಕಾಗುತ್ತದೆ. ಹಾಗೆ ಮಾಡುವಲ್ಲಿ ಆ ಕಾಲದ ಚಾರಿತ್ರಿಕ ವ್ಯಕ್ತಿಗಳನ್ನು ರಕ್ತಮಾಂಸಗಳಿಂದ ಕೂಡಿದ ಜೀವಂತ ವ್ಯಕ್ತಿಗಳನ್ನಾಗಿ ಚಿತ್ರಿಸುವ ಕೌಶಲ್ಯ ಆತನಿಗೆ ಇರಬೇಕಾಗುತ್ತದೆ.

ಮಾಸ್ತಿಯವರ ಎರಡೂ ಕೃತಿಗಳು ಈ ಕೌಶಲ್ಯವನ್ನು ತಕ್ಕಷ್ಟು ಪ್ರಮಾಣದಲ್ಲಿ ಪಡೆದುಕೊಂಡಿವೆಯೆಂದೇ ಅವು ಶ್ರೇಷ್ಠ ಕಾದಂಬರಿಗಳೆನಿಸಿವೆ.

ಈಗ ಈ ಕಾದಂಬರಿಗಳನ್ನು ಒಂದಿಷ್ಟು ವಿವರವಾಗಿ ಪರಿಶೀಲಿಸಬಹುದು.

೨

ಈ ಎರಡೂ ಕಾದಂಬರಿಗಳಿಗೆ ಅನೇಕ ವಿಷಯಗಳಲ್ಲಿ ಸಾಮ್ಯವಿದೆ. ಎರಡೂ ಕಾದಂಬರಿಗಳ ಮೂಲದ್ರವ್ಯ ಕರ್ನಾಟಕದ ಇತಿಹಾಸವೇ. ಬಿದನೂರು ಮತ್ತು ಕೊಡಗು ಎರಡೂ ಮಲೆನಾಡು ಪ್ರದೇಶಗಳೇ. ಎರಡೂ ಕಾದಂಬರಿಗಳು ನೀಡುವುದು ವೀರಶೈವ ರಾಜವಂಶಗಳ ಅವನತಿಯ ಚಿತ್ರಗಳನ್ನು. ಚೆನ್ನಬಸವನಾಯಕದಲ್ಲಿ ರಾಣಿಯ ನಡವಳಿಕೆ ನಾಡಿನ ಬದುಕನ್ನೇ ದುರಂತವಾಗಿಸಿದರೆ, ಚಿಕವೀರರಾಜೇಂದ್ರದಲ್ಲಿ ರಾಜನ ನೈತಿಕ ಅಧಃಪತನದಿಂದಾಗಿ ಇಡೀ ಕೊಡಗು ದುರಂತವನ್ನಪ್ಪಬೇಕಾಗುತ್ತದೆ. ಕಾದಂಬರಿಯ ಕೊನೆಯಲ್ಲಿ ಎರಡೂ ರಾಜ್ಯಗಳು ಅನ್ಯಾಕ್ರಾಂತಗಳಾಗುತ್ತವೆ. ವ್ಯಕ್ತಿಗಳ ದೌರ್ಬಲ್ಯದೊಂದಿಗೆ ದೈವದುರ್ವಿಪಾಕವೂ ಸೇರಿದಾಗ ಅದು ದುರಂತದ ದಾರಿ ಹಿಡಿಯದೆ ಅನ್ಯ ಮಾರ್ಗವಿಲ್ಲ. ಎಂಬ ದರ್ಶನ ಎರಡೂ ಕಾದಂಬರಿಗಳಿಂದ ಹೊರಡುತ್ತದೆ.

೩

ಚೆನ್ನಬಸವನಾಯಕ

ಮೊದಲನೆಯದಾಗಿ ಚೆನ್ನಬಸವನಾಯಕ ಕಾದಂಬರಿಯನ್ನು ಕುರಿತು ವಿಶದವಾಗಿ ಚರ್ಚಿಸಬಹುದು.

ಚೆನ್ನಬಸವನಾಯಕ ಕಾದಂಬರಿಯಲ್ಲಿ ಬಿದನೂರಿನ ಸಾಂಸ್ಕೃತಿಕ ಬದುಕಿನ ಹಾಗೂ ರಾಜಕೀಯ ಸ್ಥಿತಿಯ ವಿರುದ್ಧ ಚಿತ್ರಗಳು ಕಾಣದೊರೆಯುತ್ತವೆ. ಒಂದೆಡೆ ನಾಡಿನ ಸಾಮಾನ್ಯ ಜನಜೀವನದಲ್ಲಿ, ಮೌಲ್ಯಗಳಲ್ಲಿ ಯಾವ ಬಿರುಕೂ ಇಲ್ಲದೆ ಪರಿಪುಷ್ಟವಾಗಿರುವ ಚಿತ್ರಣವಿದ್ದರೆ, ಇನ್ನೊಂದೆಡೆ ರಾಜಕೀಯ ವ್ಯಕ್ತಿಗಳ ಬದುಕು ಛಿದ್ರಛಿದ್ರವಾಗಿ ಅತಂತ್ರಗೊಳ್ಳುತ್ತಿರುವ ಚಿತ್ರಣವಿದೆ. ನಗರದ ಪೇಟೆಯ ವ್ಯವಹಾರ ಅತ್ಯಂತ ಶಿಸ್ತುಬದ್ಧವಾಗಿದೆ; ಪ್ರಾಮಾಣಿಕತೆ ಇದೆ. ದುಬಾರಿ ತಿಟ್ಟಿನ ಕಳ್ಳ

ವ್ಯವಹಾರವನ್ನು ಇದರಿಂದ ಬೇರೆ ಎಂದು ತೀರ್ಮಾನಿಸಿ ನಡವಳಿಕೆ ನಿರ್ಣಯಿಸುವ ಜನರಿದ್ದಾರೆ. ಅಲ್ಲಿ ಒಳಿತು ಕೆಡಕುಗಳ ಗೆರೆ ತೀರಾ ಸ್ಪಷ್ಟ. ಹಿರೇಮಠದ ಅಯ್ಯನ ಧರ್ಮಸೂಕ್ಷ್ಮ ಅನುಭಾವ, ನೇಮಯ್ಯ, ಶಾಸ್ತ್ರಿಗಳಂಥ ಊರ ಮುಖಂಡರ ಸತ್ಯಪ್ರಿಯತೆ, ತೂಕದ ನಡವಳಿಕೆ, ವಸ್ತಾರೆಯ ಹೆಗ್ಗಡಿತಿ ಬಿದನೂರಿನ ಆಳ್ವಿಕೆಯಲ್ಲಿನ ಅತಂತ್ರದ ವಿಷಯಕ್ಕೆ ಆತಂಕಗೊಳ್ಳುವುದು, ತನ್ನ ಜೀತದವರಾದ ಮಲ್ಲಿಗೆ ಸಗುನರ ಬಗೆಗಿನ ನಿಷ್ಠುರ, ಆದರೂ ಪ್ರೇಮ ಪೂರ್ಣ ವ್ಯವಹಾರ, ಪ್ರಜೆಗಳು ನಾಯಕನ ವಿಷಯಕ್ಕೆ ತೋರುವ ಭಕ್ತಿ ನಿಷ್ಠೆಗಳು, ಶಾಂತವ್ವನ ಬಗೆಗಿನ ಕೆಂಚವ್ವನ ಸ್ವಾಮಿನಿಷ್ಠೆ ಇವೆಲ್ಲ ಆ ಸಾಂಸ್ಕೃತಿಕ ಬದುಕಿನ ಕೆಲವು ನೋಟಗಳು.

ಬಿದನೂರಿನ ಸಾಂಸ್ಕೃತಿಕ ಬದುಕು, ಇಷ್ಟು ಸುವ್ಯವಸ್ಥಿತವಾಗಿದ್ದರೂ ದುರಂತ ತಪ್ಪುವದಿಲ್ಲ, ಕಾರಣ ರಾಜಕೀಯ ವ್ಯಕ್ತಿಗಳೇ. ನ್ಯಾಯವಾಗಿ ಸಿಂಹಾಸನಕ್ಕೆ ಹಕ್ಕುದಾರನಾದ ಪ್ರಾಪ್ತವಯಸ್ಕನಾದ ಮಗ ಚೆನ್ನಬಸವನಾಯಕನಿದ್ದರೂ ಅವನಿಗೆ ಪಟ್ಟ ಕಟ್ಟದೆ ರಾಣಿ ವೀರಮ್ಮಾಜಿ ತಾನೇ ಅಧಿಕಾರ ಸೂತ್ರಗಳನ್ನು ಕೈಯಲ್ಲಿ ಇಟ್ಟುಕೊಂಡಿದ್ದಾಳೆ. ಅರಮನೆಯ ಮನೆ ವಾರ್ತೆಯ ನಂಬಯ್ಯನೊಂದಿಗೆ ಸಲಿಗೆಯಿಂದಿದ್ದಾಳೆ. ಇದು ನಾಯಕನಿಗೆ ತೀರಾ ಬೇಸರದ ವಿಷಯವಾಗಿದೆ.

ಈ ಬೇಸರದ ಜೊತೆಗೆ ತನ್ನ ಸ್ವಭಾವವೂ ಕಾರಣವಾಗಿ ರಾಣಿಯನ್ನು ಪ್ರತ್ಯಕ್ಷವಾಗಿ ವಿರೋಧಿಸಲಾರದೆ ನಿಷ್ಕ್ರಿಯನಾಗಿದ್ದಾನೆ. ಸಿಂಹಾಸನದ ಬಗ್ಗೆ ನಿರ್ಲಕ್ಷ್ಯ ತಾಳಿದ್ದಾನೆ. ಆದರೆ ಬೂದಿಬಸವಸ್ವಾಮಿ ಎಂಬ ಹೆಸರಿನಿಂದ ಜನರನ್ನು ಹುರಿದುಂಬಿಸುತ್ತಿದ್ದಾನೆ. ರಾಣಿಗೆ ವಿವೇಕ ಹೇಳಿ ರಾಜ್ಯವನ್ನು ಸರಿದಾರಿಗೆ ತರಬೇಕಾಗಿರುವ ನೇಮಯ್ಯ ತಾನು ನಾಯಕನ ಪಟ್ಟದ ಮಾತೆತ್ತಿದರೆ, ಎಲ್ಲಿ ತನ್ನ ಅಳಿಯನ ಪಕ್ಷವಹಿಸುತ್ತಿದ್ದಾನೆಂಬ ಅಪವಾದಕ್ಕೆ ಗುರಿಯಾಗಬೇಕಾಗುತ್ತೋ ಎಂದು ಅಂಜಿ ಸುಮ್ಮನಿದ್ದಾನೆ. ಇವುಗಳ ಜೊತೆಗೆ ವಸ್ತಾರೆಯ ಹೆಗ್ಗಡಿತಿ ಸದುದ್ದೇಶದಿಂದಲೇ ಆದರೂ ವೀರಮ್ಮಾಜಿಗೆ ಬುದ್ಧಿ ಹೇಳಲು ಮಾಡಿದ ಪ್ರಯತ್ನದ ಪರಿಣಾಮ ವಿಷಮವಾಗುತ್ತದೆ. ಅತ್ತ ಮೈಸೂರರಸರ ಆಹ್ವಾನದ ಮೇಲೆ ನಾಯಕ ಪಟ್ಟಣಕ್ಕೆ ಹೋದರೆ, ಅದನ್ನೂ ತಾಯಿ ಸಂಚೆಂಬ ಶಂಕೆಯಿಂದಲೇ ಕಂಡಳು. ಅದೇ ಸಮಯಕ್ಕೆ ನಾಯಕ ಮತ್ತು ಅರಸರು ಏನೋ ಸಂಚು ನಡೆಸುತ್ತಿರಬಹುದೆಂದು ಗುಮಾನಿ ಪಡುವ ಹೈದರನಿಗೆ ಬಿದನೂರಿನ ರಾಜಕೀಯ ಅಸ್ಥಿರತೆಯ ಸುಳಿವು ಸಿಕ್ಕಿ ಅವನು ಬಿದನೂರನ್ನು ವಶಪಡಿಸಿಕೊಳ್ಳಲು ಬಿದನೂರಿನತ್ತ ನುಗ್ಗುತ್ತಾನೆ. ಅತ್ತೆಗೆ ಬೇಡದ ಸೊಸೆಯಾಗಿರುವ ಶಾಂತವ್ವ ಗಂಡನ ಒಳಿತಿಗಾಗಿ ತನ್ನನ್ನೇ ಭೈರವನಿಗೆ ಅರ್ಪಿಸಿಕೊಳ್ಳುತ್ತಾಳೆ. ಸಂಧಾನ ನಡೆಸುವ ಉದ್ದೇಶದಿಂದ ಹೈದರನ

ಬಳಿಗೆ ಹೋದ ನಾಯಕ ಸೆರೆಯಾಗುತ್ತಾನೆ. ಮಲ್ಲಿಗೆ ಸಗುನರ ಚಾತುರ್ಯದಿಂದ ತಪ್ಪಿಸಿಕೊಂಡರೂ, ನಂಬಯ್ಯನ ಕಡೆಯವರ ಆಕ್ರಮಣದಿಂದ ಚೇತರಿಸಿಕೊಳ್ಳದಿದ್ದ ನಾಯಕ ಸಾವನ್ನಪ್ಪುತ್ತಾನೆ. ಬಿದನೂರು ಹೈದರನ ವಶವಾಗುತ್ತದೆ. ಅವನು ವೀರಮ್ಮಾಜಿ ಮತ್ತು ನಂಬಯ್ಯರನ್ನು ಮಧುಗಿರಿ ಕೋಟೆಯಲ್ಲಿ ಸೆರೆಯಲ್ಲಿಡುತ್ತಾನೆ. ಹೀಗೆ ಸುಖವಾಗಿ ಬಾಳಿಬದುಕಿದ ಒಂದು ರಾಜಮನೆತನ ತನ್ನ ಒಳಗಿನ ಬಿರುಕಿನಿಂದಲೇ ದುರಂತದತ್ತ ಧಾವಿಸುತ್ತದೆ. ಇಂಥ ದುರಂತ, ವಿಧಿ ವಿಲಾಸದಿಂದ ಘಟಿಸಿತು ಎಂಬುದು ಕಾದಂಬರಿಯ ಧ್ವನಿಯಾದರೂ, ಅದಕ್ಕೆ ವ್ಯಕ್ತಿಗಳ ಕಾಣಿಕೆಯೇನೂ ಕಮ್ಮಿಯಿಲ್ಲ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಮನುಷ್ಯನ ಅಂಕೆಗೆ ಮೀರಿದ ದೈವ, ವಿಧಿ, ಹೊಣೆಗಾರರಾದ ವ್ಯಕ್ತಿಗಳು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸದಿರುವುದು, ಅಧಿಕಾರ ಕೇಂದ್ರದ ಅನೈತಿಕತೆ ಇವು ಮೂರೂ ಕೂಡಿಯೇ ಈ ನಾಡು ದುರಂತವನ್ನು ತಲುಪಬೇಕಾಗಿ ಬರುತ್ತದೆ.

ಚೆನ್ನಬಸವನಾಯಕನು ಧೈರ್ಯ, ಶೌರ್ಯ, ಯೋಗ್ಯತೆ ಜನಾನುರಾಗ, ನ್ಯಾಯಬದ್ಧವಾದ ಹಕ್ಕು ಇವುಗಳನ್ನು ಹೊಂದಿದ್ದು, ನ್ಯಾಯನಿಷ್ಠುರರೂ, ಧರ್ಮವೇ ಮೂರ್ತಿವೆತ್ತಂಥವರೂ ಆದ ನೇಮಯ್ಯ, ರಾಮಾಶಾಸ್ತ್ರಿಯಂಥ ಮುಖಂಡರು ಬೆಂಬಲಕ್ಕಿದ್ದು, ಗಂಡನ ಹಿತಕ್ಕಾಗಿ ಜೀವ ಕೊಡಲೂ ತಯಾರಿದ್ದ ಶಾಂತವ್ವೆಯಂಥ ಪತ್ನಿ, ವಸ್ತಾರೆಯ ಹೆಗ್ಗಡಿತಿಯ ಬೆಂಬಲ, ಮೈಸೂರರಸ ಹಿತಾಸಕ್ತಿ ಇಷ್ಟೆಲ್ಲ ಇದ್ದೂ ನಾಯಕ, ಪಟ್ಟಕ್ಕೆ ಬರುವುದಿರಲಿ, ಶಾಂತವ್ವ ರಾಣಿಯಾಗುವುದಿರಲಿ, ಇಬ್ಬರ ಬಾಳೂ ದುರಂತವನ್ನಪ್ಪಬೇಕಾಯಿತು.

ವ್ಯಕ್ತಿಗಳ ಬಾಳಿನ ದುರಂತ ಇದಾದರೆ, ನಾಡಿನ ಬಾಳಿನ ದುರಂತ ಇದಕ್ಕಿಂತ ಘೋರವಾದ್ದು. ಜನತೆ ತಮ್ಮದೇನೂ ತಪ್ಪಿಲ್ಲದಿದ್ದರೂ ತಮ್ಮ ನಾಡು ಅನ್ಯಾಕ್ರಾಂತವಾಗಿ ತಮ್ಮ ನಾಡಿನಲ್ಲೇ ತಾವು ದಾಸ್ಯಕ್ಕೆ ಒಳಗಾಗಬೇಕಾಯಿತು. ತಾವು ಬಯಸಿದ ರಾಜನನ್ನು ಪಡೆಯಲಾಗಲಿಲ್ಲ, ಅದರ ಸಾಂಸ್ಕೃತಿಕ ಬದುಕು ಛಿದ್ರವಾಗುವ ಸ್ಥಿತಿಗೆ ಬಂತು.

ಪ್ರಜಾಸಮುದಾಯದ ರಕ್ಷಕನಾಗಿ ನಿಂತು, ಜನರ ವಿಶ್ವಾಸಕ್ಕೆ ಪಾತ್ರವಾಗಬೇಕಾಗಿದ್ದ ಅಧಿಕಾರ ಕೇಂದ್ರ ಸ್ವಾರ್ಥ ಕಲುಷಿತವಾಗಿ ರಾಜ್ಯದ ಪತನಕ್ಕೆ ಕಾರಣವಾಗುತ್ತದೆ. ರಾಣಿ ವೀರಮ್ಮಾಜಿ ನಂಬಯ್ಯನೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಳ್ಳುವುದರಿಂದಾಗಿಯೇ, ನಾಯಕನಿಗೆ ಅಧಿಕಾರ ತಪ್ಪುತ್ತದೆ. ಇದು ಎಲ್ಲ ಅಸಮಾಧಾನಕ್ಕೂ ಕಾರಣವಾಗುತ್ತದೆ. ಆಳುವವರಲ್ಲಿ ಜನತೆಗೆ ವಿಶ್ವಾಸ ಕುಗ್ಗುವುದಕ್ಕೆ ಕಾರಣವಾಗುತ್ತದೆ. ರಾಣಿಗೆ ಮಗ ಸೊಸೆಯೊಂದಿಗೆ ಆತ್ಮೀಯ ಸಂಬಂಧಕ್ಕೆ

ಅಡ್ಡಿಯಾಗುತ್ತದೆ. ನೇಮಯ್ಯನಂಥ ನ್ಯಾಯನಿಷ್ಠುರಿಯನ್ನು ರಾಣಿ ಸಂಶಯಿಸಲೂ ಇದೇ ಕಾರಣವಾಗುತ್ತದೆ. ರಾಣಿಯ ಈ ನೈತಿಕ ಅಧಃಪತನ ರಾಜ್ಯದ ಪತನಕ್ಕೆ ಕಾರಣವಾಯಿತು. ಎಂಬುದನ್ನು ಕಾದಂಬರಿ ಕಾಣಿಸುತ್ತದೆ. ನಂಬಯ್ಯ ನಾಯಕನನ್ನು ಕೊಲೆಮಾಡಿಸಿದ ಸಂಗತಿಯೂ ಆವಳನ್ನು ಅಷ್ಟಾಗಿ ವಿಚಲಿತಗೊಳಿಸಲಿಲ್ಲ.

ರಾಣಿ ವೀರಮ್ಮಾಜಿಯ ಈ ನೈತಿಕ ಅಧಃಪತನದ ಜೊತೆಗೆ ನಾಯಕನ ಇಬ್ಬಂದಿತನದ ವ್ಯಕ್ತಿತ್ವ; ಹೊರಬೇಕಾದ ಹೊಣೆಯನ್ನು ಸಕಾಲದಲ್ಲಿ ಹೊರದೆ ದುಡುಕು ತೋರುವ ಸ್ವಭಾವ ದೌರ್ಬಲ್ಯ, ನಿರ್ಲಕ್ಷ್ಯಗಳೂ ದುರಂತಕ್ಕೆ ಕಾರಣವೇ.

ತಾಯಿ ಮಗನ ಮಧ್ಯೆ ಆತ್ಮೀಯ ಸಂಬಂಧ ಹೇಗೆ ಇಲ್ಲವೋ ಅದೇ ರೀತಿ ಅತ್ತೆ ಸೊಸೆಯ ಮಧ್ಯೆ ಆತ್ಮೀಯತೆ ಇಲ್ಲ. ಗಂಡ ಹೆಂಡಿರ ಮಧ್ಯೆ ಆತ್ಮೀಯತೆ ಇದ್ದರೂ ಅದನ್ನು ವ್ಯಕ್ತಪಡಿಸಲಿಲ್ಲ. ಕುರ್ತುಕೋಟಿಯವರು ಹೇಳುವಂತೆ. "ರಾಜಕೀಯ ವ್ಯಕ್ತಿಗಳ ನಡುವಿನ ಆತ್ಮೀಯತೆಯ ಅಭಾವ ದುರಂತಕ್ಕೆ ಕಾರಣವಾಯಿತು"[೧೭] ಇನ್ನು ನಾಯಕನಿಗೆ ಮಗಳನ್ನು ಕೊಟ್ಟಿದ್ದು ನೇಮಯ್ಯ. ಆ ಕಾರಣಕ್ಕಾಗಿಯೇ ಅಧಿಕಾರ ಹಿಡಿದವರಿಗೆ ಹೇಳಬೇಕಾದ ವಿವೇಕದ ಮಾತುಗಳನ್ನು ಸರಿಯಾದ ಸಮಯದಲ್ಲಿ ಹೇಳದೆ ಹಿಂಜರಿಯುತ್ತಾನೆ. ಅವನ ನ್ಯಾಯನಿಷ್ಠುರತೆ, ಪ್ರಾಮಾಣಿಕತೆ ಎಲ್ಲವೂ ಸ್ವಂತ ವ್ಯಕ್ತಿತ್ವದ ಬೆಳಗುವಿಕೆಗೆ ಬಳಕೆಯಾಗುತ್ತವೆಯೇ ಹೊರತು, ಚೆನ್ನಬಸವನಾಯಕನ, ರಾಜ್ಯದ ಹಿತ ಕಾಪಾಡಬೇಕಾದಾಗ ಹಿನ್ನೆಲೆಗೆ ಸರಿದು ಬಿಡುತ್ತವೆ. ಅವನ ಅತಿಯಾದ ಧರ್ಮದೃಷ್ಟಿಯೇ ಅವನ ನಿಷ್ಕ್ರಿಯತೆಗೆ ಕಾರಣವಾಗಿ ಪರಿಣಾಮದಲ್ಲಿ ರಾಜ್ಯದ ಹಿತಕ್ಕೆ ಮುಳುವಾಗುತ್ತದೆ. ನಿಸ್ವಾರ್ಥತೆಯೇ ಮೂರ್ತಿವೆತ್ತ ನೇಮಯ್ಯನೂ ಹೀಗೆ ದುರಂತಕ್ಕೆ ತನ್ನ ಪಾಲು ಸಲ್ಲಿಸುತ್ತಾನೆ.

ವ್ಯಕ್ತಿಗಳ ನಡುವಿನ ಆತ್ಮೀಯತೆಯ ಅಭಾವ ಮತ್ತು ಅವರ ನಡವಳಿಕೆ ಒಂದು ರೀತಿಯಲ್ಲಿ ದುರಂತಕ್ಕೆ ಕಾರಣವಾದರೆ ಸದುದ್ದೇಶದಿಂದ ವ್ಯಕ್ತಿಗಳು ಕೈಗೊಳ್ಳುವ ಕಾರ್ಯಗಳೇ ಅವರ ಹತೋಟಿ ತಪ್ಪಿ ಅವರು ಬಯಸಿದ್ದಕ್ಕೆ ವಿರುದ್ಧವಾದುದೇ ಆಗಿ ಕಾದಂಬರಿಯ ದುರಂತ ಘಟಿಸುವುದು ಇನ್ನೊಂದು ಬಗೆ.

ರಾಣಿ ನಾಯಕನಿಗೆ ಅಧಿಕಾರ ಬಿಟ್ಟು ಕೊಟ್ಟದ್ದೇ ಅವನ ಕೊಲೆಯ ಪ್ರಯತ್ನಕ್ಕೆ ಕಾರಣವಾದ್ದು, ನಾಯಕನಿಗೇನಾಯಿತೆಂಬುದು ಅನಗತ್ಯ ಕುತೂಹಲಕ್ಕೆ ಕಾರಣವಾಗದಿರಲೆಂದು ರಹಸ್ಯವಾಗಿಡಲು ಮಾಡಿದ ಪ್ರಯತ್ನ ನಾಯಕ ಕೊಲೆಯಾದನೆಂದು ರಾಣಿ ಹೈದರನಿಗೆ ತಿಳಿಸಲು ಕಾರಣವಾದ್ದು ಇನ್ನೊಂದೇ ಬಗೆಯ ತೊಡಕಿಗೆ ಕಾರಣವಾಯಿತು. ಮಠದ ಅಯ್ಯನ ಸೂಚನೆಯಂತೆ ಶಾಂತವ್ವನನ್ನು ಕಾಣಲು ನಾಯಕ ಹೊದದ್ದೇ ಶಾಂತವ್ವನ ದುರಂತಕ್ಕೆ ಕಾರಣವಾದ್ದು ಇದೆಲ್ಲ ವಿಧಿ ವಿಲಾಸವೆಂಬುದು ಕಾದಂಬರಿಯ ಧ್ವನಿ.

ನಾಯಕನು ಮೈಸೂರಿಗೆ ಬರಬೇಕೆಂದು ಇಮ್ಮಡಿ ಕೃಷ್ಣರಾಜರು ನೀಡಿದ ಆಹ್ವಾನ ಹೈದರನ ಮನಸ್ಸಿನಲ್ಲಿ, ರಾಣಿಯ ಮನಸ್ಸಿನಲ್ಲಿ ಅನೇಕ ಸಂಶಯಗಳನ್ನು ಹುಟ್ಟಿಸಿ ದುರಂತಕ್ಕೆ ಕಾರಣವಾದ್ದು ಒಂದು ಬಗೆ.

ಹೀಗೆ ಮಾಸ್ತಿಯವರು ಹೇಳುವಂತೆ – "ಚೆನ್ನಬಸವನಾಯಕ ದುರ್ದೈವದ ಝುಂಝಾವಾತಕ್ಕೆ ಸಿಕ್ಕಿದ ಒಂದು ಹಕ್ಕಿಯಾದನು. ಅವನ ರೆಕ್ಕೆ ಅದೃಷ್ಟದ ಹೊಡೆತ ತಡೆಯಲಾರದೆ ಮುರಿಯಿತು. ಆದರೂ ಅವನ ಜೀವ ಸೋತೆನೆನ್ನಲಿಲ್ಲ, ದುರ್ದೈವವನ್ನು ಎದುರಿಸಿ ನಿಂತಿತು. ತಲೆಮಣಿಯದೆ ನಿಂದಿತು"

ಕಾದಂಬರಿಯಲ್ಲಿ ಬಿದನೂರಿನ ಇತಿಹಾಸದ ಜೊತೆ ಜೊತೆಗೇ ಮೈಸೂರಿನ ಇತಿಹಾಸವೂ ತಳುಕು ಹಾಕಿಕೊಂಡಿದೆ. ನಾಯಕನ ಅಧಿಕಾರ ಒಂದು ಬಗೆಯಲ್ಲಿ ಅತಂತ್ರಕ್ಕೆ ಒಳಗಾಗಿದ್ದರೆ ಅತ್ತ ಮೈಸೂರಿನಲ್ಲಿ ರಾಜರ ಅಧಿಕಾರ ಇನ್ನೊಂದು ಬಗೆಯ ಅತಂತ್ರಕ್ಕೆ ಒಳಗಾಗಿದೆ. ಅಲ್ಲೂ ಹೈದರ್ ಆತ್ಮೀಯತೆಯನ್ನು ನಟಿಸುತ್ತಾನೆ. ಸ್ವಾಮಿಭಕ್ತನಂತೆ ಸೋಗುಹಾಕುತ್ತಾನೆ. ನಿಜವಾದ ಸ್ವಾಮಿಭಕ್ತಿ ಇಲ್ಲ, ಆದರೆ ತುಂಬ ಚಾಣಾಕ್ಷನಾದ್ದರಿಂದ ಅದರ ಸುಳಿವು ಕೊಡದೆ ನಿಭಾಯಿಸುತ್ತಾನೆ. ಕುರ್ತುಕೋಟಿಯವರ ಮಾತಿನಲ್ಲಿ ಹೇಳುವುದಾದರೆ, "ಆಳಬೇಕಾದ ಅರಸ ಒಂದು ನಿರ್ಜೀವ ಸಂಕೇತವಾಗಿ ಉಪಕೃತ ಜೀವ ಸರ್ವಾಧಿಕಾರಿಯಾಗಿ ಮೆರೆಯುತ್ತಿರುವುದೇ ಅವನತಿಯನ್ನು, ವಿಪರೀತ ಮೌಲ್ಯಗಳನ್ನು ಸೂಚಿಸುತ್ತದೆ."[೫೭]

ಈ ದುರಂತ ವಿಷಾದದ ಬೇಗೆಯ ಜಗತ್ತಿನಲ್ಲಿ ಮಲ್ಲಿಗೆ ಸಗುನರ ಪ್ರಣಯ ಕತೆ ಸುಳಿಗಾಳಿಯಂತೆ ಸುಳಿದು ಇಡೀ ಕಾದಂಬರಿಯನ್ನು ಆವರಿಸಿಕೊಂಡಿದೆ. ರಾಜಕೀಯದ ಏಳು ಬೀಳುಗಳ ಮಧ್ಯದಲ್ಲೂ ಸಾಮಾನ್ಯರ ಬದುಕಿನ ಸರಳ ಸಂತೋಷಗಳು ಅಬಾಧಿತವಾಗಿ ಸಾಗುತ್ತವೆಂಬುದಕ್ಕೆ ಸೂಚಕವಾಗಿದೆ ಅವರ ಬದುಕು.

೪

ಚಿಕವೀರರಾಜೇಂದ್ರ

ಕೊಡಗಿನ ಇತಿಹಾಸವನ್ನು ವಸ್ತುವಾಗಿ ಉಳ್ಳ 'ಚಿಕವೀರರಾಜೇಂದ್ರ' ೧೬೨ ಅಧ್ಯಾಯಗಳಲ್ಲಿ ೫೦೭ ಪುಟಗಳಷ್ಟು ವಿಸ್ತಾರವಾಗಿ ಹರಡಿಕೊಂಡಿರುವ ಕಾದಂಬರಿ. ಚೆನ್ನಬಸವನಾಯಕದಂತೆಯೇ ಇದೂ ಒಂದು ರಾಜ್ಯದ ಅವನತಿಯ ಚಿತ್ರವೇ ಆದರೂ ಅದಕ್ಕಿಂತ ಅನೇಕ ವಿಷಯಗಳಲ್ಲಿ ವಿಭಿನ್ನವಾಗಿದೆ. ದುಷ್ಟನಾದ ವೀರರಾಜ ತನ್ನ ಮಿತಿಮೀರಿದ ದುಷ್ಟತನದಿಂದಾಗಿ ತನಗೆ ಮಾತ್ರ ಕೇಡು ತಂದುಕೊಳ್ಳಲಿಲ್ಲ, ತನ್ನ ನಾಡನ್ನೇ ವಿನಾಶದತ್ತ ಕೊಂಡೊಯ್ಯುತ್ತಾನೆ. ಒಬ್ಬ ವ್ಯಕ್ತಿಯ ಕೇಡು

ಸಾರ್ವತ್ರಿಕವಾಗಿ ವ್ಯಾಪಿಸಿ, ಅಪರಾಧಿಗಳೊಂದಿಗೆ ನಿರಪರಾಧಿಗಳೂ, ಸಾತ್ವಿಕ ವ್ಯಕ್ತಿಗಳೂ ಕೇಡನ್ನು ಅನುಭವಿಸಬೇಕಾಯಿತು. ಆದ್ದರಿಂದ ಈ ಕಾದಂಬರಿಯ ದುರಂತ ಕೇವಲ ಚಿಕವೀರರಾಜನ ದುರಂತವಷ್ಟೇ ಅಲ್ಲ; ಅವನನ್ನು ನಂಬಿದ, ಅವನ ಸುತ್ತ ಮುತ್ತಲಿನವರ ದುರಂತವೂ ಆಗಿಬಿಡುತ್ತದೆ. ಅಧಿಕಾರ ಕೇಂದ್ರದ ದುರ್ವರ್ತನೆ ಮತ್ತು ಅದರ ದುರಂತ ಪರಿಣಾಮಗಳನ್ನು ಕಾದಂಬರಿ ಇನ್ನಿಲ್ಲದಂತೆ ಚಿತ್ರಿಸುತ್ತದೆ.

ಕೊಡಗಿನ ಪತನವನ್ನು ವಸ್ತುವನ್ನಾಗಿ ಉಳ್ಳ ಈ ಕಾದಂಬರಿಯಲ್ಲಿ ಇತಿಹಾಸದ ಗತಿಯನ್ನು ಚಿತ್ರಿಸುತ್ತಲೇ ಅದರ ಗುಂಟ ಸಾಗುವ ಮನುಷ್ಯರ ಹೆಜ್ಜೆಪಾಡು ಮತ್ತು ಏಳು ಬೀಳುಗಳನ್ನು, ಅವುಗಳಿಗೆ ಹಿನ್ನೆಲೆಯಾಗಿರಬಹುದಾದ ನಿಯತಿಯ ನೆಲೆಯನ್ನು ಗುರುತಿಸುವುದು ಮಾಸ್ತಿಯವರ ಉದ್ದೇಶವಾಗಿದೆ. ಎಂದಿನಂತೆ ಇದಕ್ಕೆ ಅವರು ಅನುಸರಿಸಿರುವುದು ಸರ್ವಸಾಕ್ಷಿತ್ವ ನಿರೂಪಣಾ ವಿಧಾನ. ಇತಿಹಾಸದ ಗತಿತರ್ಕದ ಮೂಲಕವೇ ಮಾಸ್ತಿಯವರು ಬದುಕನ್ನು ಅರ್ಥೈಸಲು ಪ್ರಯತ್ನಿಸುತ್ತಾರಾಗಿ ಕೇವಲ ವೈಭವೀಕರಣವಾಗಲಿ, ಕೇವಲ ಭಾವುಕತೆಯಾಗಲಿ, ಕೇವಲ ನಿರಾಕರಣೆಯಾಗಲಿ ಇಂಥ ಬರವಣಿಗೆಯಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಎಲ್ಲವನ್ನೂ ನಿರುದ್ವಿಗ್ನವಾಗಿ ಕಾಣಿಸುತ್ತಾ ಸಾಗುತ್ತಾರೆ. ಹಾಗಾಗಿ ವಿಶ್ಲೇಷಣಾತ್ಮಕ ವಾಸ್ತವವಾದಿ ಸ್ವರೂಪ ಇಲ್ಲಿಯ ಬರವಣಿಗೆಗೆ ಬಂದಿದೆ.

ಕೊಡಗಿನ ದುರಂತಕ್ಕೆ ಕಾರಣ ರಾಜ್ಯದ ಜನತೆಯ ಹಿತ ಕಾಯಬೇಕಾದ ರಾಜನೇ ನೀತಿಗೆಟ್ಟು ನಡೆದು, ದುಷ್ಟತನ ಕ್ರೌರ್ಯಗಳ ಪ್ರತಿರೂಪವಾದುದು ಎಂದು ಮೇಲ್ನೋಟಕ್ಕೆ ತೋರಿ ಬಂದರೂ, ಸೂಕ್ಷ್ಮವಾಗಿ ಒಳಹೊಕ್ಕು ನೋಡಿದರೆ, ಅದಕ್ಕೆ ಇನ್ನೆರಡು ಕಾರಣಗಳೂ ಅಷ್ಟೇ ಪ್ರಮುಖವಾದುವು. ಅವುಗಳೆಂದರೆ ಚಿಕವೀರರಾಜನು ಸಿಂಹಾಸನವೇರಿದ್ದನ್ನು ಅಸಹನೆಯಿಂದ ಕಾಣುವ ಅರಮನೆಯ ರಕ್ತ ಸಂಬಂಧಿಗಳ ಕುತಂತ್ರದ ರಾಜಕಾರಣ ಹಾಗೂ ಇದನ್ನು ಏನೇ ಆದರೂ ಬಿಡದೆ ಕೈವಶ ಮಾಡಿಕೊಳ್ಳಲೇಬೇಕೆಂದು ಹವಣಿಸುತ್ತಿರುವ ವಸಾಹತುಶಾಹಿ ಶಕ್ತಿಗಳ ರಾಜಕಾರಣ.

ಇವೆರಡಲ್ಲದೆ ಮನುಷ್ಯರ ಅಂಕೆಗೆ ಮೀರಿದ ಮತ್ತೊಂದು ಕಾರಣವೂ ಇದೆ. ಅದೆಂದರೆ ವೀರರಾಜ ಒಂದು ಪಾಪ ಪರಂಪರೆಯ ಪ್ರತೀಕ ಎಂಬುದು. ಹೀಗಾಗಿ ಕಾದಂಬರಿಯ ಕ್ರಿಯೆಗೆ ಸಹಜವಾಗಿಯೆ ಒಂದು ಸಂಕೀರ್ಣ ಸ್ವರೂಪ ಪ್ರಾಪ್ತವಾಗಿದೆ.

ಚಿಕವೀರರಾಜನಂತೂ ಎಳವೆಯಿಂದಲೇ ದುಷ್ಟ ಸಹವಾಸದಲ್ಲಿ ಬೆಳೆದು ದುಶ್ಚಟಗಳನ್ನು ರೂಢಿಸಿಕೊಂಡಿರುತ್ತಾನೆ. ಚಿಕವೀರರಾಜನ ಪದಚ್ಯುತಿಗಾಗಿ ನಡೆದಿರುವ

ಪ್ರಯತ್ನಗಳಲ್ಲಿ ಚಿಕವೀರರಾಜನ ದೊಡ್ಡಪ್ಪ ಅಪ್ಪಾಜಿಯ ಮಗ ವೀರಣ್ಣ ಸ್ವಾಮಿ ಅಪರಂಪಾರನೆಂಬ ಹೆಸರಿನಿಂದ ದೊರೆಯ ಆಡಳಿತದ ವಿರುದ್ಧ ಪ್ರಾರಂಭಿಸಿರುವ ಪ್ರತಿಭಟನೆ ಒಂದು. ಆದರೆ ಅದಕ್ಕೆ ನ್ಯಾಯದ ಮಾರ್ಗ ಬಿಟ್ಟು ಅಡ್ಡದಾರಿ ಹಿಡಿಯಲು ಅವನಿಗಿಷ್ಟವಿಲ್ಲ, ರಾಜನ ಭಾವಮೈದುನ ಚೆನ್ನಬಸವಯ್ಯ ಆಂಗ್ಲರ ನೆರವು ಪಡೆದು ರಾಜನನ್ನು ಪದಚ್ಯುತಿಗೊಳಿಸಲು ಯತ್ನಿಸಿದ್ದಾನೆ. ಇದು ತಿಳಿದೇ ದೊರೆ, ತನ್ನ ತಂಗಿ ದೇವಮ್ಮನನ್ನು ಸೆರೆಯಲ್ಲಿಡಿಸುತ್ತಾನೆ. ಇವರಿಬ್ಬರಲ್ಲದೆ ಕುಂಟ ಬಸವನಿಗೆ ಸಿಂಹಾಸನ ದೊರಕಿಸಬೇಕೆಂದು ಅವನ ಪರವಾಗಿ, ಸ್ವತಃ ಬಸವನಿಗೇ ಗೊತ್ತಿಲ್ಲದಂತೆ ಅವನ ತಾಯಿ ಭಗವತಿ ನಡೆಸಿರುವ ಅತ್ಯಂತ ಗುಟ್ಟಿನ ಪ್ರಯತ್ನ.

ದೇಶದೊಳಗೆ ಹೀಗೆ ವೀರರಾಜನ ಪದಚ್ಯುತಿಗೆ ಪ್ರಯತ್ನ ನಡೆದಿದ್ದರೆ, ಈಗಾಗಲೇ ನೆರೆಯ ಮೈಸೂರನ್ನು ವಶಪಡಿಸಿಕೊಂಡಿರುವ ಬ್ರಿಟಿಷರಿಗೆ, ವೀರರಾಜನ ಹೆಚ್ಚುತ್ತಲೇ ಹೋಗುವ ದುಷ್ಟತನ, ಕಾಮುಕತೆ, ಕ್ರೌರ್ಯಗಳು ಅವನನ್ನು ಸಿಂಹಾಸನದಿಂದಿಳಿಸಲು ಬಹಿರಂಗ ಪ್ರೇರಣೆ ಒದಗಿಸುತ್ತವೆ ಅಷ್ಟೆ. "ಮಾಸ್ತಿಯವರು, ವಸಾಹತೀಕರಣದ ಈ ಪ್ರಕ್ರಿಯೆಯನ್ನು ಅದರೆಲ್ಲ ಮುಖಗಳಲ್ಲಿ ಹಿಡಿಯುವ ಮೂಲಕ ದುರಂತವನ್ನು ಅಧಿಕೃತಗೊಳಿಸುತ್ತಾರೆ."[೧೯] ರಾಜನಿಗೆ ಕಂಸಯೋಗವಿದೆಯೆಂದು ಹಿಂದೆ ನುಡಿದಿದ್ದ ದೀಕ್ಷಿತನ ಭವಿಷ್ಯವಾಣಿ ನಿಜವಾಗುವಂತೆ ಸೆರೆಯಲ್ಲಿದ್ದ ದೇವಮ್ಮಾಜಿ, ರಾಣಿ ಮತ್ತು ರಾಜಕುಮಾರಿ ಇವರಿಬ್ಬರ ಸಹಕಾರದಿಂದ ಚೆನ್ನಬಸವನನ್ನು ಸಂಧಿಸಿ ಗರ್ಭ ಧರಿಸಿದಳು. ಸ್ವತಃ ದೀಕ್ಷಿತನಿಗೇ ಇದು ವಿಸ್ಮಯ.

ವೀರರಾಜನ ಕ್ರೌರ್ಯ, ಕಾಮುಕತೆ ಮತ್ತು ದುರಹಂಕಾರಗಳು ಮಾನವ ಸಂಸ್ಕೃತಿಯ ಮಿತಿ ಮೀರುವಂಥವು. ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಕದ್ದು ತರಿಸಿ ಬಲವಂತವಾಗಿ ಅಪ್ಪೇರವಾಡಿಗೆ ಸೇರಿಸಲು ಪ್ರಯತ್ನಿಸಿದ್ದು, ಉತ್ತಯ್ಯ ತಕ್ಕನ ಸೊಸೆ ಮಗಳನ್ನು ಬೇಡಿ ಕಳಿಸಿ ಅವನು ಒಪ್ಪದಿದ್ದಾಗ ಅವನ ಗೌರವದ ಪಡಿ ನಿಲ್ಲಿಸಿದ್ದು, ಚಿಕ್ಕಣ್ಣ ಸೆಟ್ಟಿಯ ಸೊಸೆಯನ್ನು ಅರಮನೆಗೆ ಕಳಿಸಬೇಕೆಂದು ಕರೆ ಕಳಿಸಿದ್ದು ಅವನ ಈ ಕಾಮುಕತೆಯ ಪರಾಕಾಷ್ಠೆ. ಇನ್ನು ಈ ಅರಸನನ್ನು ಸಿಂಹಾಸನದಿಂದ ಇಳಿಸದೆ ಬೇರೆ ಮಾರ್ಗವಿಲ್ಲವೆಂದು ಯೋಚಿಸಿ ಅರಮನೆಯ ವಿಪರೀತ ವೆಚ್ಚದ ಪರಿಣಾಮವಾಗಿ ಸಾಲ ಬಹಳ ಬೆಳೆಯಿತೆಂಬ ನೆಪವೊಡ್ಡಿ ದೊರೆಯು ಸಿಂಹಾಸನ ತೆರವು ಮಾಡಿ ರಾಣಿಯು ಅಧಿಕಾರವಹಿಸಿಕೊಳ್ಳಬೇಕೆಂಬ ಸಲಹೆಯನ್ನು ಮಂತ್ರಿಗಳು ಮುಂದಿಡುತ್ತಾರೆ. ಆದರೆ ರಾಣಿ ಅದಕ್ಕೊಪ್ಪುವುದಿಲ್ಲ.

ನವರಾತ್ರಿ ಹಬ್ಬದ ಸಂದರ್ಭದಲ್ಲಿ ಆಂಗ್ಲ ರೆಸಿಡೆಂಟ್ ಮತ್ತು ಇತರೆ ಅಧಿಕಾರಿಗಳಿಗಾಗಿ ಏರ್ಪಡಿಸಿದ್ದ ಮನೋರಂಜನೆಯ ಕಾರ್ಯಕ್ರಮದ ಅಂಗವಾಗಿ

ಪ್ರದರ್ಶಿಸಿದ ಪ್ರಹಸನ, ದೊರೆಯನ್ನೂ ಕುಂಟ ಬಸವನನ್ನೂ ಅಪಹಾಸ್ಯಕ್ಕೀಡುಮಾಡಿತು. ಇದು ಚೆನ್ನಬಸವನ ಕೃತ್ಯವೆಂದು ಸಂಶಯಿಸಿ ಇವನ ಅರಮನೆಯ ಮೇಲೆ ಇಡಲಾದ ಬಲವಾದ ಕಾವಲನ್ನೂ ಭೇದಿಸಿಕೊಂಡು, ರಾತ್ರಿಯಲ್ಲಿ ಮಡದಿ ಮತ್ತು ಮಗುವಿನೊಂದಿಗೆ ಗಡಿ ದಾಟುತ್ತಿರುವ ಸಂದರ್ಭದಲ್ಲಿ ಮಗು ತೊಟ್ಟಿಲಿಂದ ಬಿದ್ದುಹೋಗುತ್ತದೆ. ಆದರೆ ಮಗುವಿನ ತಂದೆತಾಯಿಗೆ ಇದರ ಅರಿವಾಗದೆ ಅವರ ಪಾಲಿಗೆ ಕಳೆದೇ ಹೋಯಿತು. ಗಡಿಯ ಗುರಿಕಾರನ ಕೈಯಿಂದ ಚೆನ್ನಬಸವಯ್ಯನ ಆಳು ಚೋಮನ ಕೈಗೆ ದೊರೆತ ಮಗುವನ್ನು ಅಲ್ಲಿಗೆ ಬಂದ ಅರಸ ತೆಗೆದುಕೊಳ್ಳುತ್ತಾನೆ. ಚೆನ್ನಬಸವಯ್ಯನ ಪ್ರಯಾಣದ ವಿವರ ತಿಳಿಸಲಿಲ್ಲವೆಂಬ ರೋಷಕ್ಕೆ ಚೋಮನನ್ನು ಗಲ್ಲಿಗೇರಿಸುತ್ತಾನೆ. ಮಗುವನ್ನು ಹಿಂತಿರುಗಿಸಬೇಕೆಂದು ಆಂಗ್ಲ ರೆಸಿಡೆಂಟ್ ಕಡೆಯಿಂದ ಚೆನ್ನಬಸವಯ್ಯ ಬರೆಸಿದ ಕಾಗದಕ್ಕೆ ವೀರರಾಜನದು ಒಂದೇ ಒರಟುತನದ ಉತ್ತರ–'ಆಶ್ರಯ ಪಡೆದ ಅಧಿಕಾರಿಗಳನ್ನು ಹಿಂತಿರುಗಿಸದಿದ್ದರೆ ಮಗುವನ್ನು ಕೊಲ್ಲುವ ಬೆದರಿಕೆ.' ಈ ವಿಷಯ ಚರ್ಚಿಸಲು ಬಂದ ಆಂಗ್ಲ ನಿಯೋಗಿಗಳನ್ನು ಬಂಧಿಸುತ್ತಾನೆ. ಅವರನ್ನು ಬಿಡಿಸಿಕೊಳ್ಳುವ ಸಲುವಾಗಿ ಆಂಗ್ಲರು ಸೈನ್ಯ ಸಮೇತ ಕೊಡಗಿಗೆ ಬರಬೇಕಾಯಿತು. ಮಗುವನ್ನು ತಂದೆ ತಾಯಿಗಳಿಗೆ ಹಿಂತಿರುಗಿಸಬೇಕೆಂದು ಯಾರೆಷ್ಟೇ ಹೇಳಿದರೂ ಲಕ್ಷಿಸದೆ ಕೋಪದ ಭರದಲ್ಲಿ ಅಸಾಧಾರಣ ಮನಃಸ್ಥಿತಿಯಲ್ಲಿ ನಿದ್ರಿಸುತ್ತಿದ್ದ ಮಗುವನ್ನು ಇರಿದು ಕೊಲ್ಲುತ್ತಾನೆ. ಇದು ರಾಜನ ಕ್ರೌರ್ಯ ಮತ್ತು ಪಾಪಕೃತ್ಯಗಳ ಪರಾಕಾಷ್ಠೆ. ಇದರ ಸುಳಿವು ಹತ್ತಿ ಇಡೀ ಜನತೆ ಕನಲುತ್ತದೆ. ರಾಜನ ಪದಚ್ಯುತಿ ಅನಿವಾರ್ಯವಾಗಿ ಸಿಂಹಾಸನವನ್ನು ಏರಬೇಕಾದವರು ಯಾರೆಂಬ ಚರ್ಚೆ ನಡೆದಿರುವಾಗಲೇ ತಪ್ಪಿಸಿಕೊಂಡು ಹೋಗಬೇಕೆಂದಿದ್ದ ರಾಜನನ್ನು ಆಂಗ್ಲ ಸೈನಿಕರು ಬಂಧಿಸುತ್ತಾರೆ. ಅರಸ ಅಲ್ಲಿಯೇ ಇದ್ದ ಬಸವನನ್ನು ಸುರಂಗಮಾರ್ಗವನ್ನು ಶತ್ರುಗಳಿಗೆ ತಿಳಿಸಿದವನೆಂದು ಸಂದೇಹಿಸಿ ಗುಂಡಿಟ್ಟು ಕೊಲ್ಲುತ್ತಾನೆ. ಸಿಂಹಾಸನ ಏರಲು ರಾಣಿ, ಮಂತ್ರಿಗಳು ಯಾರೂ ಒಪ್ಪದಿದ್ದಾಗ, ಆಂಗ್ಲರೇ ಕೊಡಗಿನ ಆಡಳಿತ ವಹಿಸಿಕೊಳ್ಳುತ್ತಾರೆ.

೫

ಕಾದಂಬರಿಯ ಈ ಕಥಾನಕವನ್ನು ಅತ್ಯಂತ ಕಲಾತ್ಮಕವಾಗಿ ಯೋಜಿಸಲಾಗಿದೆ. ದೇಶವನ್ನಾಳಬೇಕಾದ ದೊರೆಯ ದುಷ್ಟತನ, ಕಾಮುಕತೆಗಳು ಅವನ ವ್ಯಕ್ತಿತ್ವದ ಅಧಃ ಪತನಕ್ಕಷ್ಟೇ ಕಾರಣವಾಗದೆ ಈ ನೈತಿಕ ಅಧಃಪತನ ಸರ್ವಂಕಷವಾಗಿ ಇಡೀ ಸಮಾಜವನ್ನೇ ಸ್ಥಗಿತಗೊಳಿಸಿತು. ಚೆನ್ನಬಸವನಾಯಕ ಕಾದಂಬರಿಯಲ್ಲಿದ್ದಂತೆ ಇಲ್ಲೂ ವಿಧಿಯ ನಿಗೂಢ ಹಸ್ತ ಎಲ್ಲ ಘಟನಾವಳಿಗಳಲ್ಲೂ ತನ್ನ ಕೈಚಳಕ

ತೋರಿಸಿದಂತಿದೆ. ವೀರರಾಜನ ಆಳ್ವಿಕೆಯ ಕೊನೆಯ ವರ್ಷದ ಗ್ರಹಗತಿ ಕಂಸನ ಕೊನೆಯ ವರ್ಷದ ಗ್ರಹಗತಿಯನ್ನು ಹೋಲುತ್ತದೆಂಬುದು ದೀಕ್ಷಿತನ ಲೆಕ್ಕಾಚಾರ. ಅದರಂತೆ ದೇವಮ್ಮಾಜಿಯ ಮಗು ಅರಸನ ಕೈಸೇರಿ ಅದರಿಂದಲೇ ಸಾಯುವಂತಾದ ಅನಿವಾರ್ಯ ಘಟಿಸುವಂತೆ ಕ್ರಿಯಾಯೋಜನೆ ಇದೆ. ಈ ಪೌರಾಣಿಕ ಪರಿವೇಷ ಕಾದಂಬರಿಯ ಎಲ್ಲ ಮುಖ್ಯ ಘಟನೆಗಳನ್ನು ಆವರಿಸಿಕೊಂಡಿದೆ. ಅನ್ಯರ ಜಾತಕಗಳನ್ನು ಕರಾರುವಾಕ್ಕಾಗಿ ಲೆಕ್ಕಾಚಾರಮಾಡಬಲ್ಲ ಭಗವತಿಗೆ ತನ್ನ ಮಗ ಕುಂಟ ಬಸವನಿಗೆ ಸಿಂಹಾಸನ ಕೊಡಿಸಬೇಕೆಂಬ ಬಯಕೆ ಈಡೇರಿಸಿಕೊಳ್ಳಲಾಗಲೇ ಇಲ್ಲ. ಯಾರನ್ನು ನಿಷ್ಠೆಯಿಂದ ಓಲೈಸಿದ್ದನೋ ಯಾರ ದುಷ್ಕೃತ್ಯಗಳಲ್ಲೆಲ್ಲಾ ಅನಿವಾರ್ಯ ಸಹಚರನಾಗಿದ್ದನೋ ಅಂಥ ವೀರರಾಜನಿಂದಲೇ ಹತನಾಗಬೇಕಾಯಿತು. ತನ್ನ ತಂದೆ ಲಿಂಗರಾಜ ಮಾಡಿದ ಪಾಪದ ಕೃತ್ಯ ಮಗನನ್ನು ಬಲಿ ತೆಗೆದುಕೊಂಡೇ ಬಿಟ್ಟಿತು. "ಕರ್ಮಮೀ ಪರಿ ಮರಿಗೆ ಮರಿ ಇಕ್ಕುತಿರ್ಕುಂ" ಎಂಬಂತೆ ಲಿಂಗರಾಜನ ಪಾಪ ಕೃತ್ಯದ ಫಲವಾದ ಕುಂಟಬಸವ ಅರಸನನ್ನು ಅಧಃ ಪತನದತ್ತಲೇ ಕೊಂಡೊಯ್ಯುತ್ತಾನೆ. ಸಾತ್ವಿಕ ವ್ಯಕ್ತಿಗಳಾದ ಗೌರಮ್ಮ ಲಕ್ಷ್ಮಿನಾರಾಯಣಯ್ಯ, ಬೋಪಣ್ಣ ಇವರುಗಳು ರಾಜನನ್ನು ಸರಿದಾರಿಗೆ ತರಲು ಮಾಡಿದ ಯತ್ನಗಳೆಲ್ಲಾ ಬಸವನ ಕಾಲ್ತುಳಿತಕ್ಕೆ ಸಿಕ್ಕಿ ಮಣ್ಣುಗೂಡುತ್ತವೆ. ಶಿಶುಹತ್ಯೆ, ಕೊಲೆ, ಅತ್ಯಾಚಾರ ಹೀಗೆ ಯಾವುದೇ ಪಾಪ ಕೃತ್ಯಕ್ಕೆ ಹಿಂಜರಿಯ. ಆದರೆ ಇದು ಅನಿವಾರ್ಯವೇ ಆಗಿತ್ತೆಂಬುದು ಕಾದಂಬರಿಯ ಧ್ವನಿ. "ಇಂಥ ಸಂದರ್ಭದಲ್ಲಿ ಜೀವನವೆನ್ನುವುದು ವಿಧಾತ ಬರೆದಿಟ್ಟ ಒಂದು ನಾಟಕದಂತೆ ಆಗಿಬಿಡುತ್ತದೆ. ಕವಿ ಬರೆದು ಮುಗಿಸಿ ಆಡಿ ಎಂದು ಕೈಗೆ ಕೊಟ್ಟಿರುವ ನಾಟಕ; ನಟ ಅದನ್ನು ಆಡಬಹುದು. ಹೊರತು, ಬೇರೆ ಮಾಡಲು ಬರುವುದಿಲ್ಲ. ಇದನ್ನೇ ಪೂರ್ವಿಕರು ವಿಧಿಲಿಖಿತ ಎಂದಿರುವುದು. ಕಾಡಿನ ಮಧ್ಯದ ರಾಜಮಾರ್ಗದ ರಥ ಎದುರಿಗೆ ಹುಲಿ ಬಂತೆಂದು ಕಾಡಿಗೆ ಹರಿಯುವಂತಿಲ್ಲ. ಮಾರ್ಗದಲ್ಲೇ ಹರಿಯಬೇಕು. ಜೀವನದ ಹರಿವೂ ಅಷ್ಟೇ. ರಥಕ್ಕೆ ಜೀವನಕ್ಕೆ ಒಂದೇ ವ್ಯತ್ಯಾಸ. ಹುಲಿಗೆ ಅಂಜಿ ರಥ ನಿಂತಲ್ಲಿ ನಿಲ್ಲಬಹುದು. ಜೀವನದಲ್ಲಿ ಸಿಕ್ಕಿದವರಿಗೆ ಈ ಭಾಗ್ಯವಿಲ್ಲ."

ಟಿ.ಪಿ. ಅಶೋಕ ಅವರು ಹೇಳುವಂತೆ–"ಮಾಸ್ತಿಯವರು ಈ ವಿಧಿಯನ್ನು ಇತಿಹಾಸದ ನಿಗೂಢತೆಯಲ್ಲೇ ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದಾಗಿ ಕಾದಂಬರಿ ಪ್ರಕಟಪಡಿಸುವ ದುರಂತ ಪ್ರಜ್ಞೆಗೆ ಒಂದು ತಾತ್ವಿಕ ಆಯಾಮ ತಾನಾಗಿ ಒದಗಿ ಬರುತ್ತದೆ."[೧೦] ವೀರರಾಜ ದೀಕ್ಷಿತನಿಂದ ಕಂಸಯೋಗದ ಭವಿಷ್ಯದ್‌ವಾಣಿ ಕೇಳಿ ಅದನ್ನು ತಪ್ಪಿಸಲು ಏನೆಲ್ಲ ಪ್ರಯತ್ನಗಳನ್ನು ಮಾಡಿದರೂ ಅವನ ಎಲ್ಲ ಪ್ರಯತ್ನಗಳೂ ಅವನ ಹತೋಟಿಯನ್ನು ಮೀರಿ ಅದನ್ನು

ಆಗೊಳಿಸುವುದಕ್ಕೆ ಯೋಜಿತಗೊಳ್ಳುವುದೇ ಇಲ್ಲಿಯ ದೈವ ದುರ್ವಿಪಾಕ. ಎಲ್ಲವನ್ನೂ ಮೀರಿದ ಶಕ್ತಿಯಾದ ವಿಧಿಯ ಕೈವಾಡ ಈ ವಿಶ್ವದ ಬದುಕನ್ನು ನಿಯಂತ್ರಿಸುತ್ತದೆ ಎಂಬ ದರ್ಶನ ಈ ಕಾದಂಬರಿಯದು. ವೀರರಾಜ ತನ್ನ ನಡವಳಿಕೆಯಿಂದ ತನ್ನ ಸುತ್ತಿನವರಿಗೂ ಕೇಡಿನ ಬಳುವಳಿಯನ್ನೇ ತರುತ್ತಾನೆ.

ಚೆನ್ನಬಸವನಾಯಕದಲ್ಲಿ ಇದ್ದಂತೆ ಇಲ್ಲಿಯೂ ಸಾತ್ವಿಕ ವ್ಯಕ್ತಿಗಳು ತಮ್ಮ ಪಾಲಿನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ, ತಮ್ಮ ಅತಿಯಾದ ಒಳ್ಳೆಯ ತನವೇ ತಮಗೂ ನಾಡಿಗೂ ಮುಳುವಾಗುವುದು ಇನ್ನೊಂದು ದುರಂತ. ಲಕ್ಷ್ಮೀನಾರಾಯಣಯ್ಯ ಮತ್ತು ಬೋಪಣ್ಣ, ಈ ಇಬ್ಬರೂ ಹೊಣೆಗಾರ ದಿವಾನರುಗಳು, ನಾಡಿನ ಜನರೆಲ್ಲ ದುರಾಚಾರಿ ರಾಜನ ವಿರುದ್ಧವಿದ್ದಾಗ ಅವರ ವಿರೋಧಕ್ಕೆ ಒಂದು ಕ್ರಿಯಾಶೀಲರೂಪ ಕೊಡಬೇಕಾಗಿದ್ದವರು ಅದನ್ನು ನಿರ್ವಹಿಸದೆ ಸೋಲುತ್ತಾರೆ. ರಾಜನನ್ನು ಇಳಿಸಿ ರಾಣಿಯನ್ನು ಸಿಂಹಾಸನದ ಮೇಲೆ ಕೂರಿಸುವ ಮಾತು ಆಡಿದರೂ ಕಾರ್ಯಪ್ರವೃತ್ತರಾಗುವುದಿಲ್ಲ. ಪ್ರೇಸರ್ ಅಧಿಕಾರ ವಹಿಸಿಕೊಡಲು ಸಿದ್ಧನಾದಾಗ ಬೋಪಣ್ಣ, ಗೌರಮ್ಮ ಇಬ್ಬರೂ ತಮ್ಮದೇ ಆದ ಕಾರಣಗಳಿಗಾಗಿ ಒಪ್ಪುವದಿಲ್ಲ.

ಒಂದು ರೀತಿಯಲ್ಲಿ "ಚಕ್ರಾರ ಪಂಕ್ತಿರಿವ ಭಾಗ್ಯಂ" ಎಂಬ ಭಾಸನ ಮಾತನ್ನು ಚಿಕವೀರರಾಜೇಂದ್ರ ಧ್ವನಿಸುತ್ತದೆ. ಪ್ರಜಾಪೀಡಕನಾಗಿದ್ದ ಚಿಕವೀರನ ಆಳ್ವಿಕೆ ಹೋಗಿ ಆಂಗ್ಲರು ಅಧಿಕಾರಕ್ಕೆ ಬರುತ್ತಾರೆ. ಅನಂತರ ಅದೂ ಕಳೆದು ಭಾರತದ ಸ್ವಾತಂತ್ರ್ಯದೊಂದಿಗೆ ಆಂಗ್ಲರ ಆಳ್ವಿಕೆ ಕೊನೆಗೊಳ್ಳುತ್ತದೆ. ಅಧರ್ಮವೇ ಎಲ್ಲದರ ನಾಶಕ್ಕೆ ಕಾರಣ. ಇದು ಎಲ್ಲ ರಾಜ ಮನೆತನಗಳಿಗೂ ಸಾಮಾನ್ಯರಿಗೂ ಸಮಾನವಾಗಿಯೇ ಅನ್ವಯಿಸುತ್ತದಾದರೂ ಚಿಕವೀರರಾಜನಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಕಾರಣ ಚಿಕವೀರರಾಜ ಹಿಂದಿನ ಎಲ್ಲ ಸದ್ ಮೌಲ್ಯಗಳನ್ನೂ ಸರ್ವನಾಶ ಮಾಡಿದ. ಪ್ರಜೆಗಳು ರಾಜನಿಗೆ ನಿಷ್ಠೆ ತೋರಿಸಬೇಕಾದ ಊಳಿಗಮನ್ನ ವ್ಯವಸ್ಥೆಯೇ ಆದಾದರೂ ಈ ವ್ಯವಸ್ಥೆ ಏಕಮುಖವಾದ್ದೇನಲ್ಲ. ರಾಜನೂ ಪ್ರಜೆಗಳ ವಿಷಯಕ್ಕೆ ಪ್ರೀತಿ ಅನುಕಂಪ ಹೊಂದಿದ್ದು ಅವನೂ ಅವರ ರಕ್ಷಣೆಗೆ ದುಡಿಯಬೇಕಾಗುತ್ತದೆ. ಆದರೆ ವೀರರಾಜ ಇಂಥ ಮೌಲ್ಯವ್ಯವಸ್ಥೆಯ ತಳಪಾಯವನ್ನೇ ನಾಶಮಾಡಿದ. ಹಾಗಾಗಿ ಇಡೀ ವ್ಯವಸ್ಥೆಯೇ ಕುಸಿದು ಸರ್ವನಾಶವಾಗದೆ ವಿಧಿಯೇ ಇಲ್ಲ ಎಂಬಂತಾಯಿತು.

ಮಾಸ್ತಿಯವರ ವಿಶೇಷವೆಂದರೆ, ಇಷ್ಟೆಲ್ಲ ದುಷ್ಕೃತ್ಯಗಳಿಗೆ ಕಾರಣನಾದ ಚಿಕವೀರ ರಾಜ ಕೇವಲ ದುಷ್ಟನಲ್ಲ; ಅವನಲ್ಲೂ ಮನುಷ್ಯತ್ವದ ಸೆಲೆ ಉಂಟು ಎಂದು ತೋರಿಸಿರುವದರಲ್ಲಿ. ತನ್ನ ಮಗಳ ವಿಷಯಕ್ಕೆ ಅವನು ತೋರುವ

ಮಮತೆ ವಾತ್ಸಲ್ಯಗಳು, ಇದಕ್ಕೆ ಸಾಕ್ಷಿ. ಎಷ್ಟೇ ಕೋಪ ಬಂದರೂ ಅವಳ ಎದುರಿನಲ್ಲಿ ನಿಯಂತ್ರಿಸಿಕೊಳ್ಳುತ್ತಾನೆ; ಆಕೆಗಾಗಿ ಅಧಿಕಾರ ಬಿಟ್ಟುಕೊಡಲೂ ತಯಾರಾಗುತ್ತಾನೆ. ಆಕೆಗೆ ಪಟ್ಟವಾಗಲಿ ಎಂದೇ ಮತಾಂತರಕ್ಕೂ ಒಪ್ಪುತ್ತಾನೆ. ಲಕ್ಷ್ಮೀನಾರಾಯಣನ ತಾಯಿಯೊಂದಿಗೆ ಮಾತಾಡುವಾಗಲೂ ಅವನ ಒಳ್ಳೆಯತನ ವ್ಯಕ್ತವಾಗುತ್ತದೆ. ಕುಂಟ ಬಸವ ಮತ್ತು ವೀರಮ್ಮಾಜಿಯರೂ ಇದಕ್ಕೆ ಹೊರತಲ್ಲ, ಮಗನನ್ನು ಮುಗಿಸುವುದಕ್ಕೆ ಆಕೆ ಸುತರಾಂ ಒಪ್ಪುವುದಿಲ್ಲ. ಇದು ಜೈಮಿನಿ ಭಾರತದಲ್ಲಿ ಬರುವ –"ಪಾಪಿಗಳ ಒಡಲೊಳಿಹ ಪರಮಾತ್ಮನಂತೆ" ಎಂಬ ರೀತಿ. ಬಹುಶಃ ಮಾಸ್ತಿಯವರ ದರ್ಶನವೂ ಇದೇ ಆಗಿದೆ. ಮನುಷ್ಯ ಕೇವಲ ದುಷ್ಟನಲ್ಲ, ಬಲುಮಟ್ಟಿಗೆ ಮನುಷ್ಯರ ಸ್ನೇಹ ವಿಶ್ವಾಸಗಳು ಕೇವಲ ತಮ್ಮ ರಕ್ತ ಸಂಬಂಧಿಗಳ ವಿಷಯಕ್ಕಷ್ಟೇ ಸೀಮಿತವಾಗಿರುತ್ತದೆ. ಮನುಷ್ಯ ಎಷ್ಟೆಷ್ಟು ಮಟ್ಟಿಗೆ ಸೀಮಿತ ವ್ಯಾಪ್ತಿಯನ್ನು ಮೀರುತ್ತಾನೋ ಅಷ್ಟರ ಮಟ್ಟಿಗೆ ಅವನು ಸ್ವಾರ್ಥ ನೀಗಿಕೊಂಡು ದೊಡ್ಡವನಾಗುತ್ತ ಹೋಗುತ್ತಾನೆ.

ಈ ಎರಡು ಕಾದಂಬರಿಗಳ ಮತ್ತೊಂದು ಮುಖ್ಯ ವಿಶೇಷವೆಂದರೆ, ಎರಡೂ ಅಂದಿನ ಇತಿಹಾಸದ ಗತಿಯನ್ನು ಚಿತ್ರಿಸುತ್ತಲೇ ವರ್ತಮಾನದತ್ತ ನಮ್ಮನ್ನು ಕೊಂಡೊಯ್ಯುವ ಗುಣವನ್ನು ಹೊಂದಿವೆ. ಇದಕ್ಕೆ ಸಮರ್ಥನೆಯೋ ಎಂಬಂತೆ ಎರಡೂ ಕಾದಂಬರಿಗಳು ಭೂತದಲ್ಲಿ ಪ್ರಾರಂಭವಾಗಿ ವರ್ತಮಾನದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತವೆ. 'ಚೆನ್ನ ಬಸವನಾಯಕ' ದಲ್ಲಿ ಬಾಳೆಹೊನ್ನೂರಿನ ಕೋಲಾಟದ ಹುಡುಗರು ಕಾದಂಬರಿಕಾರರು ಮತ್ತು ಅವರ ಮಿತ್ರರ ಗುಂಪಿನ ಮುಂದೆ.

ಓ! ನಮ್ಮ ನಾಯಕಾ, ಬಾ ನಮ್ಮ ನಾಯಕಾ.
ಬೇಗನೆ ಬಾ ನಮ್ಮ ಚೆನ್ನಬಸವನಾಯಕಾ

ಎಂದು ಹಾಡುತ್ತಾ ನಗರದ ನಾಯಕರು ಇನ್ನೂ ಇದ್ದಾರೆ, ವೇಷ ಮರೆಸಿಕೊಂಡು ಮರೆಯಾಗಿ ನಿಂತರಂತೆ, ತಿರುಗಿ ಬರುತಾರಂತೆ–ಎಂದು ಹೇಳುತ್ತಾರೆ.

ಅದೇ ರೀತಿ ಚಿಕವೀರರಾಜೇಂದ್ರದಲ್ಲಿ ಕಾದಂಬರಿಕಾರರ ಮಿತ್ರರು. ಚಿಕವೀರರಾಜನ ಮೊಮ್ಮಗಗಳನ್ನು ಇಂಗ್ಲೆಂಡಿನಲ್ಲಿ ಭೇಟಿಮಾಡಿ ಬಂದ ಸಂಗತಿಯನ್ನು ತಿಳಿಸಿ ಇತಿಹಾಸದೊಂದಿಗೆ ವರ್ತಮಾನವನ್ನು ತಳುಕು ಹಾಕುತ್ತಾರೆ.

೬

ಮಾಸ್ತಿಯವರ ಈ ಎರಡೂ ಐತಿಹಾಸಿಕ ಕಾದಂಬರಿಗಳ ವಿಷಯದಲ್ಲಿ ವೀರಶೈವ ಜನಾಂಗದ ಕೆಲವರು ಬಲವಾದ ಆಕ್ಷೇಪವನ್ನು ಎತ್ತಿದ್ದಾರೆ. ಚೆನ್ನಬಸವನಾಯಕ ಕಾದಂಬರಿಯ ವೀರಮ್ಮಾಜಿ ಮತ್ತು ಚಿಕವೀರರಾಜೇಂದ್ರ

ಕಾದಂಬರಿಯ ಚಿಕವೀರರಾಜ ಇವರ ಪಾತ್ರಗಳನ್ನು ಉದ್ದೇಶಪೂರ್ವಕವಾಗಿ ವಿಕೃತಗೊಳಿಸಿ ಚಿತ್ರಿಸುವ ಮೂಲಕ ಅಪಮಾನವೆಸಗಲಾಗಿದೆ ಎಂಬುದೇ ಆ ಆಕ್ಷೇಪಗಳ ಸಾರ.

ಈ ಇಡೀ ವಿವಾದ ಹಲವಾರು ಪ್ರಶ್ನೆಗಳನ್ನು ಎತ್ತುತ್ತದೆ. ಮೊದಲನೆಯದಾಗಿ ಇತಿಹಾಸದ ವಸ್ತುವೊಂದನ್ನು ಸೃಜನಶೀಲ ಕೃತಿಗೆ ಆಧಾರವಾಗಿ ಬಳಸಿದಾಗ ಲೇಖಕನಾದವನು ಎಷ್ಟರ ಮಟ್ಟಿಗೆ ಇತಿಹಾಸಕ್ಕೆ ನಿಷ್ಠನಾಗಿರಬೇಕು? ಸೃಜನಶೀಲ ಲೇಖಕನಿಗಿರುವ ಸ್ವಾತಂತ್ರ್ಯದ ಮಿತಿ ಎಷ್ಟು ಮತ್ತು ಅವನಿಗೆ ಲಭ್ಯವಿದ್ದ ಐತಿಹಾಸಿಕ ಆಧಾರಗಳು ಯಾವ ಬಗೆಯವು? ಅವು ಎಷ್ಟರ ಮಟ್ಟಿಗೆ ಅಧಿಕೃತ ಎಂಬುವು ಆ ಪ್ರಶ್ನೆಗಳು.

ಯಾವುದೇ ಲೇಖಕ ಇತಿಹಾಸ, ಪುರಾಣ, ಸಮಕಾಲೀನ ಜನಜೀವನ ಇವುಗಳಿಂದ ತನ್ನ ಸೃಜನಶೀಲ ಅಗತ್ಯಗಳಿಗೆ ಬೇಕಾಗುವಷ್ಟು ವಿವರಗಳನ್ನು ಮಾತ್ರವೇ ಬಳಸಿಕೊಳ್ಳುತ್ತಾನೆ. ಸೃಜನಶೀಲ ಕೃತಿ ಎಂದಿಗೂ ಇತಿಹಾಸಕ್ಕೆ, ಪುರಾಣಕ್ಕೆ ಅಥವಾ ಸಮಕಾಲೀನ ಬದುಕಿನ ವಾಸ್ತವ ಸಂಗತಿಗಳಿಗೆ ಸಮನಲ್ಲ. ಕಾದಂಬರಿ ಕಾದಂಬರಿಯೇ. ಇತಿಹಾಸ ಅಥವಾ ಪುರಾಣವಲ್ಲ. ಅವನು ಇತಿಹಾಸಕಾರನಂತೆ ಅಥವಾ ಪುರಾಣಿಕನಂತೆ ವಸ್ತುಸಂಗತಿಗಳನ್ನು ಪೇರಿಸುತ್ತ ಹೋಗುವುದಿಲ್ಲ.[೨೨] ಅವನ ಸೃಜನಶೀಲತೆಯ ಸೆಲೆ ಇರುವುದೇ ಇತಿಹಾಸ ಅಥವಾ ಪುರಾಣ ನೀಡುವ ಸಾಮಗ್ರಿಗಳನ್ನು ಪರಿಕರಗಳಾಗಿ ಪರಿವರ್ತಿಸಿಕೊಳ್ಳುವುದರಲ್ಲಿ. ಷೇಕ್ಸ್‌ಪಿಯರ್, ಸರ್ ವಾಲ್ಟರ್ ಸ್ಕಾಟ್, ಡಿಕೆನ್ಸ್–ಈ ಯಾವ ಶ್ರೇಷ್ಠ ಲೇಖಕರೂ ಇತಿಹಾಸಕ್ಕೆ ಸಂಪೂರ್ಣ ನಿಷ್ಠರಾಗಿಲ್ಲ. ಇತಿಹಾಸದಿಂದ ಅವನಿಗೆ ಸಿಗುವುದು ರೇಖೆಗಳು ಮಾತ್ರ. ಆದರಿಂದ ಅವನು ರಕ್ತ ಮಾಂಸಗಳಿಂದ ಕೂಡಿದ ಜೀವಂತ ವ್ಯಕ್ತಿಗಳನ್ನು ನಿರ್ಮಿಸಿ ತನ್ಮೂಲಕ ತನ್ನದೇ ಆದ ಜೀವನ ದರ್ಶನ ನೀಡುತ್ತಾನೆ. ಲೇಖಕ ನೀಡುವ ಈ ದರ್ಶನವೇ ಅವನು ಸೃಜನಶೀಲ ಎಂಬುದಕ್ಕೆ, ಅದು ಇತಿಹಾಸ ಅಥವಾ ಪುರಾಣದಿಂದ ಭಿನ್ನ ಎಂಬುದಕ್ಕೆ ಸಾಕ್ಷಿ. ಆ ವಸ್ತುಗಳನ್ನು ತೆಗೆದುಕೊಂಡು ಏನೆಲ್ಲ ಘನವಾದ್ದನ್ನು ಸಾಧಿಸಿದ್ದಾನೆಂಬುದರತ್ತ ನಮ್ಮ ಲಕ್ಷ್ಯವಿರಬೇಕು.

ಬಿದನೂರಿನ ಇತಿಹಾಸವನ್ನು ಕುರಿತು ಸಾಹಿತ್ಯಕೃತಿ ರಚಿಸಿದವರಲ್ಲಿ ಮಾಸ್ತಿಯವರೇ ಮೊದಲಿಗರಲ್ಲ, ೧೯೩೨ರಷ್ಟು ಹಿಂದೆಯೇ ಕುವೆಂಪು ಅವರು ತಮ್ಮ 'ರಕ್ತಾಕ್ಷಿ' ನಾಟಕಕ್ಕೆ ಬಿದನೂರಿನ ಪತನದ ಈ ಐತಿಹಾಸಿಕ ವಸ್ತುವನ್ನೇ ಮೂಲ ದ್ರವ್ಯವಾಗಿ ಬಳಸಿಕೊಂಡಿದ್ದಾರೆ. ಅಲ್ಲಿ ವೀರಮ್ಮಾಜಿ 'ಚೆಲುವಾಂಬೆ' ಆಗಿದ್ದಾಳೆ ಅಷ್ಟೆ. ಅಲ್ಲೂ ಕೂಡ ಅವಳು ಸೇನಾಧಿಪತಿ ನಿಂಬಯ್ಯನೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಸೋಜಿಗವೆಂದರೆ ಆ

ಕೃತಿಯ ಬಗ್ಗೆ ಇದುವರೆಗೂ ಯಾವುದೇ ಆಕ್ಷೇಪಣೆಯ ದನಿ ಬಂದಿಲ್ಲ. ಬಹುಶಃ ಷೇಕ್ಸ್‌ಪಿಯರ್ ನಾಟಕದ ರೂಪಾಂತರ ಎಂಬ ಕಾರಣಕ್ಕೆ ರಿಯಾಯಿತಿ ನೀಡಿರಬಹುದು. ಆದರೆ ಆ ರೂಪಾಂತರಿತ ಕೃತಿಗೂ ಬಿದನೂರು ಇತಿಹಾಸವೇ ಆಧಾರ. ೧೯೪೯ರಲ್ಲಿ ಪ್ರಕಟವಾದ ಚೆನ್ನಬಸವನಾಯಕದಲ್ಲೂ ವೀರಮ್ಮಾಜಿಯ ಚಿತ್ರಣ ಹಾಗೇ ಇದೆ. ಇತಿಹಾಸದಲ್ಲಿ ಆಕೆಯ ವ್ಯಕ್ತಿತ್ವ ಹಾಗೆಯೇ ಮೂಡಿದೆ ಎಂಬುದೇ ಅದಕ್ಕೆ ಉತ್ತರ. ಅದೇ ಕಾದಂಬರಿಯಲ್ಲಿ ವೀರಶೈವ ಸಮುದಾಯಕ್ಕೆ ಸೇರಿದ, ಹಿರೇಮಠದ ಅಯ್ಯ, ನೇಮಯ್ಯ, ಶಾಂತಪ್ಪ ಮುಂತಾದ ಉದಾತ್ತ ವ್ಯಕ್ತಿಗಳನ್ನು ಮಾಸ್ತಿಯವರು ಚಿತ್ರಿಸಿದ್ದಾರೆ. ಯಾವುದೇ ಸಾಹಿತ್ಯ ಹೆಮ್ಮೆ ಪಡಬಹುದಾದಷ್ಟು ಉನ್ನತ ವ್ಯಕ್ತಿಗಳನ್ನಾಗಿ ಅವರನ್ನು ಚಿತ್ರಿಸಿದ್ದಾರೆ.

ಚಿಕವೀರರಾಜೇಂದ್ರ ಕಾದಂಬರಿಯ ವಿಷಯಕ್ಕಾದರೂ ಅದೇ ಮಾತುಗಳನ್ನು ಹೇಳಬಹುದು. ಇತಿಹಾಸದಲ್ಲಿ ಚಿಕವೀರರಾಜನನ್ನು ಕುರಿತು ಎರಡು ವಿಭಿನ್ನ ರೀತಿಯ ದಾಖಲೆಗಳಿವೆ. ಮೊದಲನೆಯದು ಚಿಕವೀರರಾಜ ಜನಾನುರಾಗಿಯಾಗಿದ್ದು, ರೈತರು, ಪ್ರಜೆಗಳ ಸಂಕಷ್ಟಕ್ಕೆ ಸ್ಪಂದಿಸುವ ರಾಜನಾಗಿದ್ದನೆಂದು ಚಿತ್ರಿಸುವ ವಿಲಿಯಂ ಜೆಫರ್ಸನ್ನನ ಚಿತ್ರಣವೊಂದು; ಇನ್ನೊಂದು ಇದಕ್ಕೆ ತದ್ವಿರುದ್ಧವಾಗಿ ಕ್ರೂರಿ, ಮುಂಗೋಪಿ, ಕಾಮುಕನೆಂಬಂತೆ ಚಿತ್ರಿಸಿರುವ ಡಾ. ಮೋಗ್ಲಿಂಗ್, ರಿಚಟರ್ ಮತ್ತು ರೈಸ್ ಅವರುಗಳು ಮಾಡಿರುವ ಚಿತ್ರಣ.[೨೨] ವಿಲಿಯಂ ಜೆಫರ್ಸನ್ನನ 'coorg and it's Rajas' ಪುಸ್ತಕ ೧೮೫೫ರಲ್ಲಿ ಇಂಗ್ಲೆಂಡಿನಲ್ಲಿ ಪ್ರಕಟವಾಯಿತು. ಎಂಬ ಅಂಶ ಗಮನಾರ್ಹ. ಮಾಸ್ತಿಯವರು ಕಾದಂಬರಿ ಬರೆಯುವ ಕಾಲಕ್ಕೆ (೧೯೫೬) ಈ ಪುಸ್ತಕ ಅವರಿಗೆ ದೊರೆತಿತ್ತೋ ಇಲ್ಲವೋ–ದೊರೆತಿದ್ದು ಬೇಕೆಂದೇ ಕಡೆಗಣಿಸಿದರೋ ಎಂಬುದು ಖಚಿತವಾಗಿ ತಿಳಿಯದ ಅಂಶ. ಆದಕ್ಕಿಂತ ಹೆಚ್ಚಾಗಿ ಮಾಸ್ತಿಯವರು ಚಿಕವೀರರಾಜನನ್ನು ಈಗಿರುವಂತೆ ಚಿತ್ರಿಸಲು ಆಧಾರವಾಗಿರುವುದಾದರೂ ಅವರಿಗೆ ಬ್ರಿಟಿಷ್ ಇತಿಹಾಸಕಾರರೇ ಒದಗಿಸಿದ ಮಾಹಿತಿ ಎಂಬುದನ್ನೂ ಅದು ಅವರ ಸ್ವಕಪೋಲ ಕಲ್ಪಿತವಲ್ಲ ಎಂಬುದನ್ನೂ ಮರೆಯಬಾರದು. ವೀರರಾಜನ ಈ ದುಷ್ಟ ವ್ಯಕ್ತಿತ್ವದಲ್ಲೂ ಮಾನವೀಯತೆಯ ಸೆಲೆಗಳಿದ್ದುವೆಂಬುದನ್ನು, ಮಗಳ ವಿಷಯಕ್ಕೆ ಅವನು ತೋರುವ ಪ್ರೀತಿಯಲ್ಲಿ, ಲಕ್ಷ್ಮೀನಾರಾಯಣಯ್ಯನ ತಾಯಿಯೊಂದಿಗೆ ಅವನು ನಡೆದುಕೊಳ್ಳುವ ರೀತಿಯಲ್ಲಿ, ಹೆಂಡತಿಯ ವಿಷಯಕ್ಕೆ ಎಷ್ಟೇ ಕೆಟ್ಟದಾಗಿ ನಡೆದುಕೊಂಡರೂ ಆಕೆಯ ಸಾತ್ವಿಕ ವ್ಯಕ್ತಿತ್ವದೆದುರು ಹಿಂಜರಿಯುವಲ್ಲಿ ಮಾಸ್ತಿ ತೋರಿಸಿದ್ದಾರೆ. ಅವನು ಮಗುವನ್ನು ಕೊಲ್ಲುವುದು ಕೂಡ ಒಂದು ಅಸಾಧಾರಣ ಮನಸ್ಥಿತಿಯಲ್ಲಿ. ಆ ಮಗುವನ್ನು ಕೊಂದ ಮೇಲೆ ಮನಸ್ಸಿನ ಸ್ತಿಮಿತ ಕಳೆದುಕೊಳ್ಳುತ್ತಾನೆ. ತನ್ನ ಆ ಕೃತ್ಯ ಅವನನ್ನು

ಪಿಶಾಚದಂತೆ ಕಾಡುತ್ತದೆ. ಎಂಬುದೇ ಅವನಲ್ಲಿರುವ ಮನುಷ್ಯತ್ವವನ್ನು ಮಾಸ್ತಿ ಗುರುತಿಸುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿ. ಮೇಲಾಗಿ ಅವನ ಸ್ವಭಾವ ಈ ರೀತಿ ಆಗಲೂ ಅವನು ಬೆಳೆದು ಬಂದ ರೀತಿ, ಅವನಿಗೆ ಸರಿಯಾದ ಸಹವಾಸ, ತಂದೆಯ ಪ್ರೀತಿ, ಸರಿಯಾದ ಶಿಕ್ಷಣ ಸಿಗದಿರುವುದು ಇವೇ ಕಾರಣ ಎಂಬುದನ್ನು ತೋರಿದ್ದಾರೆ.

ಮಾಸ್ತಿಯವರ ಈ ವ್ಯಕ್ತಿತ್ವ ಚಿತ್ರಣದಲ್ಲಿ ಅರೆಕೊರೆಗಳನ್ನು ತೋರಿಸಬಹುದು. ಆದರೆ–"ಲೇಖಕರು ರಾಜನ ಬದುಕಿನ ಕರಾಳ ಮುಖವನ್ನಷ್ಟೇ ಚಿತ್ರಿಸುವ ಪೂರ್ವಸಿದ್ಧ ಮನಸ್ಸಿನಿಂದ ಹೊರಟಿರುವರೆನಿಸುವಂತಾಗಿದೆ"[೨೩] ಎಂಬ ವಿಮರ್ಶೆ ಮಾಸ್ತಿಯವರ ಬಗ್ಗೆ ಪೂರ್ವಗ್ರಹ ಪೀಡಿತವಾದ್ದು. ಅದೂ ಅಲ್ಲದೆ "ಅಬ್ರಾಹ್ಮಣನೊಬ್ಬ ಬ್ರಾಹ್ಮಣ ಹೆಣ್ಣನ್ನು ಕಾಮದ ಶೋಷಣೆಗೆ ಗುರಿ ಮಾಡಿದ್ದರಿಂದಾಗಿಯೇ ಇಡೀ ಕೊಡಗುಸಾಮ್ರಾಜ್ಯ ಪತನವಾಯಿತೆಂಬ ಎಚ್ಚರಿಕೆಯ ಧ್ವನಿ ಕಾದಂಬರಿಯುದ್ದಕ್ಕೂ ತುಂಬಾ ಮಾರ್ಮಿಕವಾಗಿ ನಡೆದಿರುವುದನ್ನು ಗಮನಿಸಬಹುದು"[೨೪] ಎಂಬುದು ಕೂಡ ಮಾಸ್ತಿಯವರ ಬಗ್ಗೆ ಅತ್ಯಂತ ಅನುದಾರವಾದ, ಪೂರ್ವಗ್ರಹಪೀಡಿತವಾದ ನೆಲೆಯಿಂದ ಬಂದಿರುವಂಥದು. ಆದರೆ ಕಂಸಯೋಗದ ಕಲ್ಪನೆಯನ್ನು ಸಾಧಿಸಲಿಕ್ಕಾಗಿಯೇ ತಂದಂತಿರುವ ಮಗುವಿನ ಕೊಲೆ; ಅದಕ್ಕೆ ಮುಂಚೆ ತಪ್ಪಿಸಿ ಕೊಂಡು ಹೋಗುತ್ತಿದ್ದಾಗ ಮಗು ತೊಟ್ಟಿಲಿನಿಂದ ಜಾರಿಬಿದ್ದು ಅದರ ಅರಿವಿಲ್ಲದೆ, ತಂದೆ ತಾಯಿಗಳು ಮುಂದುವರಿದದ್ದು, ಅದು ವೀರರಾಜನಿಗೆ ಸಿಕ್ಕಿದ್ದು ಇವೆಲ್ಲ ಅವಾಸ್ತವ ಕಲ್ಪನೆ ಎಂಬುದನ್ನು ಅಲ್ಲಗಳೆಯುವುದು ಕಷ್ಟ. ಲೇಖಕರು ಹೇಳಿದಂತೆ– "ಇದು ದೊರೆಯ ದೌಷ್ಟಕ್ಕೂ ದೀಕ್ಷಿತನ ಜ್ಯೋತಿಶ್ಶಾಸ್ತ್ರಕ್ಕೂ ಮಗುವಿನ ಪ್ರಾಣವನ್ನು ಹಂಚಿಂದತಾಗಿದೆ."[೨೫] ಇಲ್ಲಿ ಮಾಸ್ತಿಯವರ ಈ ಕಥಾನಕ ಕಲ್ಪನೆ, ಅಷ್ಟು ಸಹಜವಾದ ರೀತಿಯಲ್ಲಿ, ವಾಸ್ತವ ಭೂಮಿಕೆಯಲ್ಲಿ ನಿರ್ವಹಿಸಲ್ಪಟ್ಟಿಲ್ಲ.

ಆದರೆ ವಿಮರ್ಶಕರು ತಮ್ಮ ಇಡೀ ಲೇಖನದಲ್ಲಿ ಜಾತೀಯ ದೃಷ್ಟಿಕೋನದಿಂದಲೇ ಕಾದಂಬರಿಯನ್ನು ವಿಮರ್ಶಿಸಿದ್ದಾರೆ. ಈ ರೀತಿ ಧ್ವನಿಗಳನ್ನು ಕಾಣುತ್ತ ಹೋದರೆ, ಇಂಡಿಯಾದ ಸಂದರ್ಭದಲ್ಲಿ ತಮ್ಮವಲ್ಲದ ಜಾತಿಯ ವ್ಯಕ್ತಿಗಳನ್ನು ಸಾಹಿತ್ಯದಲ್ಲಿ ಚಿತ್ರಿಸುವುದು ಸಾಧ್ಯವೇ ಇಲ್ಲ.

ಚಿಕವೀರರಾಜೇಂದ್ರದ ಬಗ್ಗೆ ಬಂದ ಮತ್ತೊಂದು ವಿಮರ್ಶೆ ಅತ್ಯಂತ ಬಾಲಿಶವಾಗಿದ್ದು ಪ್ರತಿಕ್ರಿಯೆಗೂ ಅನರ್ಹವಾಗಿದೆ. ಮಾಸ್ತಿಯವರಿಗೆ ಕನ್ನಡ ದೇಶದ ಬಗ್ಗೆ, ಕನ್ನಡ ರಾಜನ ಬಗ್ಗೆ ಪ್ರೀತಿಯಿಲ್ಲ. ಕಾರಣ ಯಾವಾಗಲೂ ತಮಿಳುಮಾತನಾಡುವವರು. ಬೇಕೆಂತಲೇ ಕನ್ನಡ ರಾಜನ ಅವನತಿಯನ್ನು ಚಿತ್ರಿಸುವ ಕಾದಂಬರಿ ಬರೆದರು. "ತಮಿಳು ತಾಯಿಭಾಷೆಯ ಮಾಸ್ತಿ, ಕನ್ನಡದ ಅರಸನ

ಕೆಟ್ಟತನವನ್ನೆಲ್ಲ ಕನ್ನಡ ಭಾಷೆಯಲ್ಲಿಯೇ ಕಾದಂಬರಿ ರೂಪದಲ್ಲಿ ಬರೆದು ಪ್ರಕಟಿಸಿರುವದು ಅವರ ಉಂಡ ಮನೆಯ ಜಂತಿ ಎಣಿಸುವ ಮನೋವೃತ್ತಿ ಎತ್ತಿ ತೋರಿಸುತ್ತದೆ–”[೨] ಎಂಬಂಥ ನೆಲೆಯಿಂದ ಹೊರಟ ವಿಮರ್ಶೆಗೆ ಏನೆಂದು ಪ್ರತಿಕ್ರಿಯಿಸುವುದು? ಇಡೀ ಲೇಖನ ಹೀಗೆ ದ್ವೇಷದ ನೆಲೆಯಿಂದಲೇ ಹೊರಟಿದ್ದು ಅತ್ಯಂತ ಬಾಲಿಶವಾಗಿದೆ.

ಮಾಸ್ತಿಯವರ ಪಾತ್ರದರ್ಶನದಲ್ಲಿ ಆರೆಕೊರೆಗಳಿರಬಹುದು. ಅವರ ವಿಧಿವಾದವನ್ನು ನಾವು ಒಪ್ಪಬಹುದು. ಬಿಡಬಹುದು. ಆದರೆ ಅವರಂಥ ಮಹಾಸಾಹಿತಿ ಒಂದು ಜನಾಂಗದ ಮೇಲಿನ ದ್ವೇಷ ಪ್ರಕಾಶನಕ್ಕಾಗಿ ಸಾಹಿತ್ಯ ಮಾಧ್ಯಮವನ್ನು ಬಳಸುತ್ತಾರೆಂಬುದಾಗಲಿ, ಅವರ ಕನ್ನಡ ನಾಡುನುಡಿಯ ಪ್ರೇಮವನ್ನು ಶಂಕಿಸುವುದಾಗಲಿ, ಊಹೆಗೂ ಮೀರಿದ್ದು. ಅಂಥ ಆರೋಪ ಆರೋಗ್ಯಕರ ನೆಲೆಯಿಂದ ಮಾಡಿದಂಥದಲ್ಲ ಎಂದಷ್ಟೇ ಹೇಳಬಹುದು.

○

ಅಧ್ಯಾಯ ೫

ಕಾವ್ಯ

ಹೊಸಗನ್ನಡ ಸಾಹಿತ್ಯದ ಎಲ್ಲ ಸೃಜನಶೀಲ ಪ್ರಕಾರಗಳಿಗೂ ಮಾಸ್ತಿಯವರ ಪ್ರತಿಭೆ ಇಂಬು ಕೊಟ್ಟಿತು. ಆದಕ್ಕೆ ಕಾರಣವೂ ತೀರ ಸ್ಪಷ್ಟ. ಹೊಸಗನ್ನಡ ಸಾಹಿತ್ಯದ ಮುಂಬೆಳಗಿನ ಆ ದಿನಗಳಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ಅಗತ್ಯವಾಗಿತ್ತು. ಬರೆಯುವವರ ಸಂಖ್ಯೆಯೂ ಕಡಿಮೆ ಇತ್ತು. ಕಾಲದ ಅಗತ್ಯವನ್ನು ಪೂರೈಸುವ ದೃಷ್ಟಿಯ ಜೊತೆಗೇ ಸಹಜ ಪ್ರಯೋಗಶೀಲ ಬುದ್ಧಿಯೂ ಸೇರಿ ಕಾವ್ಯ ನಾಟಕಗಳತ್ತ ಮಾಸ್ತಿಯವರ ಮನಸ್ಸು ಹರಿದಿರಬೇಕು. ಸಣ್ಣಕತೆಗಳ ಶ್ರೀನಿವಾಸರು ಎಂದೇ ಹೆಸರಾದ್ದರಿಂದಲೋ ಏನೋ, ಉಳಿದ ಸಾಹಿತ್ಯ ಪ್ರಕಾರಗಳಲ್ಲಿನ ಅವರ ಸಾಧನೆ ಅಷ್ಟಾಗಿ ಜನರ ಮತ್ತು ವಿಮರ್ಶಕರ ಗಮನ ಸೆಳೆಯಲಿಲ್ಲವೆನಿಸುತ್ತದೆ. ಕಾವ್ಯದಲ್ಲೂ ಅವರು ಭಾವಗೀತೆ, ಕಥನ ಕವನ, ಅಷ್ಟಷಟ್ಪದಿ, ಮಹಾಕಾವ್ಯ ಈ ಎಲ್ಲ ಪ್ರಕಾರಗಳಲ್ಲೂ ರಚನೆಗಳನ್ನು ಮಾಡಿದ್ದಾರೆ. ಮಹಾಕಾವ್ಯವೂ ಸೇರಿ ಒಟ್ಟಾರೆ ೧೭ ಕಾವ್ಯಕೃತಿಗಳನ್ನು ಅವರು ನೀಡಿದ್ದಾರೆ. 'ಬಿನ್ನಹ', 'ಮನವಿ'–ಎರಡೂ ಕೀರ್ತನ ಸಾಹಿತ್ಯವನ್ನು ಹೋಲುವ ರಚನೆಗಳು. ಅರುಣ, ತಾವರೆ, ಚೆಲುವು, ಮಲಾರ, ಸಂಕ್ರಾಂತಿ ಇವುಗಳಲ್ಲಿ ಅವರ ಭಾವಗೀತೆಗಳು ಸೇರ್ಪಡೆಯಾಗಿದೆ. ನವರಾತ್ರಿಯ ಐದು ಭಾಗಗಳಲ್ಲದೆ, ಗೌಡರ ಮಲ್ಲಿ, ರಾಮನವಮಿ, ಮೂಕನ ಮಕ್ಕಳು ಅವರ ಕಥನ ಕವನಗಳು, ಇವಲ್ಲದೆ, 'ಅರುಣ'ದಲ್ಲಿರುವ ಅಭಿಮನ್ಯು, ಸ್ಥಳಗಳ ಹೆಸರು

ಎಂಬ ರಚನೆಗಳು, ಇಂದುಮತಿ ಇವೆಲ್ಲಾ ಕಥನದ ಧಾಟಿಯಲ್ಲಿರುವ ರಚನೆಗಳು. ಶ್ರೀ ರಾಮಪಟ್ಟಾಭಿಷೇಕ ಅವರ ಮಹಾಕಾವ್ಯ.

ಮಾಸ್ತಿಯವರದು ಮೊದಲಿನಿಂದಲೂ ತೀವ್ರ ಆಸ್ತಿಕ ಪ್ರವೃತ್ತಿ. ಬಾಳನ್ನು ನಡೆಸುವ ಶಕ್ತಿಯೊಂದಿದೆ ಎಂದು ದೃಢವಾಗಿ ನಂಬಿರುವವರು ಅವರು. ಅವರ ಇಡೀ ಸಾಹಿತ್ಯದಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ. 'ಬಿನ್ನಹ' ಮತ್ತು 'ಮನವಿ' ಈ ಎರಡು ಕೃತಿಗಳಲ್ಲೂ ತಾವು ನಂಬಿದ ದೈವವನ್ನು ಬಗೆ ಬಗೆಯಾಗಿ ಸ್ತುತಿಸುವಂಥ ಗೀತಗಳನ್ನು ರಚಿಸಿದ್ದಾರೆ. ಹೊಸಗನ್ನಡದಲ್ಲಿ ಹೀಗೆ ಭಕ್ತಿಗೀತಗಳನ್ನು ಮೊದಲಿಗೆ ರಚಿಸಿದವರೇ ಅವರು. ಇದು ಒಂದು ರೀತಿಯಲ್ಲಿ ದಾಸ ಸಾಹಿತ್ಯದ ಮುಂದುವರಿಕೆ. ಭಗವತ್ಸಾಕ್ಷಾತ್ಕಾರದ ಹಂಬಲ, ದೈವ ಕೃಪೆಯ ನಿರೀಕ್ಷೆ, ಅದಕ್ಕಾಗಿ ವ್ಯಾಕುಲ ಪಡುವುದು, ಅವನನ್ನು ಕುರಿತ ಸ್ತುತಿ, ಅವನಿಂದ ದೂರವಾದ್ದಕ್ಕೆ ಜೀವಾತ್ಮ ಅನುಭವಿಸುವ ವಿರಹ ಭಾವ, ತನ್ನನ್ನು ದೈವಕ್ಕೆ ಸಮರ್ಪಿಸಿಕೊಳ್ಳುವ ಭಾವ, ಹೀಗೆ ಭಕ್ತಿಸಾಧಕನೊಬ್ಬನ ವಿವಿಧ ಭಾವ ಲಹರಿಗಳು ಇಲ್ಲಿ ಹಾಡುಗಳಾಗಿ ಬರುತ್ತವೆ. ಸತಿಪತಿ ಭಾವದ, ಸ್ವಾಮಿ-ಭೃತ್ಯ ಸಂಬಂಧದ, ಸ್ನೇಹಭಾವದ ಬಗೆಗಳೂ ಇಲ್ಲಿವೆ.

ರಾಗತಾಳಲಯ ಬದ್ಧವಾದ ಈ ರಚನೆಗಳು, ದೇವರನ್ನು ಕುರಿತ ಪರಂಪರಾಗತವಾದ ನಂಬಿಕೆಗಳು, ಆಲೋಚನೆಗಳನ್ನೇ ಹೊಂದಿವೆ. ಪುರಾಣ ಪ್ರಸಂಗಗಳನ್ನು ಪ್ರತೀಕಗಳಾಗಿ ಬಳಸಿಕೊಳ್ಳುವುದು ಕಂಡು ಬರುತ್ತದೆ. ದೈವ ಮನುಷ್ಯ ಸಂಬಂಧ ಹೇಳುವಾಗ ಲೌಕಿಕ ದೃಷ್ಟಾಂತಗಳು, ಗಾದೆಗಳನ್ನು ಬಳಸಿಕೊಳ್ಳುತ್ತಾರೆ. 'ಮನವಿ'ಯಲ್ಲಿ ಭಗವಂತನನ್ನು ಕುರಿತಾದ ಅನನ್ಯ ಶರಣಾಗತಿಯ, ಸರ್ವ ಸಮರ್ಪಣಾ ಭಾವದ ರಚನೆಗಳಿವೆ. ಇದು ಮಾಸ್ತಿಯವರು ಬೆಳೆದು ಬಂದ ಪ್ರಪತ್ತಿ ಮಾರ್ಗಕ್ಕೆ ಸಹಜವಾದ್ದು.

ಅವುಗಳ ಭಾಷೆ ಅತ್ಯಂತ ತಿಳಿಯಾದ ಭಾಷೆ. ಗದ್ಯಪದ್ಯಗಳ ನಡುವಿನ ಭೇದವನ್ನು ಅಳಿಸಿ ಹಾಕಿದಂಥ ರಚನೆ. ಉಪಮಾ ಸಮೃದ್ಧಿ ಇದೆ. ಆದರೆ ಜುಮ್ಮೆನ್ನಿಸುವಂಥ ಅನುಭವವನ್ನು ನೀಡುವ ರೂಪಕ, ಪ್ರತಿಮೆಗಳಿಲ್ಲ. 'ಬಿನ್ನಹ' ಹಾಗೂ ಮುಂದಿನ 'ಅರುಣ' ಇವುಗಳಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಬಿಡದೆ ಪಾಲಿಸಿರುವ, ಕಂದ ಷಟ್ಪದಿಗಳ ರೂಪ ಇದೆ. ಕವಿ ಹೊಸ ರೂಪಕ್ಕಾಗಿ ಒದ್ದಾಡುತ್ತಿರುವುದು ಕಂಡುಬರುತ್ತದೆ.

ಅರುಣ, ತಾವರೆ, ಚೆಲುವು, ಸಂಕ್ರಾಂತಿ–ಈ ಸಂಕಲನಗಳು ಚೆಲುವಾದ ಭಾವಗೀತೆಗಳನ್ನು ಒಳಗೊಂಡಿವೆ. ನವೋದಯ ಕವಿಗಳಲ್ಲಿ ಸಾಮಾನ್ಯವಾಗಿ

ಕಂಡು ಬರುವಂತೆ, ನಿಸರ್ಗದ ವಸ್ತು ವ್ಯಾಪಾರಗಳಲ್ಲಿ, ಪಶು ಪಕ್ಷಿ ಪ್ರಾಣಿಗಳಲ್ಲಿ ಆತ್ಮೀಯ ಸಂಬಂಧ ಸ್ಥಾಪಿಸಿಕೊಳ್ಳುವುದು, ಪ್ರಕೃತಿಯ ಒಂದೊಂದು ಚೇತನವೂ ಪರಮಾತ್ಮನ ಪ್ರತಿರೂಪವೆ ಎಂದು ಭಾವಿಸುವುದು ಮುಂತಾದುವೆಲ್ಲ ಇಲ್ಲಿಯೂ ಕಂಡುಬರುತ್ತವೆ. ಹಕ್ಕಿಗಳ ಇಂಚರದಲ್ಲಿ, ಪರಿಮಳಭರಿತ ಪುಷ್ಪಗಳಲ್ಲಿ ತಂಗಾಳಿಯಲ್ಲಿ ದೈವ ಮುಖವನ್ನೇ ಕಾಣುವ ಈ ಮನೋಭಾವ 'ಬಿನ್ನಹ'ದ ಗೀತೆಗಳಿಂದ ಬದಲಾದ ಮನೋಭಾವ. ಬಿನ್ನಹದಲ್ಲಿ ದೇವರನ್ನು ಒಂದು ಪ್ರತ್ಯೇಕ ವಸ್ತುವಾಗಿ ಕಂಡ ಕವಿ ಇಲ್ಲಿ ದೇವರೆಂದರೆ ಸೃಷ್ಟಿಯೇ, ನಿಸರ್ಗದಲ್ಲೆಲ್ಲಾ ವ್ಯಾಪ್ತನಾಗಿದ್ದಾನೆಂದು ಕಂಡುಕೊಳ್ಳುವಲ್ಲಿ ಅವರ ಬೆಳವಣಿಗೆ ಗಮನಿಸಬಹುದು. ಅವರ ಮುಂದಿನ ಕಾವ್ಯರಚನೆಗಳಲ್ಲಿ ಈ ಭಾವ ಇನ್ನೂ ಮುಂದುವರಿದು ದೇವರೆಂದರೆ ಬೇರೆ ಯಾರೂ ಅಲ್ಲ, ಮಾನವರೇ ದೇವರು ಎಂಬ ಹಂತಕ್ಕೆ ಬೆಳೆದಿರುವುದನ್ನು ಕಾಣಬಹುದು. ಅವರ ರಾಮನವಮಿ ಕಥನ ಕವನದಲ್ಲಿ ಮತ್ತು ಶ್ರೀರಾಮ ಪಟ್ಟಾಭಿಷೇಕ ಕಾವ್ಯದಲ್ಲಿ ಇದನ್ನು ಕಾಣಬಹುದು. ಅವರ ಶ್ರೀ ಕೃಷ್ಣ ಸಂದರ್ಶನ ಎಂಬ ಕತೆಯಲ್ಲಿ ಕೂಡಾ ಸಾಮಾನ್ಯ ಪುರುಷನೇ ಪುರುಷೋತ್ತಮನಾದ ಪರಿಯನ್ನು ಚಿತ್ರಿಸಲಾಗಿದೆ.

ಮಾಸ್ತಿಯವರ ಭಾವಗೀತ ಕಾವ್ಯಗುಚ್ಛದಲ್ಲಿ ಕೆಲವು ಸೊಗಸಾದ ಭಾವ ಗೀತಗಳಿವೆ. ತಂಗಾಳಿ, ಚೆಲುವದೇವಿ, ಕನ್ನೈದಿಲೆ ಮೊದಲಾದುವು. 'ಚೆಲುವದೇವಿ' ಮಾಸ್ತಿಯವರ ಶ್ರೇಷ್ಠ ಭಾವಗೀತೆಗಳಲ್ಲಿ ಒಂದು. ನಿಸರ್ಗದ ಚೆಲುವು ಮತ್ತು ಹೆಣ್ಣಿನ ಚೆಲುವು ಎರಡನ್ನು ಸಮೀಕರಿಸಿ ನೋಡಿದಾಗ ಕವಿಗೆ ಅನ್ನಿಸುವುದು–

> ಮಗುವಾಗಿ ತಾಯ್ತಂದೆವಿರ ಮನವ ನಲಿಸಿ
> ಸತಿಯಾಗಿ ಪತಿಯ ಹೃದಯದ ಸುಖವ ಸಲಿಸಿ
> ಜಗದಂಬೆಯವತಾರದಂತೆ ಕಳಕಳಿಸಿ
> ಸುತರ ಹಡೆದೆತ್ತಿ ಮುದ್ದಾಡಿಸಲೆ ಬೆಳೆಸುವ.

ಹೆಣ್ಣೆನಂದ 'ಸೃಷ್ಟಿಯಂದಕೆ ಮಣಿಮುಕುರ' ಎಂದು – ಜಗದ ಮಾನವತೆಗೆ ಮಿಗಿಲಾದ ಚೆಲವು ಬೇರೆ ಇಲ್ಲ, ಅದು ನಿಸರ್ಗದ ಚೆಲುವಿಗಿಂತಲೂ ಮಿಗಿಲಾದ್ದು ಎಂದು ಈ ಕವನದಲ್ಲಿ ವರ್ಣಿಸಲಾದ ಹೆಣ್ಣನ್ನು ಕಂಡಾಗ ಕವಿಗೆ ಮನವರಿಕೆಯಾಗುತ್ತದೆ.

ಈ ಕವನ ಮಾಸ್ತಿಯವರ ಸಾಹಿತ್ಯದ ಮೂಲ ತತ್ವವನ್ನು ಬಯಲು ಮಾಡುತ್ತದೆ. ಮನುಷ್ಯನೇ ಅವರ ಸಾಹಿತ್ಯದ ಕೇಂದ್ರ ಬಿಂದು. ಉಳಿದೆಲ್ಲವೂ ಅದಕ್ಕಿಂತ ಕೆಳಗಿನ ನೆಲೆಯದು. ದೈವಾನುಭವೂ ಮನುಷ್ಯ ಬದುಕಿನ ಮೂಲಕವೇ

ಅನುಭೂತವಾಗುವಂಥದೆಂಬುದು ಅವರ ರಾಮನವಮಿ, ರಾಮಪಟ್ಟಾಭಿಷೇಕ ಮುಂತಾದ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಅದೂ ಅಲ್ಲದೆ ಹೆಣ್ಣಿನ ವಿಷಯಕವಾದ ಮಾಸ್ತಿಯವರ 'ಶುಚಿ' ದೃಷ್ಟಿ ಹಾಗೂ ಅವರ ಸೌಂದರ್ಯದರ್ಶನದ ಪರಿಗಳು ಇಲ್ಲಿವೆ.

'ಕನ್ನೈದಿಲೆ' ಕವನದಲ್ಲಿ ಬದುಕಿನ ಸಾರ್ಥಕತೆ ಕುರಿತು ಚಿಂತಿಸಿದ್ದಾರೆ. ಜೋಗದ ಜಲಪಾತದ ಭವ್ಯತೆಗೆ ಕನ್ನೈದಿಲೆಯ ಅನುಪಮ ಚೆಲುವು ಯಾವರೀತಿಯಲ್ಲೂ ಕಡಿಮೆಯಲ್ಲ, ಜೋಗದ ಸಾರ್ಥಕತೆ ಜೋಗಕ್ಕೆ, ಕನ್ನೈದಿಲೆಯ ಸಾರ್ಥಕತೆ ಕನ್ನೈದಿಲೆಗೆ. ಕಾರಣ,

ಹಿರಿದು ಕಿರಿದಿಲ್ಲ ಫಲಿಸಿದ ಬಾಳಿಗೆ
ಇಂದಿಲ್ಲ ಅಂದಿಲ್ಲ ಕುಂದಿಲ್ಲ ದೊರೆಯಿಲ್ಲ,
ದಿನಯುಗದ ಹಿರಿಕಿರಿಯರೆಂಬ ನುಡಿಜಲ್ಲ
ಫಲಿಸೆ ಕಣವೇ ವಿಶ್ವ, ಕ್ಷಣ ಬ್ರಹ್ಮ ಕಲ್ಪ.

'ಮಲಾರ' ಮಾಸ್ತಿಯವರ ಎಂಬತ್ತೆರಡು ಸುನೀತಗಳ ಸಂಗ್ರಹ. ಇಂಗ್ಲಿಷಿನ 'ಸಾನೆಟ್' ಪ್ರಕಾರವನ್ನು ಕನ್ನಡಕ್ಕೆ ತಂದ ಪ್ರಾರಂಭದ ಕವಿಗಳಲ್ಲಿ ಮಾಸ್ತಿಯವರೂ ಒಬ್ಬರು. ಇಷ್ಟೊಂದು ಸಂಖ್ಯೆಯಲ್ಲಿ ಸಾನೆಟ್‌ಗಳನ್ನು ಬರೆದವರು ಅವರೇ. ಇದನ್ನು ಅಷ್ಟಷಟ್ಪದಿ ಎಂದು ಕರೆದವರು ಮಾಸ್ತಿಯವರೇ. ಇಂಗ್ಲಿಷ್ ಸಾಹಿತ್ಯದಲ್ಲಿ ಹೆಸರಾದ 'ಪೆಟ್ರಾರ್ಕ್' ಮಾದರಿಯನ್ನಾಗಲೀ, ಷೇಕ್ಸ್‌ಪಿಯರ್ ಮಾದರಿಯನ್ನಾಗಲೀ ಅನುಸರಿಸದೆ ತಮ್ಮದೇ ಆದ ದಾರಿಯನ್ನು ಹಿಡಿದಿದ್ದಾರೆ. 'ಸಾನೆಟ್'ನ ಮರ್ಮವನ್ನು ಚೆನ್ನಾಗಿ ತಿಳಿದಿದ್ದರೆಂಬುದಕ್ಕೆ ಅವರ ಸಾನೆಟ್‌ಗಳು ಸಾಕ್ಷಿ. ಮಾಸ್ತಿಯವರಲ್ಲಿ ಪೆಟ್ರಾರ್ಕ್‌ನಂತೆ, ಎಂಟು ಪಾದಗಳು ಒಂದು ಗುಂಪಾಗಿ, ಕೊನೆಯ ಆರು ಪಾದಗಳು ಇನ್ನೊಂದು ಗುಂಪಾಗಿ ಒಡೆಯುತ್ತವೆಂದು ಒಂದು ಲೆಕ್ಕ[೨೨]. ಆದರೆ ಬಹುಪಾಲು ಸಾನೆಟ್‌ಗಳಲ್ಲಿ ಹಾಗೆ ವಿಭಕ್ತವಾಗದೆ ಇಡೀ ಕವನ ಒಂದು ಘಟಕವಾಗಿ ಬೆಳೆಯುವುದೇ ಹೆಚ್ಚು, ಕೊನೆಯ ಎರಡು ಸಾಲುಗಳು ಸಾರರೂಪದ ಅಂತ್ಯಪ್ರಾಸದಿಂದ ಕೂಡಿದ ದ್ವಿಪದಿಗಳಾಗಿರುತ್ತವೆ. ಈ ಸಾನೆಟ್‌ಗಳ ವಸ್ತುಗಳೆಂದರೆ, ಕಾವ್ಯ ಸೃಷ್ಟಿಯ ಪ್ರಕ್ರಿಯೆ, ಕವಿಕರ್ಮ ಮೊದಲಾದ ಕಾವ್ಯ ತತ್ವಕ್ಕೆ ಸಂಬಂಧಿಸಿದ, ಮಾಸ್ತಿಯವರ ವಿಚಾರಗಳು, ಮಾನವತೆಯ ಮೇಲ್ಮೆಗೆ ಕಾರಣರಾದ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರತಿಭಾವಂತರ ಗುಣಗಾನ, ಸಮಾಜದ ಅಂಕು ಡೊಂಕು ಕುರಿತವು, ಹೀಗೆ ಹತ್ತು ಹಲವು ವಿಷಯಗಳು. ವಾಲ್ಮೀಕಿ, ಕಾಳಿದಾಸ, ಬೇಂದ್ರೆ ಬಿ.ಎಂ. ಶ್ರೀ, ಕಾರಂತ, ವಿಶ್ವೇಶ್ವರಯ್ಯ ಮೊದಲಾದವರ ಸುಂದರ ನುಡಿಚಿತ್ರಗಳು ಇದರಲ್ಲಿವೆ.

ಮಾಸ್ತಿಯವರದು ಮೂಲತಃ ಮತ್ತು ಮುಖ್ಯವಾಗಿ ಕಥನಾತ್ಮಕ ಪ್ರತಿಭೆ. ಇದು ಅವರ ಯಾವುದೇ ಕವನ ತೆಗೆದುಕೊಂಡರೂ, ಸ್ಪಷ್ಟವಾಗುತ್ತದೆ. ತಮ್ಮ ಎರಡನೇ ಕವನ ಸಂಕಲನ 'ಅರುಣ'ದಲ್ಲಿ ಸ್ಥಳಗಳ ಹೆಸರು ಎಂಬ ಹೆಸರಿನಲ್ಲಿ ಪ್ರಕಟಿಸಿದ, 'ಮದಲಿಂಗನ ಕಣಿವೆ', ಬ್ಲಾಂಕ್ವರ್ಸ್ ಧಾಟಿಯಲ್ಲಿ ಬರೆದ ಮೊದಲ ಕವನ. ಷೇಕ್ಸ್‌ಪಿಯರ್‌ನ ಬ್ಲಾಂಕ್‌ವರ್ಸ್ ಮಾದರಿಯ ರಚನೆಯನ್ನು ಕನ್ನಡಕ್ಕೆ ತರಬೇಕೆಂದು ಮಾಡಿದ ಪ್ರಯತ್ನದ ಫಲಸ್ವರೂಪವೇ ಇದು. ರಗಳೆಯ ಆದಿ ಅಂತ್ಯ ಪ್ರಾಸಂಗಗಳನ್ನು ನೀಗಿಕೊಂಡು, ನಿರರ್ಗಳವಾಗಿ ಕತೆ ಮುಂದೆ ಸಾಗಲು ಇದಕ್ಕಿಂತ ಸೊಗಸಾದ ಬಂಧ ಇನ್ನೊಂದಿಲ್ಲ. ಇದನ್ನು ಕಂಡುಕೊಂಡದ್ದು ಮಾಸ್ತಿಯವರ ಪ್ರತಿಭೆ. ಮುಂದೆ ವೆಂಕಣ್ಣಯ್ಯನವರು ಇದಕ್ಕೆ ಸರಳ ರಗಳೆ ಎಂದು ನಾಮಕರಣ ಮಾಡಿದರು. ತಮ್ಮ ಕಥನ ಕವನಗಳನ್ನು, ರಾಮ ಪಟ್ಟಾಭಿಷೇಕ ಕಾವ್ಯ ಹಾಗೂ ನಾಟಕಗಳನ್ನು ಇದೇ ಬಂಧದಲ್ಲಿ ರಚಿಸಿದರು. ಕುವೆಂಪು ಕೂಡ ಇದನ್ನೇ ತಮ್ಮ ಅಗತ್ಯಗಳಿಗೆ ತಕ್ಕಂತೆ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಕಾವ್ಯ ನಾಟಕಗಳಲ್ಲಿ ಬಳಸಿದರು.

ಐದು ಭಾಗಗಳಲ್ಲಿ ಪ್ರಕಟವಾದ ನವರಾತ್ರಿ, ಅದಕ್ಕೆ ಮುಂಚೆ ಬಂದ ಗೌಡರಮಲ್ಲಿ, ರಾಮನವಮಿ, ಮೂಕನ ಮಕ್ಕಳು, ಇವೆಲ್ಲ ಮಾಸ್ತಿಯವರ ಕಥನ ಕವನಗಳು.

'ಗೌಡರಮಲ್ಲಿ' ಮಾಸ್ತಿಯವರ ಒಂದು ಸಾರ್ಥಕವಾದ ಕಥನ ಕವನ. ಹೆಂಡತಿಯನ್ನು ಕಳೆದುಕೊಂಡು ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡಿದ್ದ ಗೌಡನೊಬ್ಬ ತಳವಾರರ ಹುಡುಗಿ ಮಲ್ಲಿಯನ್ನು ತನ್ನ ಬಂಧುಗಳ ಮತ್ತು ಊರವರ ಇಚ್ಛೆಗೆ ವಿರುದ್ಧವಾಗಿ ಮೆಚ್ಚಿ ಅವಳೊಂದಿಗೆ ಐವತ್ತು ವರ್ಷ ಸಫಲವಾಗಿ ಸಂಸಾರ ನಡೆಸಿದ ಕತೆಯನ್ನು ತುಂಬ ಸೊಗಸಾಗಿ ಹೇಳಿದ್ದಾರೆ. ಮಲ್ಲಿ ತನಗಾದ ಅಪಮಾನವನ್ನೆಲ್ಲ ನುಂಗಿಕೊಂಡು, ತನ್ನ ನಡೆನುಡಿಯಿಂದ, ಪ್ರೇಮಲ ಸ್ವಭಾವದಿಂದ ಗಂಡನಿಗೆ, ಬಂಧು ಬಾಂಧವರೆಲ್ಲರಿಗೆ ಮತ್ತು ಊರವರಿಗೆ ಮೆಚ್ಚಾಗುವ, ಸ್ವಾರ್ಥತ್ಯಜಿಸಿ, ಎಲ್ಲರ ಹಿತದಲ್ಲಿ ತನ್ನ ಹಿತ ಕಂಡುಕೊಳ್ಳುವ ಮಟ್ಟಿಗೆ ಅವಳ ವ್ಯಕ್ತಿತ್ವ ವಿಕಾಸವಾದ ರೀತಿಯನ್ನು ವರ್ಣಿಸಿದ್ದಾರೆ. ಸಾಂಪ್ರದಾಯಿಕ ಸಮಾಜದ ಕಟ್ಟುಪಾಡಿನ ಆಚೆಗಿನ ವೈವಾಹಿಕ ಸಂಬಂಧವನ್ನು ಗೌರವದಿಂದ ಕಂಡಿರುವ, ಸಾಮಾನ್ಯ ಹೆಣ್ಣೊಂದರ ವ್ಯಕ್ತಿತ್ವ ವಿಕಾಸವನ್ನು ಹೇಳುವ ಇದು ನಿಜಕ್ಕೂ ಪ್ರಗತಿಪರ ಮೌಲ್ಯವನ್ನು ಹೊಂದಿದೆ. ಆದರೆ ಅದೇ ಸಮಯಕ್ಕೆ ಕವನದ ಈ ಸಾಲುಗಳು ಮತ್ತೆ ಅದೇ ಪುರುಷ ಪ್ರತಿಷ್ಠೆಯನ್ನು ಎತ್ತಿಹಿಡಿಯುವ, ಹೆಣ್ಣಿನ ವ್ಯಕ್ತಿತ್ವ ಕಡೆಗಣಿಸುಂಥವಾಗಿವೆ.

ಗೌಡನನು ಬಿಟ್ಟು ಬರಿ ಮಲ್ಲಿ
ಯಾವ ಕೆಲಸಕೆ ಬಹಳು? ಎಸೆಯಿರತ್ತ
ಗೌಡ ತೊಟ್ಟರೆ ಜೋಡು, ಕಳೆಯೆ ಬರಿ ಚಕ್ಕಳ

ಇವು ಇಲ್ಲದಿದ್ದರೆ ಚೆನ್ನಾಗಿತ್ತು. ಪತಿಯ ಮೇಲಿನ ನಿಷ್ಠೆಯಿಂದ ಮಲ್ಲಿಯೇ ಹೇಳಿದವಾದರೂ ಇವು ಸರಿಯಿಲ್ಲ. 'ರಾಮನವಮಿ' ಕಥನ ಕವನ ಮಾಸ್ತಿಯವರ ತುಂಬ ಸಾರ್ಥಕವಾದ ಕಥನ ಕವನ. ಮಾಸ್ತಿಯವರದು ತೆಕ್ಕೆಗೊಗ್ಗದ ಅಧ್ಯಾತ್ಮವಲ್ಲ, ಅದು ಹುಸಿಯಾದ ಕೇವಲ ಶಾಬ್ದಿಕ ಅಧ್ಯಾತ್ಮವೂ ಅಲ್ಲ. ಇಹದ ನೆಲೆಯಿಂದಲೇ ಅರಳುವಂಥದು.

ಬೋವಿನಹಳ್ಳಿಯ ಜವರಗೌಡ ಬಸಿರಿ ಮರದಡಿಯಲ್ಲಿ ಕುಳಿತು, ವಿಶ್ರಮಿಸಿಕೊಳ್ಳುತ್ತಿರುವಾಗ ಆ ಮರಕ್ಕೆ ಸಂಬಂಧಿಸಿದಂತೆ ಇರುವ ಅಲ್ಲಿಯ ಕತೆ ಹೇಳುತ್ತಾನೆ. ರಾಮನವಮಿಯ ದಿನ ರಾಮ ಸೀತೆ ಲಕ್ಷ್ಮಣರು ಅಲ್ಲಿ ಊಟ ಮಾಡಿ ವಿಶ್ರಮಿಸಿಕೊಂಡ, ಸೀತೆ ಆ ಮರ ಎಂದೂ ಬಾಡದಿರಲಿ ಎಂದೂ ಅಲ್ಲಿಯ ಜಲ ಎಂದೂ ಬತ್ತದಿರಲಿ ಎಂದೂ ಹರಸಿದ, ಈಗಲೂ ರಾಮನವಮಿಯಂದು ಅಲ್ಲಿ ಸೀತಾ ರಾಮಲಕ್ಷ್ಮಣರು ಸುಳಿದಾಡುತ್ತಾರೆಂಬ ಜನರ ನಂಬಿಕೆಯ ಕತೆ ಹೇಳುತ್ತಾನೆ. ತನ್ನ ಪೂರ್ವಿಕರು ಕಂಡಿದ್ದರು. ತಾನೂ ರಾಮನವಮಿಯಂದು ಅವರ ದರ್ಶನಕ್ಕಾಗಿ ಕಾದಿದ್ದೇನೆ ಎಂದು ಹೇಳುತ್ತಾನೆ. ಸೀತಾರಾಮರ ಮಾತುಕತೆಯೆಲ್ಲವೂ ಪುನರಭಿನೀತವಾಗುತ್ತದೆ. ಕತೆ ಕೇಳುತ್ತಿದ್ದ ನಿರೂಪಕ ಅದೇ ಸಮಯಕ್ಕೆ ದೂರದ ಮರದ ಕೆಳಗೆ ಹರೆಯದ ಒಬ್ಬ ಯುವಕ ಯುವತಿಯರನ್ನು ಕಂಡು ಸೋಜಿಗದಿಂದ ಸೀತಾರಾಮರೆ ಬಂದರೋ ಎಂದು ತಬ್ಬಿಬ್ಬಾಗುತ್ತಾನೆ. ಗೌಡ, ಅವರು ತನ್ನ ಮಗ ಸೊಸೆ ಎನ್ನುತ್ತಾನೆ. ನಿರೂಪಕನಿಗೆ ಆ ಕ್ಷಣಕ್ಕೆ 'ಮನೆಮಗ ರಾಮ, ಎಲ್ಲ ಹೆಣ್ಣು ಸೀತೆ' ಎನಿಸುತ್ತದೆ. ದಶರಥ ರಾಮ ಎದುರಿದ್ದಾಗ ಅವನಲ್ಲಿ ಮಗನನ್ನೇ ಕಂಡ, ದೇವರನ್ನು ಕಾಣಲಿಲ್ಲ, ಮಾಯೆಗೆ ನಾವಿದಿರ ಎನ್ನುತ್ತಾರೆ ಮಾಸ್ತಿ, ನಿರೂಪಕನಿಗೆ ಅನಿಸಿದ್ದು.

ದಶರಥ ಸೀತಾರಾಮರು ಇವರು
ನಾನೆ ಅದೆ ಜನಕ

ರಾಮ ಸೀತೆಯರೊಂದಿಗೆ ಗೌಡನಮಗ ಸೊಸೆಯನ್ನು ಸಮೀಕರಿಸುವ, ಪುರಾಣವನ್ನು ವರ್ತಮಾನದ ವಾಸ್ತವಕ್ಕಿಳಿಸುವ ಈ ಕಥನ ಕವನದಲ್ಲಿ ಸುಂದರ, ಆಪ್ತ ಅವರಣವಿದೆ. ಅಲೌಕಿಕ ವ್ಯಕ್ತಿಗಳೊಂದಿಗೆ ಈ ಲೋಕದ ವ್ಯಕ್ತಿತ್ವಗಳನ್ನು ಗುರುತಿಸುವ ಈ ಯತ್ನ ಸಾರ್ಥಕವಾಗಿದೆ ಅಷ್ಟೇ ಅಲ್ಲ; ಲೋಕ ಸತ್ಯಕ್ಕೆ, ಜಗತ್ತು ಸತ್ಯವೆಂಬ ಮಾತಿಗೆ ಮಾಸ್ತಿಕೊಡುವ ಬೆಲೆ ಇಲ್ಲಿ ಕವನ ರೂಪ ಪಡೆದಿದೆ.

ಇಹದ ಬದುಕನ್ನು ಪ್ರೀತಿಸುವ, ಹಾಗೆ ಪ್ರೀತಿಸುತ್ತಲೇ ದೈವದಲ್ಲಿ ನಂಬಿಕೆ ಇಡುವ, ಆ ದೈವವೆಂಬುದು ಈ ಜಗತ್ತಿನಿಂದ ಬೇರೆ ಅಲ್ಲದೆ, ಮಾನವ ವ್ಯಕ್ತಿತ್ವದ ಮಹಾಶೃಂಗವೇ ಆ ದೈವವೆಂಬ ಮಾಸ್ತಿಯವರ ಈ ತಾತ್ವಿಕ ನಿಲುವು ಅವರು ಗಾಢವಾಗಿ ನಂಬುವ ವಿಶಿಷ್ಟಾದ್ವೈತ ಪರಂಪರೆಯದು.

ನವರಾತ್ರಿ

ನವರಾತ್ರಿ ಐದು ಭಾಗಗಳಲ್ಲಿ ಪ್ರಕಟವಾದ ಸೊಗಸಾದ ಹತ್ತೊಂಬತ್ತು ಕಥನ ಕವನಗಳ ಸಂಗ್ರಹ. ಇಂಗ್ಲಿಷಿನ ಜೆಫ್ರಿ ಛಾಸರನ ಕ್ಯಾಂಟರ್ ಬರಿ ಟೇಲ್ಸ್‌ನ ಪ್ರಭಾವವನ್ನು ಅರಗಿಸಿಕೊಂಡು, ಕನ್ನಡ ನೆಲದಲ್ಲಿ ಕನ್ನಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮೈ ತಾಳಿದ ಕೃತಿ. ಕ್ಯಾಂಟರ್‌ಬರಿ ಟೇಲ್ಸ್‌ನಂತೆ ಇದೂ ಕತೆಗಳ ಗುಚ್ಛ. ಅಲ್ಲಿ ಇರುವಂತೆ ಇಲ್ಲೂ ಪ್ರಾರಂಭದಲ್ಲಿ ಪೀಠಿಕೆ ಇದೆ. ಅಲ್ಲಿಯ ಹಾಗೆ ಇಲ್ಲೂ ಬೇರೆ ಬೇರೆ ವ್ಯಕ್ತಿಗಳು ಕತೆ ಹೇಳುತ್ತಾರೆ. ಕೊನೆಯಲ್ಲಿ ಅಲ್ಲಿರುವಂತೆ ಇಲ್ಲಿಯೂ ಆ ಕತೆಗಳ ಮೇಲೆ ವ್ಯಾಖ್ಯಾನವಿರುತ್ತದೆ. ಅಲ್ಲಿಯಂತೆ ಇಲ್ಲಿಯೂ ಕತೆ ಹೇಳುವ ವ್ಯಕ್ತಿಗಳ ಪರಿಚಯವಿದೆ. ಇದಿಷ್ಟು ಛಾಸರನಿಂದ ತೆಗೆದುಕೊಂಡಿರುವುದು. ಇಲ್ಲಿಬರುವ ವ್ಯಕ್ತಿಗಳೆಲ್ಲರೂ ಮಧ್ಯಮವರ್ಗಕ್ಕೆ ಸೇರಿದ ಸಾಹಿತಿ, ವಿದ್ವಾಂಸರು. ಇವರೆಲ್ಲರೂ ಮಾಸ್ತಿಯವರ ಪರಿಚಿತರು, ಸ್ನೇಹಿತರು.

ಇಲ್ಲಿಯ ಕತೆಗಳು ಅತ್ಯಂತ ವೈವಿಧ್ಯ ಪೂರ್ಣವಾದವು. ಮಾಸ್ತಿಯವರ ಕಥನ ಕೌಶಲವಂತೂ ಇಲ್ಲಿ ತನ್ನ ಶೃಂಗವನ್ನು ಮುಟ್ಟಿದೆ. ಇವು ಕನ್ನಡಕ್ಕಂತೂ ತೀರ ಹೊಸ ರೀತಿಯ ಕಥನ ಕವನಗಳೆನಿಸಿದುವು.

ನವರಾತ್ರಿಯ ಕಥನ ಕವನಗಳಲ್ಲಿ ಹೆಚ್ಚಿನವು ಸತ್ವಪೂರ್ಣವೂ ಸ್ವಾರಸ್ಯಕರವೂ ಆದ ಕತೆಯನ್ನು ಒಳಗೊಂಡಿವೆ. ಅಕ್ಲಿಷ್ಟವೂ ನಿರಾಡಂಬರವೂ ಆದ, ಆಡುಮಾತಿನ ಶೈಲಿಗೆ ಸಮೀಪವಾದ ಭಾಷಾಶೈಲಿಯಿಂದ ಕೂಡಿದ್ದು ಪ್ರಸನ್ನವಾಗಿವೆ. ವೈವಿಧ್ಯಪೂರ್ಣವಾದ ಕಥಾವಸ್ತುಗಳ ಮೂಲಕ ಇಲ್ಲಿ ಅನಾವರಣಗೊಳ್ಳುತ್ತಾ ಹೋಗುವ ಜೀವನ ದರ್ಶನ ನಮ್ಮ ಆಸಕ್ತಿಯನ್ನು ಸೆಳೆಯುತ್ತದೆ.

ಮಾರನಾಯಕನ ಸಂಹಾರದೊಂದಿಗೆ ಮೈಸೂರು ರಾಜವಂಶ ನೆಲೆಗೊಂಡುದನ್ನು ವಸ್ತುವಾಗುಳ್ಳ ಐತಿಹಾಸಿಕ ಹಿನ್ನೆಲೆಯ 'ನವರಾತ್ರಿ', ಅದ್ಭುತ ರಮ್ಯ ಜಗತ್ತಿಗೆ ನಮ್ಮನ್ನು ಕೊಂಡೊಯ್ದು ಬೆರಗಿನಲ್ಲಿ ಮುಳುಗಿಸಿಬಿಡುವಂಥ ಮಾಂತ್ರಿಕತೆ ಉಳ್ಳ 'ಸೋಜಿಗದ ಹೊಳಲು', ಮತಧರ್ಮದ ಹೆಸರಿನಲ್ಲಿ ನಡೆಯುವ ಮೋಸವನ್ನು ಬಯಲುಗೊಳಿಸುವ, ಇಂಗರ್ ಸಾಲ್‌ನ ಕಥೆಯ ಆಧಾರದ ಮೇಲೆ ರಚಿತವಾಗಿರುವ 'ಸಮಾಧಿಯ ಸತ್ವ', ದೈವದ ಬಗೆಗಿನ ನಂಬಿಕೆಯನ್ನು ಅನ್ಯಾದೃಶವಾಗಿ, ಅತ್ಯಂತ ಕಾವ್ಯಾತ್ಮಕವಾಗಿ ಸಾರುವ 'ನಾಮ ಮಹಿಮೆ', –

ಇವೇ ಮೊದಲಾದ ಕಥನ ಕವನಗಳಿಂದ ಈ ಸಂಪುಟಗಳು ಎಲ್ಲರ ಮೆಚ್ಚುಗೆಯನ್ನು ಗಳಿಸಿವೆ.

ಮುಖ್ಯವಾಗಿ ಕಥನ ಕವನಗಳ ಸುತ್ತ ಸೃಷ್ಟಿಯಾಗಿರುವ ವಾತಾವರಣ, ಅಪೂರ್ವ ಕಥನ ಕೌಶಲ ಮತ್ತು ಬದುಕನ್ನು ಕುರಿತಾದ ಒಳನೋಟ ಇವುಗಳಿಂದಾಗಿ ಇವು ಕನ್ನಡ ಕಥನ ಕವನಗಳಲ್ಲಿ ಹಿರಿದಾದ ಸ್ಥಾನ ಪಡೆದಿವೆ.

ಡಾ. ಎಚ್. ಎಸ್. ವೆಂಕಟೇಶಮೂರ್ತಿವರು ಹೇಳುವಂತೆ. - "ಬಹಳಷ್ಟು ಕವಿತೆಗಳು ಗಟ್ಟಿಮುಟ್ಟಾದ ಕತೆ ಮತ್ತು ಒಟ್ಟಾರೆ ಬದುಕಿನ ಬಗೆಗಿನ ಆಳವಾದ ಅರಿವಿನಿಂದ ತಮ್ಮ ಮಹತ್ವವನ್ನು ಸಾಧಿಸುತ್ತವೆ.[೨೮]

ಶ್ರೀರಾಮ ಪಟ್ಟಾಭಿಷೇಕ

ಮಾಸ್ತಿಯವರ ಮಹತ್ವಾಕಾಂಕ್ಷೆಯ ಕೃತಿ. ಮಾಸ್ತಿಯವರದು ಮುಖ್ಯವಾಗಿ ವಾಸ್ತವವಾದಿ ದೃಷ್ಟಿ. ಅವರ ಶ್ರೀರಾಮ ಪಟ್ಟಾಭಿಷೇಕ ಕೂಡ ಈ ವಾಸ್ತವಾದಿ ದೃಷ್ಟಿಕೋನಕ್ಕನುಸಾರವಾಗಿ ತನ್ನ ಆಕೃತಿಯಲ್ಲಿ ಹಲವಾರು ಮಾರ್ಪಾಟುಗಳನ್ನು ಕಂಡಿದೆ. ಈ ಬದಲಾವಣೆಯ ಮೂಲ ಉದ್ದೇಶ, ವಾಲ್ಮೀಕಿಯ ಮೂಲ ರಾಮಾಯಣದ ಕತೆಗೆ ಬೇರೆ ಬೇರೆ ಕಾಲಗಳಲ್ಲಿ ಕವಿಗಳು ಅಂಟಿಸಿರಬಹುದಾದ, ಜನರು ಸೇರಿಸಿರಬಹುದಾದ, ಪ್ರಮಾದವೆನ್ನಬಹುದಾದ, ಅಸಂಭಾವ್ಯವೆನ್ನಬಹುದಾದ, ಅತಿಮಾನುಷ ಎನ್ನಬಹುದಾದ ಪ್ರಸಂಗಗಳನ್ನು ತೆಗೆದುಹಾಕಿ ವಾಲ್ಮೀಕಿಯ ರಾಮ ಸೀತೆಯರನ್ನು ಲೋಕದ ಮುಂದಿಟ್ಟು ಕವಿಯ ಆಶಯ ಏನಿದ್ದಿರಬಹುದೆಂಬುದನ್ನು ತಿಳಿಯಲೆತ್ನಿಸುವುದು. ಮಾಸ್ತಿ ತಮ್ಮ ಕಾವ್ಯದಲ್ಲಿ ಮಾಡಿಕೊಂಡ ಬದಲಾವಣೆಗಳೇನೆಂಬುದನ್ನು ವಿವರಿಸಿದ್ದಾರೆ, ಸಮರ್ಥಿಸಿಯೂ ಇದ್ದಾರೆ.

ಅವರಿಗೆ ರಾಮಾಯಣವೆನ್ನುವುದು ಕೇವಲ ಕವಿಯೊಬ್ಬನ ಕಲಾಕೃತಿ ಮಾತ್ರವಲ್ಲ. ನಿಜವಾಗಿ ಒಂದು ಕಾಲಕ್ಕೆ ನಡೆದ ರಾಷ್ಟ್ರದ ಕತೆ. ಇಲ್ಲಿ ಬರುವ ರಾಮ ವಿಷ್ಣುವಿನ ಅವತಾರಿಯಲ್ಲ, ಅವನು ಮಾನವತ್ವದ ಉನ್ನತ ಶಿಖರ. ರಾಮಾಯಣದ ಆರ್ಯ, ದಾನವ, ರಾಕ್ಷಸ, ಇವು ಮೇಲು ಕೀಳು ಸೂಚಿಸುವ ಜನವರ್ಗಗಳ ಹೆಸರಲ್ಲ, ಆ ಕಾಲದಲ್ಲಿ ಆರ್ಯಾವರ್ತದಲ್ಲಿ ಬಾಳಿ ಬದುಕಿದ ಮೂರು ವಿಭಿನ್ನ ಸಂಸ್ಕೃತಿಗಳ ಹೆಸರು. ಹನುಮಂತ ಮತ್ತು ಅವನ ಕುಲದವರು ನರರೇ ಹೊರತು ವಾನರರಲ್ಲ. ಹನುಮಂತ ಸಮುದ್ರಲಂಘನ ಮಾಡುವುದಿಲ್ಲ, ಈಜಿಕೊಂಡು ಲಂಕೆ ತಲುಪುತ್ತಾನೆ, ಹನುಮಂತ ಲಂಕೆಗೆ ಬೆಂಕಿ ಹಚ್ಚುವುದಿಲ್ಲ. ರಾಮ ಅಯೋಧ್ಯೆಗೆ ಹಿಂತಿರುಗುವುದು ಪುಷ್ಪಕ ವಿಮಾನದ ಮೂಲಕವಲ್ಲ, ನಡೆದು ತಲುಪುತ್ತಾನೆ. ಹನುಮಂತ ಸಂಜೀವಿನಿ ಪರ್ವತ ಹೊತ್ತು ತರುವುದಿಲ್ಲ, ಬೊಡ್ಡೆಯನ್ನು ಮಾತ್ರ ತರುತ್ತಾನೆ. ರಾಮ ಕಾಡಿನಲ್ಲಿದ್ದಾಗ ಅವನನ್ನು ಕೊಲ್ಲಲು

ಖರ ಕಳಿಸಿದ್ದು ೧೪ ಸಾವಿರ ರಾಕ್ಷಸರನ್ನಲ್ಲ; ೧೪ ಜನರನ್ನು. ಜಟಾಯು ಪಕ್ಷಿಯಲ್ಲ, ಮನುಷ್ಯ. ರಾಮ ನೆಲದ ಮೇಲೆ ನಿಂತೇ ಯುದ್ಧ ಮಾಡಿದ, ಮಾತಲಿ ತಂದ ರಥವನ್ನು ಹತ್ತಿ ಅಲ್ಲ.

ಈ ಎಲ್ಲ ಬದಲಾವಣೆಗಳಿಗೆ ಮಾಸ್ತಿಯವರು ನೀಡುವ ಕಾರಣ "ಅದ್ಭುತಗಳನ್ನು ನಂಬುವ ಹಸುಳೆ ಮನಸ್ಸಿನ ಆದಿಮ ಜನಾಂಗಗಳ ಕಾವ್ಯದಲ್ಲಿ ಇಂಥ ಕತೆಗಳು ಸಹಜವಾಗಿ ಬರುತ್ತವೆ. ಆದರೆ ಹೊಸ ಕಾಲದ ಒಂದು ಕೃತಿಯಲ್ಲಿ ಇವಕ್ಕೆ ಎಡೆ ಇಲ್ಲ." ಹೀಗಾಗಿ ಇದು ಪುರಾಣದ ಪರಿವೇಷವನ್ನು ಕಳಚಿ ಹಾಕಿದ ರಾಮಾಯಣದ ಆಕೃತಿ.

ಆದರೆ ಇದರಿಂದ ಕಾವ್ಯದ ಭವ್ಯತೆಗೆ ಅನುಕೂಲಕ್ಕಿಂತ ಅನಾನುಕೂಲವೇ ಆಗಿದೆ. ಲಂಕಾದಹನ, ಸೇತುಬಂಧನ, ಸಂಜೀವಿನಿ ಪರ್ವತ ತರವುದು, ಸೀತೆಯ ಅಗ್ನಿಪ್ರವೇಶ ಇವೆಲ್ಲ ಅದ್ಭುತರಮ್ಯ ಕಲ್ಪನೆಗಳು. ಆದರೆ ಮಾಸ್ತಿಯವರು ಮಾಡಿಕೊಂಡಿರುವ ಬದಲಾವಣೆಗಳು ಅದ್ಭುತದ ಅನುಭವ ತಂದುಕೊಡಲಾರವು. ಆದ್ದರಿಂದ. "ಪೂರ್ವೋಕ್ತ ಪ್ರಸಂಗಗಳನ್ನು ಮಾಸ್ತಿಯವರು ಶ್ರೀರಾಮ ಪಟ್ಟಾಭಿಷೇಕದಲ್ಲಿ ನಿರ್ವಹಿಸಿರುವ ರೀತಿಯನ್ನು ನೆನೆದರೆ, ಪುರಾಣಗಳನ್ನು ಸಮಗ್ರವಾಗಿ ಮತ್ತು ಅಖಂಡವಾಗಿ ವಾಸ್ತವೀಕರಿಸುವ ಪ್ರಯತ್ನದ ನಿಷ್ಫಲತೆ ಮನದಟ್ಟಾಗುತ್ತದೆ."[೨೯] ಎಂಬ ವಿಮರ್ಶಕರ ಮಾತು ಅತ್ಯಂತ ಸತ್ಯ

ಕಾವ್ಯದ ನಿರೂಪಣಾ ತಂತ್ರವಾದ ಹಿನ್ನೋಟ ತಂತ್ರ ಕೂಡ ಕಾವ್ಯದ ಔಜ್ವಲ್ಯಕ್ಕೆ ಏನನ್ನೂ ಸೇರಿಸಲು ಸಮರ್ಥವಾಗಿಲ್ಲ. ಎಲ್ಲವನ್ನೂ ನಿರುದ್ವಿಗ್ನವಾಗಿ ಪ್ರಶಾಂತವಾಗಿ ನಿರೂಪಿಸುವ ಮಾಸ್ತಿಯವರ ಜಾಯಮಾನಕ್ಕಷ್ಟೇ ಅನುಕೂಲವಾಗಿದೆ.

ಕತೆ ಪ್ರಾರಂಭವಾಗುವುದೇ ರಾಮನ ವನವಾಸದ ಕೊನೆಯ ದಿನದಿಂದ. ಬೇರೆ ಬೇರೆ ಪಾತ್ರಗಳ ಬಾಯಿಂದ ಕತೆಯ ವಿವರಗಳು ನಿರೂಪಿತವಾಗುತ್ತ ಹೋಗುತ್ತವೆ. ಯುದ್ಧದಂಥ ಪ್ರಸಂಗ ಕೂಡ ಅಂಗದನ ನೆನಪಿನಲ್ಲಿ ವರದಿಯಾಗುತ್ತದೆ.

ಹೀಗಾಗಿ ಈ ತಂತ್ರದಿಂದ ಮಹತ್ವದ್ದೇನೂ ಸಾಧಿತವಾಗದೆ ಪ್ರತ್ಯಕ್ಷವಾಗಿ ನಡೆಯಬಹುದಾಗಿದ್ದ ಘಟನೆಗಳಿಗೆ ತಣ್ಣನೆಯ ವರದಿಯ ಸ್ವರೂಪ ಬಂದಿದೆ. ಏಕತಾನತೆಯೂ ಬಂದಿದೆ. ಭಾಷಾ ಶೈಲಿಯಂತೂ ಎಂದಿನಂತೆ ಸರಳ, ನಿರಾಡಂಬರ, ನಿರುದ್ವಿಗ್ನ, ಪಾರದರ್ಶಕ.

ಆದರೆ ಮಾಸ್ತಿಯವರ ಕಾವ್ಯ ತಂತ್ರದಿಂದ ಆಗಿರುವ ಒಂದು ಅನುಕೂಲವೆಂದರೆ ಶ್ರೀರಾಮನನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಲು ಸಾಧ್ಯವಾಗಿರುವುದು. ಕೆಲವು ಪಾತ್ರಗಳನ್ನು ಬೇರೆ ದೃಷ್ಟಿಯಿಂದ ನೋಡಿದ್ದಾರೆ. ರಾಮನ ಮಹಾನತೆಗೆ ಎಲ್ಲಿಯೂ ಅಡ್ಡಿಯಾಗಿಲ್ಲ. ಅವನೊಬ್ಬ ಪುರುಷಶ್ರೇಷ್ಠನೆಂಬಂತೆ

ಚಿತ್ರಿತವಾಗಿದ್ದಾನೆ. ವಾಲಿ ವಧೆ ಪ್ರಸಂಗ, ಸೀತೆಯ ಅಗ್ನಿಪ್ರವೇಶದ ಪ್ರಸಂಗ ಇವುಗಳನ್ನು ಕುವೆಂಪು ನಿರ್ವಹಿಸಿದ ರೀತಿಗೂ ಮಾಸ್ತಿ ನಿರ್ವಹಿಸಿದ ರೀತಿಗೂ ಹೋಲಿಸಿದಾಗ ಶ್ರೀರಾಮ ಪಟ್ಟಾಭಿಷೇಕದ ಪೇಲವತೆ ಎದ್ದು ಕಾಣುತ್ತದೆ. ಬಿಡಿ ಪ್ರಸಂಗಗಳನ್ನು ಬಿಟ್ಟು ಒಟ್ಟಾರೆಯಾಗಿ ನೋಡಿದಾಗ ಶ್ರೀರಾಮ ಪಟ್ಟಾಭಿಷೇಕ, ಮಹಾಕಾವ್ಯ ಎನ್ನಲಾಗದಿದ್ದರೂ. "ಮಹತ್ವದ ಕೃತಿ ಎನ್ನುವುದರಲ್ಲಿ ಸಂಶಯವಿಲ್ಲ,"[೨೦] ಒಂದು ಯುಗದ ಸಂಸ್ಕೃತಿಯ ಕಲ್ಪನೆ ಇಲ್ಲಿ ಹರಳುಗಟ್ಟಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈಗ ಮಾಸ್ತಿ ಕಾವ್ಯ ಕುರಿತು ಒಟ್ಟಾರೆಯಾಗಿ ಕೆಲವು ಮಾತನ್ನು ಹೇಳಬಹುದು.

ಮಾಸ್ತಿಯವರದು ಮುಖ್ಯವಾಗಿ ವಾಸ್ತವವಾದಿ ದೃಷ್ಟಿಕೋನ. ವಾಸ್ತವವಾದಿ ಲೇಖಕ ಯಾವಾಗಲೂ ವಸ್ತು ಸಂಗತಿಗಳನ್ನು ಸ್ಪಷ್ಟವಾಗಿ ನಿರೂಪಿಸುವ ಕಡೆಗೇ ದೃಷ್ಟಿ ಇಟ್ಟಿರುತ್ತಾನೆ. ಅವನ ಪ್ರಧಾನ ಅಭಿವ್ಯಕ್ತಿಯ ಮಾಧ್ಯಮ ಸಾಮಾನ್ಯವಾಗಿ ಗದ್ಯವೇ ಆಗಿರುತ್ತದೆ. ಮಾಸ್ತಿಯವರ ಪ್ರಕೃತಿಯೇ ಗದ್ಯದ್ದು. ಗದ್ಯದ ರೀತಿ ಏನಿದ್ದರೂ ಕಾವ್ಯದ ಹಾಗೆ ವಾಚ್ಯಾರ್ಥವನ್ನು ಧ್ವನ್ಯರ್ಥಕ್ಕೆ ರೂಪಾಂತರಗೊಳಿಸುವ ಅಸಾಧಾರಣ ಕ್ರಿಯೆಯ ಗೊಡವೆಗೆ ಹೋಗದೆ ಸಾತತ್ಯದ ಕ್ರಮದಲ್ಲಿ ಅರ್ಥ ಕಟ್ಟಿಕೊಡುವುದು.[೨೧] ಆದ್ದರಿಂದಲೇ ಮಾಸ್ತಿ ಕಾವ್ಯ, ಪ್ರತಿಮೆ ರೂಪಕಗಳ ಮೂಲಕ ಧ್ವನಿರಮ್ಯತೆ ಪಡೆದುಕೊಂಡು ಓದುಗರಿಗೆ ಜುಮ್ಮುಗಟ್ಟಿಸುವಂಥ ಅನುಭವ ನೀಡುವುದಿಲ್ಲ, ಕಲ್ಪಕತೆಯ ಬೆಡಗಿಲ್ಲ, ಗದ್ಯದ ಕಡೆಗೆ ಒಲಿದ ಪದ್ಯ.

ಮಾಸ್ತಿಯವರ ಕಾವ್ಯದ ಸ್ವರೂಪ ಮತ್ತು ಗುರಿ ಕುರಿತಂತೆ ಅಡಿಗರು ಹೇಳುವ ಈ ಮಾತುಗಳು ಅವರ ಕಾವ್ಯದ ಸರಿಯಾದ ಮೌಲ್ಯಮಾಪನವೂ ಹೌದು- "ಮಾಸ್ತಿಯವರ ಕವಿತೆ ತಣಿಸುವ ಕವಿತೆ. ಇದು ಬಹಳ ಆಳಕ್ಕೆ ಇಳಿದು ಮನಸ್ಸಿನ ಮೂಲವನ್ನು ಕೆದಕಿ ಬೆದಕಿ ನೋಡುವುದಿಲ್ಲ.... ಕನಸುಗಳನ್ನು ರೆಕ್ಕೆ ಬಿಚ್ಚಿ ನಮಗೆ ದೂರದ ಅಂತರಾಳಗಳ ಯಾತ್ರೆ ಮಾಡಿಸುವುದಿಲ್ಲ... ಬದುಕಿನಲ್ಲಿರುವ ಚೆಲುವನ್ನೂ ನಲಿವನ್ನೂ ಬೆಳಕನ್ನೂ ತೋರಿಸುತ್ತದೆ. ಆದಕಾರಣವೇ ಈ ಕವಿತೆ ನಮಗೆ ಸಂಪೂರ್ಣ ತೃಪ್ತಿಯನ್ನು ಕೊಡುವುದಿಲ್ಲ, ಆದರೆ ಎಷ್ಟನ್ನು ಕೊಡಲು ಉದ್ದೇಶಿಸುತ್ತದೋ ಅಷ್ಟೂ ಮಹತ್ವದ್ದು, ಮರೆಯಬಾರದ್ದು. ಆದ ಕಾರಣ ಮಾಸ್ತಿಯವರ ಕಾವ್ಯಭ್ಯಾಸ ಮನಸ್ಸಿಗೆ ತಂಪನ್ನು ನೀಡುವುದಲ್ಲದೆ ನಮ್ಮ ಅರಕೆಗಳನ್ನಷ್ಟೇ ತುಂಬಲೂ ಸಮರ್ಥವಾಗಿದೆ."[೨೨]

○

ಅಧ್ಯಾಯ ೬

ನಾಟಕಗಳು

ಮಾಸ್ತಿಯವರ ಬರವಣಿಗೆಯ ವಿಶೇಷತೆ ಎಂದರೆ ಅದರ ಸಮೃದ್ಧಿ. ನಾಟಕ ಕ್ಷೇತ್ರದಲ್ಲಿ ಅವರ ಸಾಧನೆಯೇನು ಕಡಿಮೆಯಲ್ಲ. ಸ್ವತಂತ್ರ, ಅನುವಾದ ಎಲ್ಲ ಸೇರಿ ಒಟ್ಟು ೨೪ ನಾಟಕಗಳನ್ನು ರಚಿಸಿದ್ದಾರೆ. ಸ್ವತಂತ್ರ ನಾಟಕಗಳೇ ಹದಿನಾರು ಇವೆ. ನಾಟಕ ಪ್ರಕಾರದಲ್ಲಿ ಅವರ ಸಾಧನೆಯ ಪರಿಚಯ ಮಾಡಿಕೊಳ್ಳಲು ಕೆಲವು ನಾಟಕಗಳನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು.

ಅವರ ಒಂದೇ ಒಂದಾದ 'ಮಂಜುಳಾ' ನಾಟಕ ಬಿಟ್ಟರೆ ಉಳಿದೆಲ್ಲ ನಾಟಕಗಳ ಮೂಲದ್ರವ್ಯ ಇತಿಹಾಸ ಮತ್ತು ಪುರಾಣಗಳಿಂದ ಆಯ್ದ ಪ್ರಸಂಗಗಳು. ಇತಿಹಾಸ ಅಥವಾ ಪುರಾಣದ ಪ್ರಸಂಗಗಳು ತನಗೆ ತಾನೇ ಸತ್ವ ಪೂರ್ಣವಾಗಿದ್ದು ಉತ್ತಮವಾದ ಕಥಾವಸ್ತುವಿನಿಂದ ಕೂಡಿದ್ದರೆ, ಅವು ಹಿಡಿಸಿದರೆ ಅಂಥವನ್ನು ಯಾವ ಪರಿವರ್ತನೆಗೂ ಒಳಪಡಿಸದೆ ತೆಗೆದುಕೊಂಡು ನಾಟಕಕ್ಕೆ ಬಳಸಿರುವುದೇ ಹೆಚ್ಚು. ಇಂದಿನ ಕಾಲದ ದೃಷ್ಟಿಯಿಂದ ನೋಡಿದಾಗ, ಅವುಗಳಲ್ಲಿ ಅನೇಕ ಕೃತಿಗಳು, ಅದರಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳ ದೃಷ್ಟಿಯಿಂದ ಪ್ರಸ್ತುತತೆಯನ್ನು ಹೊಂದಿಲ್ಲ. ಈ ನಿಟ್ಟಿನಲ್ಲಿ ಅವರದು ಮೂಲನಿಷ್ಠೆಯ ದೃಷ್ಟಿ. ಅವು ಪಡೆದುಕೊಂಡ ಕಲಾತ್ಮಕತೆಯನ್ನು, ನಾಟಕ ರೂಪವನ್ನೂ ಮೆಚ್ಚಬೇಕಾಗಿದೆ, ಅಷ್ಟೆ.

೧೯೧೭-೧೮ರಷ್ಟು ಹಿಂದಿನಿಂದಲೇ ಕನ್ನಡದಲ್ಲಿ ಆಗುತ್ತಿದ್ದ

ರಂಗಪ್ರಯೋಗಗಳನ್ನು ಗಮನಿಸುತ್ತಿದ್ದರೆಂಬುದು ಅವರ 'ಸಾಹಿತ್ಯ ಪ್ರೇರಣೆ' ಪುಸ್ತಕದಿಂದ ತಿಳಿದು ಬರುತ್ತದೆ. ಇದರ ಪರಿಣಾಮವಾಗಿಯೇ ಅವರ ಪ್ರಾರಂಭದ ಪೌರಾಣಿಕ ನಾಟಕಗಳಾದ ಶಾಂತಾ, ಸಾವಿತ್ರಿ, ಉಷಾ ಇವುಗಳಲ್ಲಿ ಕಂದ, ವೃತ್ತಗಳು, ಹಾಡುಗಳು, ಎಲ್ಲ ಇವೆ. ಅವರ ಉಳಿದ ಪ್ರಾರಂಭದ ನಾಟಕಗಳೆಲ್ಲವೂ ಸೂತ್ರಧಾರನ ನಾಂದೀ ಪದ್ಯದಿಂದ ಆರಂಭವಾಗಿ ಭರತವಾಕ್ಯದಲ್ಲಿ ಮುಕ್ತಾಯವಾಗುತ್ತವೆ.

ಮಾಸ್ತಿಯವರ 'ತಾಳೀಕೋಟೆ' ತನ್ನ ಒಡಲಿನಲ್ಲಿ ಸಂಘರ್ಷವನ್ನು ಒಳಗೊಂಡಿರುವ ನಾಟಕ. ವ್ಯಕ್ತಿಯೊಬ್ಬನ ವೈಯಕ್ತಿಕ ಪ್ರೇಮ ಪ್ರಕರಣ ಇಡೀ ನಾಡನ್ನೇ ದಳ್ಳುರಿಗೆ ತಳ್ಳುವಂಥ ದುರಂತ ಇಲ್ಲಿಯ ದ್ರವ್ಯ. ದೊರೆ ರಾಮರಾಯನು ಮುಸ್ಲಿಂ ಯುವತಿ ಆಯಷಾಳನ್ನು ಪ್ರೇಮಿಸಿ, ಬಹಿರಂಗವಾಗಿ ಅವಳನ್ನು ಹೆಂಡತಿಯೆಂದು ಒಪ್ಪಿಕೊಳ್ಳುವ ನೈತಿಕ ಕೆಚ್ಚನ್ನು ತೋರದೆ ಇದ್ದದ್ದರಿಂದ ಅದು ಮುಂದೆ ಮತೀಯ ಮತ್ತು ಧಾರ್ಮಿಕ ಆಯಾಮ ಪಡೆದುಕೊಳ್ಳುತ್ತದೆ. ಆಯಷೆಯ ಭಗ್ನ ಪ್ರೇಮಿ ಉಸ್ಮಾನ್, ಮುಸ್ಲಿಂ ಹೆಣ್ಣನ್ನು ವಂಚಿಸಿದ ಕಾರಣಕ್ಕಾಗಿ ರಾಮರಾಯನ ವಿರುದ್ಧ ಅವನ ಮಗ ರುಸ್ತುಂನನ್ನು ಧರ್ಮ ಸಂರಕ್ಷಣೆಯ ನೆಪದಲ್ಲಿ ಎತ್ತಿ ಕಟ್ಟಿ, ಮಗನಿಂದಲೇ ತಂದೆಯ ತಲೆ ತೆಗೆಸುವಂಥ ಘಟನೆ ನಡೆದು ವಿಜಯನಗರದ ಪತನವಾಗುತ್ತದೆ. ಇಲ್ಲಿಯೂ ವಿಧಿಯ ಮತ್ತು ಕರ್ಮದ ಪ್ರಸಕ್ತಿ ನಾಟಕದುದ್ದಕ್ಕೂ ಬರುತ್ತದೆ. ವಿಧಿಯ ಜೊತೆಗೇ ರಾಮರಾಯನ ಅಹಂಕಾರ, ಅವಿವೇಕಗಳೂ ದುರಂತಕ್ಕೆ ಕಾರಣ. ಗಾಢವಾದ ನೈತಿಕ ಜಿಜ್ಞಾಸೆಯನ್ನೊಳಗೊಂಡಿದ್ದೂ ಮೌಲ್ಯಗಳ ಸಂಘರ್ಷವಾಗದೆ, ಎಲ್ಲರಿಗೂ ಒಳಿತಾಗಲೆಂಬ ಭರತವಾಕ್ಯದ ಸಮಾಧಾನದೊಂದಿಗೆ ನಾಟಕ ಮುಕ್ತಾಯವಾಗುವುದೊಂದು ವಿಪರ್ಯಾಸ.

ಮಾಸ್ತಿಯವರ ಐತಿಹಾಸಿಕ ನಾಟಕ ಸರಣಿಯಲ್ಲಿ ಭಕ್ತಿಯನ್ನೇ ಬದುಕಿನ ಮೌಲ್ಯವನ್ನಾಗಿ ಮಾಡಿಕೊಂಡ ಸಂತರ ಬದುಕನ್ನು ವಸ್ತುವನ್ನಾಗಿಸಿಕೊಂಡ ಮೂರು ನಾಟಕಗಳಿವೆ.

ಅವುಗಳೆಂದರೆ, 'ತಿರುಪಾಣಿ', 'ಪುರಂದರ' ಮತ್ತು 'ಕನಕಣ್ಣ. ಪುರಂದರ ಮತ್ತು ಕನಕದಾಸರ ಕತೆಗಳಿಗೆ ಅಂಟಿಕೊಂಡಿರುವ ಪವಾಡಗಳನ್ನೆಲ್ಲಾ ಕಳಚಿಹಾಕಿ, ವಾಸ್ತವದ ಪಾತಳಿಯ ಮೇಲೆ. ಲೌಕಿಕಕ್ಕೆ ಅಂಟಿಕೊಂಡಿದ್ದ ಅವರ ಚೇತನಗಳು, ಪರಿವರ್ತನೆಗೊಂಡ ಪರಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವ ನಾಟಕಗಳಾಗಿವೆ ಇವು. ಪೌರಾಣಿಕತೆ ಕಳಚಿಕೊಂಡಿದ್ದರೂ ಈ ನಾಟಕಗಳು ಭಕ್ತಿಯ, ಪವಿತ್ರ ವಾತಾವರಣವನ್ನು ನಿರ್ಮಿಸುತ್ತವೆ. ಆದರೆ ದಾಸರಿಬ್ಬರ ಬದುಕಿನಲ್ಲೂ ನಾಟಕೀಯತೆಗೆ ಆಸ್ಪದವೀಯುವ ಸಂಗತಿಗಳಿದ್ದರೂ, ಕನಕದಾಸರ ಪ್ರಸಂಗದಲ್ಲಿ ಜಾತಿಯ ಸಮಸ್ಯೆ ಲಗತ್ತಾಗಿದ್ದರೂ, ಅದಕ್ಕೆ ಮಾಸ್ತಿಯವರು ಲಕ್ಷ್ಯ ಕೊಟ್ಟಿಲ್ಲ.

ಆದರೆ 'ತಿರುಪಾಣಿ'ಯಲ್ಲಿ ಮಾಸ್ತಿಯವರು, ಮಾನವ ಸಮಾಜ ಸೃಷ್ಟಿಸಿಕೊಂಡಿರುವ ಪಂಥಗಳ ಮಡಿ ಮೈಲಿಗೆಗಳ ಡಾಂಭಿಕನತವನ್ನು ವಿಡಂಬನೆಗೆ ಗುರಿಮಾಡಿದ್ದಾರೆ. ಕೀಳು ಜಾತಿಯಲ್ಲಿ ಹುಟ್ಟಿ ತನ್ನ ಮಹಾನ್ ಭಕ್ತಿಸಾಧನೆಯಿಂದ ಭಗವಂತನನ್ನು ಒಲಿಸಿಕೊಂಡು ಆಳ್ವಾರುಗಳ ಪಂಕ್ತಿಯಲ್ಲಿ ಸೇರಿಹೋದ ತಿರುಪಾಣಿಯ ಕತೆಯನ್ನು ವಸ್ತುವಾಗಿ ಉಳ್ಳ ಈ ನಾಟಕದಲ್ಲಿ ಜಾತಿ ವ್ಯವಸ್ಥೆಯ ದ್ವಂದ್ವವನ್ನು ಪ್ರಶ್ನಿಸಿದರೂ ಅದಕ್ಕೆ ಪರಿಹಾರವಿಲ್ಲ. ಅಸ್ಪೃಶ್ಯನ ದೇವಾಲಯ ಪ್ರವೇಶದಂಥ ಪ್ರಶ್ನೆಯನ್ನೂ ತೇಲಿಸಿಬಿಟ್ಟಿದ್ದಾರೆ. ಆದರೆ ಪುರಂದರ, ಕನಕಣ್ಣ ಇವುಗಳಲ್ಲಿ ನಿವಾರಿಸಿದಂಥ ಪವಾಡದ ಪ್ರಸಂಗಗಳಿಗೆ ಇಲ್ಲಿ ಎಡೆಕೊಟ್ಟಿದ್ದಾರೆ. ಇಡೀ ನಾಟಕದಲ್ಲಿ ಭಕ್ತಿಯ ವಾತಾವರಣ ಓತಪ್ರೋತವಾಗಿದೆ. ಸಮಾಜದ ವ್ಯವಸ್ಥೆಯಲ್ಲಿ ಹುಟ್ಟಿದ ಸಮಸ್ಯೆಗಳಿಗೆ ಅದರಲ್ಲಿ ಪರಿಹಾರ ಕಾಣದೆ ಆಧ್ಯಾತ್ಮದಲ್ಲಿ ಪರಿಹಾರ ಕಾಣುವ ಹಂಬಲವಿದೆ.

ಮಾಸ್ತಿಯವರ ಐತಿಹಾಸಿಕ ನಾಟಕಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠ ನಾಟಕವೆಂದರೆ 'ಯಶೋಧರಾ'. ಇದೊಂದು ಸರಳ ರಗಳೆಯ ಗೀತನಾಟಕ. ಬುದ್ಧನ ತ್ಯಾಗ ಪೂರ್ಣ ಜೀವನದ ಅಧ್ಯಾಯ ಯಾವತ್ತೂ ಸಾಹಿತ್ಯಕ್ಕೆ ಆಸಕ್ತಿಯ ವಸ್ತುವಾಗಿದೆ. ಕನ್ನಡದಲ್ಲಿ ಕುವೆಂಪು, ಕಾರಂತ, ಪುಟ್ಟಸ್ವಾಮಯ್ಯ ಮುಂತಾದವರು, ಇದನ್ನು ಆಧರಿಸಿ ನಾಟಕಗಳನ್ನು ರಚಿಸಿದ್ದಾರೆ. ಆದರೆ ಇಲ್ಲಿ ಇದು ಪಡೆದುಕೊಂಡಿರುವ ಸ್ವರೂಪ ಬೇರೊಂದೇ ಬಗೆಯದು. ಪತಿಯಿಂದ ಪರಿತ್ಯಕ್ತಳಾದ ಯಶೋಧರೆಯನ್ನು ಕೇಂದ್ರವಾಗಿಟ್ಟುಕೊಂಡು, ಅವಳ ನೋವು ಬೇಗುದಿ, ಒಳತೋಟಿ, ಬದುಕಿನ ಅನುಭವಗಳಿಂದ ಅವಳ ವ್ಯಕ್ತಿತ್ವ ಮಾಗುವ ಪರಿ ಇವನ್ನೆಲ್ಲ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಲೌಕಿಕ ಮೌಲ್ಯ ಮತ್ತು ಅಧ್ಯಾತ್ಮಿಕ ಮೌಲ್ಯಗಳ ಚರ್ಚೆ ಬರುತ್ತದೆ. ಆಧ್ಯಾತ್ಮ ಸಾಧನೆಗಾಗಿ ಲೌಕಿಕ ತ್ಯಾಗ ತಪ್ಪಲ್ಲ ಎಂದು ಅದರ ವಿಜಯ ಸಾಧಿತವಾದರೂ ಅಧ್ಯಾತ್ಮಸಾಧನೆಯಲ್ಲಿ ಸ್ತ್ರೀಪುರುಷರ ಸಮಾನ ಹಕ್ಕನ್ನು ಎತ್ತಿ ಹಿಡಿಯುತ್ತದೆ. ಬುದ್ಧ ಮತ್ತು ಯಶೋಧರೆಯರ ವ್ಯಕ್ತಿತ್ವ ಅತ್ಯುನ್ನತವಾಗಿ ಮೂಡಿ ಬಂದಿದೆ. ಬುದ್ಧ ಯಶೋಧರೆಯನ್ನು ಸಂಧಿಸುವ ಸನ್ನಿವೇಶವಂತೂ, ಹೃದಯ ಮಿಡಿಯುವಂಥದಾಗಿ ಮಾಸ್ತಿಯವರು ಮಾತ್ರ ಚಿತ್ರಿಸಲು ಸಾಧ್ಯವೆಂಬಷ್ಟು ಸೊಗಸಾಗಿ ಮೂಡಿಬಂದಿದೆ

ನಾಟಕದಾದ್ಯಂತ ಪ್ರತಿಮೆ, ರೂಪಕಗಳು, ಸಾಮತಿಗಳು, ಉಪಮಾನಗಳು ಹಾಸುಹೊಕ್ಕಾಗಿದ್ದು ಸಾಹಿತ್ಯಿಕ ಸತ್ವಕ್ಕೆ ತಮ್ಮ ಕಾಣಿಕೆ ಸಲ್ಲಿಸುತ್ತವೆ.

'ಮಾಸತಿ'– ಹೆಣ್ಣೊಬ್ಬಳು. ಸಹಗಮನ ಮಾಡಿದ ಪ್ರಸಂಗವನ್ನು ವಸ್ತುವನ್ನಾಗಿಟ್ಟುಕೊಂಡು ಅದಕ್ಕೆ ದೃಶ್ಯ ರೂಪ ನೀಡಲಾದ ನಾಟಕ. ಅದು

ಪ್ರತಿಪಾದಿಸುವ ಮೌಲ್ಯದ ದೃಷ್ಟಿಯಿಂದಷ್ಟೇ ನೋಡಿದಾಗ, ನಮ್ಮ ಕಾಲಕ್ಕಂತೂ ಪ್ರಸ್ತುತವಲ್ಲದ, ನಮ್ಮ ಸಂವೇದನೆಗೆ ನಿಲುಕದ ನಾಟಕವೆಂದೇ ಹೇಳಬೇಕು. ಆದರೆ ಅದು ಪಡೆದುಕೊಂಡಿರುವ ಕಲಾತ್ಮಕತೆಯಿಂದಾಗಿ ಒಂದು ಒಳ್ಳೆಯ ನಾಟಕವಾಗಿದೆ. ದೃಶ್ಯದಿಂದ ದೃಶ್ಯಕ್ಕೆ ನಾಟಕದ ಕ್ರಿಯೆ ಸಂಘರ್ಷಗಳ ಮೂಲಕ ವೇಗವಾಗಿ ಸಾಗುತ್ತಾ ಚರಮ ಸೀಮೆಯನ್ನು ತಲುಪುವ, ಅದಕ್ಕೆ ತಕ್ಕಂತೆ ಇರುವ ಸಂಗತಿಗಳ ಯೋಜನೆ ಇವೆಲ್ಲಾ ಇದನ್ನೊಂದು ಉತ್ತಮ ನಾಟಕವಾಗಿಸಿವೆ.

ಮಾಸ್ತಿಯವರ ಒಂದೇ ಒಂದಾದ ಸಾಮಾಜಿಕ ನಾಟಕ 'ಮಂಜುಳಾ'. ಮದುವೆಯಾದ ಹೆಂಡತಿ ಮಂಜುಳಾ ಬದುಕಿರುವಾಗಲೇ ಅವಳ ಅತ್ತೆ ತನ್ನ ಮಗನಿಗೆ ಕ್ಷುಲ್ಲಕ ಕಾರಣಕ್ಕಾಗಿ ಎರಡನೇ ಮದುವೆ ಮಾಡಿಸುವ ಪ್ರಯತ್ನವನ್ನು ತಪ್ಪಿಸುವುದೇ ಈ ನಾಟಕದ ವಸ್ತು. ಮಾನವ ಸಂಬಂಧಗಳನ್ನು ಅಂತೇ ಗಂಡು ಹೆಣ್ಣಿನ ಸಂಬಂಧವನ್ನು ವಿಶ್ಲೇಷಿಸುತ್ತಾ ಸಾಗುವ ಈ ನಾಟಕ ಪ್ರಗತಿಪರ ಮೌಲ್ಯವನ್ನು ಪ್ರತಿಪಾದಿಸುತ್ತದೆ. ಈ ಸಾಮಾಜಿಕ ವಸ್ತುವಿಗೆ ತಕ್ಕಂತೆ ನಾಟಕದ ಭಾಷೆ ಕೂಡ ಆಡುಮಾತಿಗೆ ಹತ್ತಿರವಾದ ಗದ್ಯ. ಪಾತ್ರರಚನೆಯ ದೃಷ್ಟಿಯಿಂದಷ್ಟೇ ಅಲ್ಲ; ನಾಟಕೀಯ ಸನ್ನಿವೇಶಗಳ ದೃಷ್ಟಿಯಿಂದಲೂ ಇದೊಂದು ಒಳ್ಳೆಯ ಸಾಮಾಜಿಕ ನಾಟಕ.

ಮಾಸ್ತಿಯವರ ನಾಟಕಗಳಲ್ಲೇ ಅತ್ಯಂತ ವಿಶಿಷ್ಟವಾದ ಹಾಗೂ ಅವರ ನಾಟಕ ಸಾಹಿತ್ಯದ ಸಿದ್ಧಿಶೃಂಗವೆಂದರೆ 'ಕಾಕನ ಕೋಟೆ'. ಅಷ್ಟೇ ಅಲ್ಲ, ಕನ್ನಡ ನಾಟಕಗಳಲ್ಲೇ ಇದಕ್ಕೆ ಉನ್ನತವಾದ ಸ್ಥಾನವಿದೆ ಎಂಬುದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ. ಇದರ ರಚನೆಗೆ ಪ್ರೇರಕವಾದ ಸಂದರ್ಭವನ್ನು ಮಾಸ್ತಿ ವಿವರಿಸಿದ್ದಾರೆ.[೩೩] ಮೈಸೂರಿನಲ್ಲಿ ಸಬ್ ಡಿವಿಜನ್ ಅಧಿಕಾರಿಯಾಗಿದ್ದಾಗ, ಹೆಗ್ಗಡ ದೇವನ ಕೋಟೆ ಪ್ರದೇಶದ ಕಾಡು, ನದಿ ಇವೆಲ್ಲವನ್ನೂ ನೋಡಿ ಸಂತೋಷಪಟ್ಟಿದ್ದವರಿಗೆ ೧೯೩೦–೩೧ರಲ್ಲಿ ಸೆನ್ಸಸ್ ಸೂಪರಿಂಟೆಂಡೆಂಟ್ ಆಗಿದ್ದಾಗ ಹೆಗ್ಗಡ ದೇವನ ಕೋಟೆಯ ಕಾಡುಕುರುಬರ ಜೀವನಕ್ರಮ, ಸಮಾಜ ಪದ್ಧತಿಗಳು, ಇವನ್ನೆಲ್ಲ ತಿಳಿದು ಕೊಂಡಿದ್ದು ನಾಟಕಕ್ಕೆ ಪ್ರೇರಣೆ ಒದಗಿಸಿತು. ಹೀಗಾಗಿ ಮಾಸ್ತಿಯವರ ಈ ನಾಟಕಕ್ಕೆ ಒಂದು ಜನಾಂಗದ ವಾಸ್ತವ ಬದುಕಿನ ಗಟ್ಟಿಯಾದ ತಳಹದಿ ಇದೆ.

ಇದೊಂದು ಐತಿಹಾಸಿಕ ನಾಟಕವೆಂದು ಹೇಳಲಾದರೂ ರಣಧೀರನ ಪ್ರವೇಶದಿಂದಾಗಿ ಇದಕ್ಕೆ ಐತಿಹಾಸಿಕತೆ ಪ್ರಾಪ್ತವಾಗುತ್ತದೆಯೇ ಹೊರತು, ಇದು ಯಾವುದೊಂದು ಕಾಲ, ದೇಶಕ್ಕೆ ಸೀಮಿತವಾಗದ ಎಲ್ಲ ಕಾಲದ ಜನಾಂಗದ

ಕತೆಯೇ ಆಗುತ್ತದೆ. ನಾಟಕದ ವಸ್ತು ಸಾರ್ವಕಾಲಿಕ ಮೌಲ್ಯ ಉಳ್ಳದ್ದಾಗಿದೆ. ಅದೆಂದರೆ ನಗರೀಕರಣ ಮತ್ತು ಅದರ ಪರಿಣಾಮವಾಗಿ ಫಲಿಸಲಿರುವ ಜನಾಂಗವೊಂದರ ಸಾಂಸ್ಕೃತಿಕ ವಿಘಟನೆ.

ಕತೆ ಸರಳವಾಗಿ ಹೇಳುಬೇಕೆಂದರೆ, ಹೆಗ್ಗಡೆ ಮತ್ತು ಅವನ ಕರಣಿಕ– ಇವರ ಶೋಷಣೆಗೆ ಗುರಿಯಾದ ಹೆಗ್ಗಡದೇವನ ಕೋಟೆಯ ಕಾಡು ಕುರುಬರು, ರಣಧೀರನ ಮಧ್ಯಪ್ರವೇಶದಿಂದಾಗಿ ಶೋಷಣೆಯಿಂದ ಬಿಡುಗಡೆ ಹೊಂದಿದ್ದು. ಸ್ಥೂಲದಲ್ಲಿ ಕತೆ ಇಷ್ಟೇ ಆದರೂ, ನಾಟಕದ ಕೊನೆಗೆ ಕಾಕನಕೋಟೆಯ ಹೆಗ್ಗಡೆಯನ್ನಾಗಿ ಚಿಕ್ಕಯ್ಯನನ್ನು ನೇಮಿಸುವುದರೊಂದಿಗೆ ಕ್ರಮೇಣ ಕಾಡುಕುರುಬರು ತಮ್ಮ ಬೂಡಿನ ಸಾಂಸ್ಕೃತಿಕ ಅನನ್ಯತೆಯನ್ನು ನೀಗಿಕೊಂಡು, ಬೂಡಿನ ಸಂಸ್ಕೃತಿ ನಾಡಿನ ಸಂಸ್ಕೃತಿಯಲ್ಲಿ ಲಯವಾಗಿ ಹೋಗುವ ದುರಂತದ ಮುನ್ಸೂಚನೆ ಇದೆ. ಈಗಾಗಲೇ ಕಾಚನ ಮೂಲಕ ನಗರದ ಮಣಿ ಮುತ್ತು ಅಂಗರೇಕುಗಳ ಮಾರ್ಗವಾಗಿ ನಾಗರೀಕತೆ ಬೂಡಿಗೆ ತನ್ನ ಇಣುಕು ನೋಟ ಬೀರಿದೆ. ಮೊಲ್ಲೆ ಚಿಕ್ಕಯ್ಯರ ಮದುವೆ, ಬೂಡು ನಾಗರಿಕತೆಯತ್ತ ವಾಲುತ್ತಿರುವುದಕ್ಕೆ ಸೂಚಕವಾಗಿದೆ ಮತ್ತು ಬೂಡಿನ ಸಂಸ್ಕೃತಿನಾಶಕ್ಕೆ ಆ ಮೂಲಕ ನಾಂದಿ ಹಾಡಿದೆ. ಬೂಡಿನೊಳಗೂ ಅಂತಃಕಲಹ ಉಂಟಾಗಿದೆ. ಹೆಗ್ಗಡೆಯೊಂದಿಗಿನ ಹೋರಾಟದಲ್ಲಿ ಬೂಡು ತನ್ನ ಸಾಂಸ್ಕೃತಿಕ ಅನನ್ಯತೆ ನೀಗಿಕೊಳ್ಳಬೇಕಾದ ದುರಂತಕ್ಕೆ ಗುರುಯಾಗಿದೆ. “ಇತಿಹಾಸ ಆರಂಭವಾದಾಗಿನಿಂದ ನಾಗರಿಕತೆ ಎದುರಿಸಬೇಕಾಗಿ ಬಂದ ಸಂಕಟ ಇದು. ಇಪ್ಪತ್ತನೆಯ ಶತಮಾನದಲ್ಲಂತೂ ಅದು ಇನ್ನಷ್ಟು ಭೀಕರವಾಗಿ ನಿಂತಿದೆ. ಮತ್ತು ಈ ಭೀಕರ ಸಮಸ್ಯೆಯನ್ನೇ ಕೇಂದ್ರವಾಗಿಟ್ಟುಕೊಂಡದ್ದರಿಂದ ಕಾಕಾನ ಕೋಟೆ ಕೇವಲ ಕುರುಬರ ಕತೆಯಾಗದೆ, ನಮ್ಮ ಅನುಭವಕ್ಕೂ ಸಮೀಪದ್ದಾಗಿದೆ.”[೩೪] ಆದ್ದರಿಂದಲೇ ಕಾಕನಕೋಟೆ ಮಹತ್ವದ ನಾಟಕವಾಗಿದೆ. ಒಂದು ಜನಾಂಗದ ಸಂಸ್ಕೃತಿಯನ್ನು ಚಿತ್ರಿಸುತ್ತಲೇ ಅದು ಎದುರಿಸಬೇಕಾಗಿರುವ ಇಕ್ಕಟ್ಟುಗಳನ್ನು, ಸಂಘರ್ಷಗಳನ್ನು ಅನ್ಯಾದೃಶವಾಗಿ ಪ್ರಸ್ತುತಪಡಿಸುತ್ತಾ ಹೋಗುತ್ತದೆ.

ಪಾತ್ರಗಳ ವ್ಯಕ್ತಿತ್ವ ತೆರೆದು ತೋರುವ ಚುರುಕಾದ ಸಂಭಾಷಣೆ, ಸಂಕೀರ್ಣತೆ, ನಾಟಕ ಒಳಗೊಂಡಿರುವ ಲವಲವಿಕೆ, ಹಾಡುಗಳು, ತಾಂತ್ರಿಕ ಪರಿಣತಿ ಇವೆಲ್ಲ ಒಟ್ಟಾಗಿ ಸೇರಿ ನಾಟಕ ಅತ್ಯುತ್ತಮ ಕಲಾಕೃತಿಯಾಗಿ ನಾಟಕಕಾರರಾಗಿ ಮಾಸ್ತಿಯವರ ಸ್ಥಾನವನ್ನು ದೃಢಪಡಿಸಿದೆ.

○

ಅಧ್ಯಾಯ ೭

ವಿಮರ್ಶೆ

ಮಾಸ್ತಿಯವರ ಸೃಜನೇತರ ಸಾಹಿತ್ಯ ಕೂಡ ಸಾಕಷ್ಟು ವಿಸ್ತಾರವಾಗಿಯೇ ಇದೆ. ಆದರೆ ಈ ಪುಟ್ಟ ಪುಸ್ತಕದ ವ್ಯಾಪ್ತಿಯಲ್ಲಿ ಅದನ್ನು ಕುರಿತ ವಿವರವಾದ ಚರ್ಚೆ ಸಾಧ್ಯವೇ ಇಲ್ಲ. ಕೇವಲ ಅತ್ತ ಬೆರಳಿಟ್ಟು ತೋರಬಹುದು ಅಷ್ಟೆ.

ಮಾಸ್ತಿಯವರು ಪ್ರಾರಂಭದಿಂದಲೇ ಸಾಹಿತ್ಯವಿಮರ್ಶೆ ಕುರಿತು ಚಿಂತನೆ ನಡೆಸಿದ್ದರು. ಅವರ 'ಸಣ್ಣಕತೆಗಳು' ಪ್ರಕಟವಾದ ೧೯೨೦ರ ಸುಮಾರಿನಲ್ಲೇ 'ಸಾಹಿತ್ಯ' ಎಂಬ ಉಪನ್ಯಾಸ ಪ್ರಕಟವಾಯಿತು. ವಿಮರ್ಶೆಗೆ ಸಂಬಂಧಿಸಿದ ಮಾಸ್ತಿಯವರ ಬರಹ ಎರಡು ರೀತಿಯದಾಗಿದೆ. ಸಾಹಿತ್ಯದ ಅರ್ಥ, ಸ್ವರೂಪ, ವ್ಯಾಪ್ತಿ ಕಾರ್ಯ, ಉದ್ದೇಶ ಪ್ರಯೋಜನ ಇತ್ಯಾದಿಗಳನ್ನು ತಿಳಿಸುವ ಸೈದ್ಧಾಂತಿಕ ರೂಪದ ಬರಹ-ಒಂದು ಬಗೆಯದಾದರೆ, ಸಾಹಿತ್ಯ ಕೃತಿಗಳ ಸ್ವಾರಸ್ಯ, ವ್ಯಾಖ್ಯಾನ, ಇವುಗಳನ್ನೊಳಗೊಂಡ ಬರಹ- ಎರಡನೇ ಬಗೆಯದು. ಸಾಹಿತ್ಯದ ಅರ್ಥ, ಕಾವ್ಯ ಸ್ವರೂಪ ಇವುಗಳನ್ನು ವಿವರಿಸುವಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಚಿಂತನೆಗಳನ್ನೇ ಬಳಸಿಕೊಳ್ಳುತ್ತಾರೆ. ಹಾಗೆಯೇ ವಿಮರ್ಶೆಯ ಅರ್ಥ, ಸ್ವರೂಪ, ಕಾರ್ಯ, ಉದ್ದೇಶ ಇತ್ಯಾದಿ ತಾತ್ವಿಕ ಚಿಂತನೆಗಳಿಗೆ ವರ್ಡ್ಸ್‌ವರ್ತ್, ಮ್ಯಾಥ್ಯೂ ಆರ್ನಾಲ್ಡ್, ಶೆಲ್ಲಿ ಮುಂತಾದವರ ಹಾಗೂ ಭಾರತೀಯ ಅಲಂಕಾರಿಕರು, ರವೀಂದ್ರನಾಥ ಟಾಗೂರ್ ಇವರ ಚಿಂತನೆಗಳನ್ನು ಬಳಸಿಕೊಳ್ಳುತ್ತಾರೆ. 'ವಿಮರ್ಶೆ'ಯನ್ನು ಅವರು ಎರಡು ವಿಭಿನ್ನ ಅರ್ಥದಲ್ಲಿ ಬಳಸುತ್ತಾರೆ. ಕವಿಯಲ್ಲಿ

ಕೃತಿ ನಿರ್ಮಾಣ ಸಮಯದಲ್ಲಿ ಪ್ರವೃತ್ತವಾಗುವ ವಿಮರ್ಶೆ ಮತ್ತು ಕವಿಯ ಕೃತಿಯನ್ನು ಕುರಿತು ಸಹೃದಯನು ಮಾಡುವ ವಿಮರ್ಶೆ.

ಮಾಸ್ತಿಯವರ, ಸಾಹಿತ್ಯ ಮತ್ತು ವಿಮರ್ಶೆಯನ್ನು ಕುರಿತ–"ಈ ನಿಲುವುಗಳು ತಮ್ಮಷ್ಟಕ್ಕೆ ವಿವಾದಾಸ್ಪದವಲ್ಲದ ಸಾಮಾನ್ಯ ಹೇಳಿಕೆಗಳು" ಎಂಬ ಹಾಗೂ "ಅವು ಒಟ್ಟು ವಿಮರ್ಶೆಯ ಬೆಳವಣಿಗೆಗೆ ಅಥವಾ ವಿಮರ್ಶಕನೊಬ್ಬನ ಬೆಳವಣಿಗೆಗೆ ಸಹಾಯಕವೂ ಅಲ್ಲದ ಹೇಳಿಕೆಗಳು" ಎಂಬ ಅಭಿಪ್ರಾಯವಿದೆ.[೨೫] ಅದೂ ಅಲ್ಲದೇ "ಅವರು ಹೇಳುವ ತಾತ್ವಿಕ ಸ್ವರೂಪದ ಮಾತುಗಳನ್ನು ಸ್ವತಃ ಅವರ ವಿಮರ್ಶಾ ಪ್ರಯೋಗಗಳಿಗೇ ಆಗಲೀ, ಅಥವಾ ಅವರ ಕೃತಿಗಳಿಗೇ ಆಗಲಿ, ಅಥವಾ ಕನ್ನಡದ ಬೇರೆಯ ವಿಮರ್ಶೆಗೇ ಆಗಲಿ ಉಪಯುಕ್ತವಾಗುವಂತೆ ಅನ್ವಯಿಸಲು ಸಾಧ್ಯವಿಲ್ಲ."[೨೬] ಎಂಬ ಮಾತಿದೆ.

ಮೇಲಿನ ಅಭಿಪ್ರಾಯಗಳು ಮಾಸ್ತಿಯವರ ಈ ಬಗೆಯ ಚಿಂತನೆಗಳ ಮಿತಿಯನ್ನು ತೋರಿಸುತ್ತವೆಂಬುದು ನಿಜ. ಇಷ್ಟಾಗಿಯೂ ಹೊಸಗನ್ನಡದ ಆರಂಭ ಕಾಲದಲ್ಲಿ ಸಾಹಿತ್ಯ ವಿಮರ್ಶೆಯ ಮಾತಿರಲಿ, ಹೊಸ ಬಗೆಯ ಸಾಹಿತ್ಯ ಇನ್ನೂ ಕಣ್ಣುಬಿಡುತ್ತಿದ್ದಾಗ, ಸಾಹಿತ್ಯ ಮತ್ತು ವಿಮರ್ಶೆಯ ಸ್ವರೂಪ ಕುರಿತು ಗಂಭೀರವಾಗಿ ಚಿಂತಿಸಿದರು ಎನ್ನುವುದು ಐತಿಹಾಸಿಕ ಮಹತ್ವವುಳ್ಳ ಸಂಗತಿ. ಮಾಸ್ತಿಯವರು ಆ ಕಾಲಕ್ಕೇ ಅನ್ವಯಿಕ ವಿಮರ್ಶೆಯನ್ನು ಪ್ರಾರಂಭಿಸಿದರು. ಇದು ಎರಡು ರೀತಿಯಲ್ಲಿ ನಡೆಯಿತು. ಪ್ರಾಚೀನ ಕವಿಕೃತಿಗಳನ್ನು ಕುರಿತಾದ ಲೇಖನಗಳು ಗ್ರಂಥ ಇತ್ಯಾದಿ ಒಂದು ಬಗೆಯಾದರೆ, ಸಮಕಾಲೀನ ಕೃತಿಗಳಿಗೆ ಮುನ್ನುಡಿ, ವಿಮರ್ಶೆ ಇತ್ಯಾದಿಗಳನ್ನು ಬರೆದದ್ದು ಎರಡನೆಯ ಬಗೆ. ಮೊದಲನೇ ಬಗೆಯಲ್ಲಿ ಪ್ರಾಚೀನ ಕವಿಗಳ ಕೃತಿಗಳ, ಕೃತಿಯ ಭಾಗಗಳ ರಸಸ್ಥಾನಗಳನ್ನು ಗುರುತಿಸಿ ಅವುಗಳ ವ್ಯಾಖ್ಯಾನ, ವಿವರಣೆಗಳ ಮೂಲಕ ಓದುಗರಿಗೆ ವಿಶದಪಡಿಸುವ ರೀತಿ ಕಂಡುಬರುತ್ತದೆ. ಇದರ ಉದ್ದೇಶ ಓದುಗರ ರುಚಿ ಸಂಸ್ಕಾರ. ಹಾಗಾಗಿ ಇದು ಮೆಚ್ಚುಗೆ, ಆಸ್ವಾದನೆಯ ರೂಪದ್ದು. ಕೃತಿಯ ಮೌಲ್ಯ ಮಾಪನದ ಉದ್ದೇಶವಿಲ್ಲದ್ದು. ಕಾಳಿದಾಸನ ಮೇಘದೂತ, ಲಕ್ಷ್ಮೀಶನ ಜೈಮಿನಿ ಭಾರತ, ಮುದ್ದಣನ ರಾಮಾಶ್ವಮೇಧ, ತಮಿಳು ವೈಷ್ಣವ ಪ್ರಬಂಧಗಳು–ಇವುಗಳನ್ನು ಕುರಿತಾದ ಮಾಸ್ತಿಯವರ ಬರಹಗಳು ತುಂಬು ಪ್ರಶಂಸೆಯ, ಕೆಲವೊಮ್ಮೆ ಅತ್ಯುಕ್ತಿಯ ಹಾದಿ ಹಿಡಿದಿವೆ. ಆದರೆ ಇದರಿಂದ ಓದುಗರನ್ನು ಆ ಕಾವ್ಯಗಳತ್ತ ಆಕರ್ಷಿಸುವಲ್ಲಿ, ಅಭಿರುಚಿ ಹುಟ್ಟಿಸುವಲ್ಲಿ, ಸತ್ಪ್ರೇರಣೆ ನೀಡುವಲ್ಲಿ ಸಹಾಯವಾಗಿರುವುದನ್ನು ಮರೆಯುವಂತಿಲ್ಲ. ಸ್ವತಃ ಕುವೆಂಪು ಅವರು, ಮಾಸ್ತಿಯವರ 'ಆದಿಕವಿ ವಾಲ್ಮೀಕಿ' ಕೃತಿಯಲ್ಲಿನ ರಾಮಾಯಣದ ಔಚಿತ್ಯ ಪೂರ್ಣ ವಿಮರ್ಶೆ, ಶ್ರೀರಾಮಾಯಣ ದರ್ಶನಂ ಕಾವ್ಯ ನಿರ್ಮಾಣಕ್ಕೆ ಕಾರಣವಾಯಿತೆಂದು ಹೇಳಿದ್ದಾರೆ. ಅದೇ ರೀತಿ

ಕಾಳಿದಾಸನ ಮೇಘದೂತ ಕುರಿತಾದ ಅವರ ಲೇಖನ ಮತ್ತು ಅದರಲ್ಲಿ ಉದ್ಧೃತವಾದ ಸಂಸ್ಕೃತ ಪದ್ಯಗಳ ಸುಂದರ ಅನುವಾದಗಳು, ತಮಗೆ ಕಾಳಿದಾಸನ ಕೃತಿಗಳನ್ನು ಅನುವಾದಿಸಲು ಪ್ರೇರಣೆ ನೀಡಿತೆಂದು ಎಸ್. ವಿ. ಪರಮೇಶ್ವರ ಭಟ್ಟರು ಹೇಳಿದ್ದಾರೆ.[೧೭] ಗಯಟೆಯ ಬಗ್ಗೆ, ಹಾಫೀಸ್ ಕವಿಯ ಬಗ್ಗೆ, ಠಾಕೂರ್, ಆಗಸ್ಟೀನ್ ಇವರುಗಳ ಬಗ್ಗೆ, ತಮಿಳು ಪ್ರಬಂಧಗಳು ಬಗ್ಗೆ ಬರೆದ ಲೇಖನಗಳು ತೌಲನಿಕ ಅಧ್ಯಯನಕ್ಕೆ ನಾಂದಿ ಹಾಡಿದುವೆಂಬುದು ಮರೆಯಬಾರದ ಸಂಗತಿ. ನಲವತ್ತರ ದಶಕದ ಹೊತ್ತಿಗೆ ಇಷ್ಟೆಲ್ಲವನ್ನೂ ಮಾಡಿದ್ದರು ಎನ್ನುವುದು ಚಾರಿತ್ರಿಕ ದಾಖಲೆಯ ಸಂಗತಿ. 'ಆದಿಕವಿ ವಾಲ್ಮೀಕಿ' ಅವರ ಶ್ರೇಷ್ಠ ವಿಮರ್ಶನ ಗ್ರಂಥ. ರಾಮಾಯಣದ ಅತ್ಯುತ್ತಮ ರಸವಿಮರ್ಶೆಯಾಗಿದೆ. ಕೃತಿಯ ಪಾಠವನ್ನು ನಿರ್ಣಯಿಸಿಕೊಂಡು, ಪಾತ್ರಗಳನ್ನು, ಪ್ರಸಂಗಗಳನ್ನು ಸೂಕ್ಷ್ಮ ಪರಿಶೀಲನೆಗೆ ಒಳಗು ಮಾಡುತ್ತಾರೆ. ಪ್ರಕ್ಷಿಪ್ತ ಭಾಗಗಳೇನಿರಬಹುದೆಂಬುದನ್ನು, ತರ್ಕದ ಆಧಾರದ ಮೇಲೆ ಊಹಿಸಿ ಅಸಂಭಾವ್ಯವೆನ್ನಬಹುದಾದ, ಪವಾಡವೆಂಬಂಥ ಘಟನೆ, ಸನ್ನಿವೇಶಗಳನ್ನು ಹೆಕ್ಕಿ ತೆಗೆಯುತ್ತಾರೆ. ಪಾತ್ರಗಳ ಸೂಕ್ಷ್ಮ ಪರಿಶೀಲನೆ ಮಾಡಿ ರಾಮನ ದೈವೀ ಸ್ವರೂಪವನ್ನು ಒಪ್ಪದೆ ಮಾನವತೆಯ ಉತ್ತುಂಗ ಶಿಖರವಾಗಿ ಚಿತ್ರಿಸಿರುವುದನ್ನು ತೋರಿಸಿರುತ್ತಾರೆ. ರಾಮಾಯಣ ಕುರಿತ ಅವರ ಈ ದೃಷ್ಟಿಕೋನವೇ ಶ್ರೀರಾಮ ಪಟ್ಟಾಭಿಷೇಕದಲ್ಲಿ ಕಂಡು ಬರುವುದು.

"ಆದಿಕವಿ ವಾಲ್ಮೀಕಿ"ಯ ಬಗ್ಗೆ ಹೇಳಿದ ಮಾತುಗಳನ್ನೇ "ಭಾರತ ತೀರ್ಥ"ದ ಬಗ್ಗೆ ಹೇಳಲು ಸಾಧ್ಯವಿಲ್ಲ. ವಿಮರ್ಶೆಗಿಂತ ಹೆಚ್ಚಾಗಿ ಇತಿವೃತ್ತದ ಭಾಗಗಳೇ ಹೆಚ್ಚಾಗಿವೆ. ಆದರೆ ಆ ಇತಿವೃತ್ತವನ್ನು ಹೇಳುವಾಗ, ಭಾರತದ ಪಾತ್ರಗಳನ್ನು ವಿಶ್ಲೇಷಕ ದೃಷ್ಟಿಯಿಂದ ನೋಡಿರುವುದನ್ನು, ಅಸಂಭಾವ್ಯವೆನ್ನಬಹುದಾದ ಘಟನೆಗಳನ್ನು ವೈಚಾರಿಕ ನೋಟದಿಂದ ನೋಡಿರುವುದನ್ನು ಮರೆಯಬಾರದು. ಆದಿಕವಿ ವಾಲ್ಮೀಕಿಯಲ್ಲಿ ರಾಮನ ವಿಷಯಕ್ಕೆ ಮಾಡಿರುವಂತೆಯೇ ಶ್ರೀಕೃಷ್ಣನ ವ್ಯಕ್ತಿತ್ವಕ್ಕೆ ಅಂಟಿರುವ ಪೌರಾಣಿಕ ಪರಿವೇಷವನ್ನು ನಿರ್ದಾಕ್ಷಿಣ್ಯವಾಗಿ ಕಳಚಿಹಾಕಿದ್ದಾರೆ. ಇಷ್ಟಾದರೂ ಅದು ಸಾಹಿತ್ಯಕೃತಿ ಎಂಬ ದೃಷ್ಟಿಗಿಂತ ಹೆಚ್ಚಾಗಿ, ಅದರ ಅಧ್ಯಯನ ಪುಣ್ಯಪ್ರದ-ಅದು ಭಾರತ ತೀರ್ಥ ಎಂಬ ದೃಷ್ಟಿಯೇ ಮೇಲುಗೈ ಪಡೆದಿದೆ.

ಸಮಕಾಲೀನರ ಕೃತಿಗಳನ್ನು ಕುರಿತು ಮಾಸ್ತಿ ಮಾಡಿರುವ ವಿಮರ್ಶೆ ಕೂಡ ಆಗಿನ ಕಾಲದ ದೃಷ್ಟಿಯಿಂದ ಅತ್ಯಂತ ಯುಕ್ತವಾದ್ದು. ಹೊಸಗನ್ನಡದ ಆ ಉದಯ ಕಾಲ 'ಜಳ್ಳನ್ನು ತೂರಿ ಕಾಳನ್ನು ತುಂಬಿ-ಕೊಳ್ಳುವಂಥ ಕಾಲವಲ್ಲ,' ಸೃಜನಶೀಲತೆಯನ್ನು ಪ್ರೋತ್ಸಾಹಿಸಬೇಕಾದ ಕಾಲ. ಆದ್ದರಿಂದ ಮಾಸ್ತಿಯವರು ಸಮಕಾಲೀನರ ಕೃತಿಗಳಿಗೆ ಬರೆದ ಮುನ್ನುಡಿಗಳಲ್ಲಿ ಮೆಚ್ಚುಗೆಯ, ಪ್ರಶಂಸೆಯ ದಾರಿಯನ್ನೇ ಹಿಡಿದರು. ನಂಜನಗೂಡಿನ ತಿರುಮಲಾಂಬ ಅವರ ಸತೀ ಹಿತೈಷಿಣೀ

ಗ್ರಂಥ ಮಾಲೆಯನ್ನು ಕುರಿತಾದ ತಮ್ಮ ವಿಮರ್ಶೆ ಕಟುವಾಯಿತೆಂದು ಅನಂತರ ಮಾಸ್ತಿಯವರೇ ಹೇಳುತ್ತಾರೆ. ಆದ್ದರಿಂದ ಕೃತಿಸಮರ್ಥನೆಯ, ಮೆಚ್ಚುಗೆಯ ಈ ಮಾತುಗಳನ್ನು ವಿಮರ್ಶೆಯೆಂದು ಹೇಳುವುದು ಕಷ್ಟ. ಇಂಥ ಸಾಹಿತ್ಯದೋಹದ ಕೆಲಸ ಮಾಡುವಾಗಲೂ ಮಾಸ್ತಿ ಕೆಲವೊಮ್ಮೆ ಕೆಲಕೃತಿಗಳ ಬಗ್ಗೆ ಮೌಲಿಕವಾದ ಮಾತುಗಳನ್ನು ಆಡಿದ್ದಾರೆ. ಬೇಂದ್ರೆಯವರ ನಾದಲೀಲೆಗೆ ಮುನ್ನುಡಿ ಬರೆಯುತ್ತಾ ಅವರು ಬೇಂದ್ರೆಯವರ ಕಾವ್ಯವನ್ನು ವ್ಯಾಖ್ಯಾನಿಸಿರುವ ರೀತಿಯನ್ನು ಈಗಾಗಲೇ 'ಕ್ಲಾಸಿಕ್' ಎಂದು ಅನಂತ ಮೂರ್ತಿಯವರು ಕೊಂಡಾಡಿದ್ದಾರೆ. "ಬೇಂದ್ರೆಯವರು ಪ್ರಪಂಚದ ಕಾವ್ಯ ಸಂಪತ್ತನ್ನು ಹೆಚ್ಚಿಸಿದ್ದಾರೆ." ಎಂಬ ಮಾತು ಅವರು ೧೯೩೮ರಷ್ಟು ಹಿಂದೆಯೇ ಬೇಂದ್ರೆ ಕಾವ್ಯದ ಮಹತ್ವ ಕಂಡುಕೊಂಡಿದ್ದರೆಂಬುದಕ್ಕೆ ಸಾಕ್ಷಿ. ಹಾಗೆಯೇ ಪುತಿನ ಕಾವ್ಯ ಕುರಿತ ಅವರ ಮೆಚ್ಚಿಗೆಯ ಮಾತು. ರವೀಂದ್ರರನ್ನು ಕುರಿತ ಪುಸ್ತಕದಲ್ಲೂ ದೋಷ ದರ್ಶನಕ್ಕಿಂತ ಹೆಚ್ಚಾಗಿ ಕೃತಿಗಳ ಗುಣದರ್ಶನವನ್ನೇ ಮಾಡಿಸಿದ್ದಾರೆ.

'ನಮ್ಮ ಹೊಸ ಸಾಹಿತ್ಯದ ಆರಂಭ' ಎಂಬ ವಿಮರ್ಶನಕೃತಿ ೧೯೨೭ರಷ್ಟು ಹಿಂದೆಯೇ ಪ್ರಕಟವಾಯಿತು. ಇದರಲ್ಲಿ, ಹೊಸಗನ್ನಡದಲ್ಲಿ ಆಗತಾನೆ ಆರಂಭವಾಗಿದ್ದ ನವೋದಯ ಸಾಹಿತ್ಯದ ಬಗೆಗಿನ ಮಾಸ್ತಿಯವರ ಸೂಕ್ಷ್ಮ ಒಳನೋಟಗಳಿವೆ. ಛಂದಸ್ಸಿನ .ಬಗ್ಗೆ, ಕಾವ್ಯದ ಬಗ್ಗೆ ಸಮಕಾಲೀನ ಲೇಖಕರ ಬರಹಗಳ ಬಗ್ಗೆ ಸಹಾನುಭೂತಿ ಮತ್ತು ಸಹೃದಯತೆಯಿಂದ ಮಾಡಿದ ವಿಮರ್ಶೆ ಇದೆ. ೧೯೭೯ರಲ್ಲಿ ಮಾಸ್ತಿಯವರು ಇದಕ್ಕೆ ೧೦ ಪುಟಗಳ ಸಮಾರೋಪ ಬರೆದಿದ್ದಾರೆ.

ಜನಪದ ಸಾಹಿತ್ಯ ಕುರಿತು ಕೆಲಸ ಮಾಡಿದ ಮೊದಲಿಗರು ಇವರು. ಇಂಗ್ಲಿಷ್ ಓದಿದ ಈ ರೆವಿನ್ಯೂ ಅಧಿಕಾರಿ ಆ ಕಾಲಕ್ಕೆ ಜನಪದ ಲಾವಣಿ, ಸಾಂಗತ್ಯ, ಕೀರ್ತನೆ ಸಂಗ್ರಹಿಸಿ, ಇಂಗ್ಲೀಷಿನಲ್ಲಿ, ಕನ್ನಡದಲ್ಲಿ ಪುಸ್ತಕ ಬರೆದು ಉಪನ್ಯಾಸ ಮಾಡಿದರು.

ಒಟ್ಟಾರೆ ಮಾಸ್ತಿಯವರ ವಿಮರ್ಶನ ಬರಹ ತನ್ನ ಮಿತಿಯಲ್ಲಿಯೂ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ.

ಇತರ ಗದ್ಯ ಬರಹಗಳು : ಅವರ ಇತರ ಗದ್ಯ ಬಹರಗಳಲ್ಲಿ ಅವರ ಆತ್ಮವೃತ್ತದ ನಿರೂಪಣೆಯಾದ, 'ಭಾವ'ದ, ಮೂರು ಸಂಪುಟಗಳು, ಮಾತುಗಾರ ರಾಮಣ್ಣ, ಧರ್ಮಸಂರಕ್ಷಣೆ, ಅಂತರಗಂಗೆ ಇತ್ಯಾದಿಗಳೆಲ್ಲ ಬರುತ್ತವೆ. ಮೊದಲಿನವೆರಡೂ, ಒಂದು ಬಗೆಯಾದರೆ, ಕೊನೆಯವೆರಡೂ ಒಂದು ಬಗೆ.

'ಭಾವ' ಅವರ ಎಪ್ಪತ್ತೆಂಟು ವರ್ಷಗಳ ತುಂಬು ಬಾಳಿನ ಸಂಗತಿಗಳ ನಿರೂಪಣೆ. ಮಾಸ್ತಿಯವರು ತಮ್ಮ ಬದುಕು ಬೆಳೆದು ಬಂದ ಬಗೆ, ವೈಯಕ್ತಿಕ

ಬದುಕಿನ ಸೋಲು, ಗೆಲುವು, ನೋವು ನಲಿವು, ಬದುಕಿನ ಹಲವಾರು ಸಂಗತಿಗಳ ಬಗೆಗಿನ ಅವರ ವಿಚಾರಗಳು, ದೈವ ಭಕ್ತಿ, ಇವುಗಳ ಜೊತೆ ಜೊತೆಗೇ ಆಗಿನ ಕಾಲದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕಿನ ನೋಟಗಳು, ಪ್ರಕೃತಿ ಚಿತ್ರಗಳು, ಇವೆಲ್ಲವನ್ನೂ ಅಗಾಧ ನೆನಪಿನ ಆಧಾರದಿಂದ ನಿರೂಪಿಸಿದ್ದಾರೆ. ಕೆಲವು ತೀರ ಸಾಮಾನ್ಯವೆಂಬಂಥ ಸಂಗತಿಗಳನ್ನು ಸೇರಿಸುವ ಅಗತ್ಯವಿರಲಿಲ್ಲವೆನಿಸುತ್ತದೆ. ಇದರಲ್ಲಿ ಮಾಸ್ತಿಯವರ ಅಧಿಕಾರಿ ಬದುಕು ಸ್ಫುಟಗೊಂಡಂತೆ ಬರಹಗಾರನ ಬದುಕು ಸ್ಫುಟಗೊಂಡಿಲ್ಲ, ನಿರೂಪಣೆಯಲ್ಲಿ ಕತೆಗಾರಿಕೆಯ ಕೌಶಲ ಇರುವುದರಿಂದ ಸ್ವಾರಸ್ಯಕರವಾಗಿ ಓದಿಸಿಕೊಂಡು ಹೋಗುತ್ತದೆ.

ಮಾಸ್ತಿಯವರ ಈ ಆತ್ಮವೃತ್ತದಲ್ಲಿ ಎದ್ದುಕಾಣುವ ಒಂದು ಅಂಶವೆಂದರೆ, ದೈವದಲ್ಲಿ ಅಪಾರ ನಂಬಿಕೆ, ಶ್ರದ್ಧೆ ಭಕ್ತಿಗಳಿದ್ದ ಚೇತನವೊಂದು ಎಲ್ಲ ಸಂಕಷ್ಟಗಳ ಮಧ್ಯದಲ್ಲಿ ತನಗೇ ಸಹಜವಾದೊಂದು ಅನುದ್ವೇಗದಿಂದ ಅರಳುತ್ತ ಹೋದ ಪರಿಯನ್ನು ಅನುದ್ವಿಗ್ನವಾಗಿಯೇ ನಿರೂಪಿಸಿರುವ ರೀತಿ. ಅವರಿಗಾಗುವ ದರ್ಶನಗಳು ಒಂದು ರೀತಿಯಲ್ಲಿ ಕಾರ್ಯಕಾರಣಗಳಾಚೆಗಿನ ಸಂಗತಿಗಳ ಉಲ್ಲೇಖಗಳು. ರಾಮಾಯಣದ, ಮಹಾಭಾರತದ ಪವಾಡ ಸದೃಶವೆಂಬಂಥ ಘಟನೆಗಳನ್ನು ಪುರಂದರ ಕನಕರ ಬದುಕಿನ ಅಲೌಕಿಕವೆಂಬಂಥ ಸನ್ನಿವೇಶಗಳನ್ನು, ಅವುಗಳ ಪುರಾಣದ ಪರಿವೇಶದಿಂದ ಬಿಡಿಸಿ ನಮ್ಮ ಮುಂದಿಡುವ ಮಾಸ್ತಿ, ನಿಜ ಜೀವನದಲ್ಲಿ ಇವನ್ನು ಒಪ್ಪಿಕೊಂಡಂತೆ ನಿರೂಪಿಸಿರುವುದೇ ಒಂದು ಚೋದ್ಯ.

'ಮಾತುಗಾರ ರಾಮಣ್ಣ' ಕೂಡ ಮಾಸ್ತಿಯವರ ಸಮೃದ್ಧ ಜೀವನಾನುಭವದ ನೂರಾರು ಮುಖಗಳು ರಾಮಣ್ಣನೆಂಬ ಕಾಲ್ಪನಿಕ ವ್ಯಕ್ತಿಯ ಮೂಲಕ ಅನಾವರಣಗೊಳ್ಳುತ್ತ ಸಾಗುವ ಕೃತಿ. ಈ ನಿರೂಪಕನಾದರೋ ಮಾಸ್ತಿಯವರ ವ್ಯಕ್ತಿತ್ವದ ಒಂದು ಪ್ರತಿರೂಪವೇ ಆಗಿದ್ದಾನೆ. ಈ ಶತಮಾನದ ಮೊದಲ ಐದು ದಶಕಗಳ ನಮ್ಮ ಸಾಮಾಜಿಕ ಬದುಕಿನ ರೀತಿ, ರಿವಾಜುಗಳು, ಮೌಲ್ಯಗಳು ಇವನ್ನೆಲ್ಲ ಸ್ವಾರಸ್ಯಪೂರ್ಣ ಪ್ರಸಂಗಗಳಾಗಿ ಬಿಂಬಿಸುವ ಹಲವು ನೂರು ಚಿತ್ರಗಳಾಗಿ ಮೂಡಿ ಬಂದಿವೆ.

'ಧರ್ಮ ಸಂರಕ್ಷಣೆ' ಮತ್ತು 'ಅಂತರಗಂಗೆ' ಎರಡೂ ಮಾಸ್ತಿಯವರ ಧಾರ್ಮಿಕ, ನೈತಿಕ ಕಾಳಜಿಗಳು, ನಮ್ಮದೇಶದ ಜನರ ಬದುಕು ಹಸನಾಗಬೇಕೆಂಬ ಬಗೆಗಿನ ಅವರ ತುಡಿತ, ನಮ್ಮ ಧರ್ಮ, ಸಂಪ್ರದಾಯಗಳಲ್ಲಿರುವ ಉತ್ತಮವೆನ್ನಬಹುದಾದ ಅಂಶಗಳ ಬಗ್ಗೆ ಇರುವ ಹೆಮ್ಮೆ ಅಂತೆಯೇ ಅದರಲ್ಲಿನ ಲೋಪದೋಷಗಳು, ಮೌಢ್ಯಗಳ ಬಗೆಗಿನ ಅವರ ಅಸಂತೋಷ, ಅವುಗಳನ್ನು ಎತ್ತಿ ಹೇಳುವಾಗ ವ್ಯಕ್ತವಾಗುವ ಅವರ ನಿಷ್ಪಕ್ಷಪಾತತನ ಇವಕ್ಕೆ ಉದಾಹರಣೆಯಾಗಿವೆ.

'ಅಂತರ ಗಂಗೆ', ೪೨೪ ಪುಟಗಳಲ್ಲಿ ಧರ್ಮ ಸಂಸ್ಕೃತಿ, ಸಮಾಜ, ಇತಿಹಾಸ, ಸಾಹಿತ್ಯ ಇತ್ಯಾದಿ ಹಲವು ಹತ್ತು ವಿಷಯಗಳನ್ನು ಒಳಗೊಂಡಿದೆ. ನಮ್ಮ ದೇಶದ ಆಧ್ಯಾತ್ಮಿಕ ಸಂಪತ್ತಿನ ಬಗೆಗಿನ ವಿಸ್ತೃತ ತಿಳಿವು ಅಂತರಗಂಗೆಯಲ್ಲಿದೆ. ವೇದ, ಉಪನಿಷತ್ತುಗಳು, ಪುರಾಣಗಳು, ಇತಿಹಾಸ ನಮ್ಮ ದೇಶದಲ್ಲಿ ಬೆಳೆದು ಬಂದ ಧರ್ಮಗಳು, ಅವುಗಳ ಸಾರ, ಅವುಗಳ ಮೇಲೆ ಆದ ಆಕ್ರಮಣಗಳು, ಪ್ರಸಿದ್ಧ ಸಾಹಿತ್ಯ ಕೃತಿಗಳಾದ ರಾಮಾಯಣ, ರಘುವಂಶ ಶಾಕುಂತಲ ಮೊದಲಾದುವುಗಳ ಪರಿಚಯ, ಹೊಸ ಕಾಲದ ಸುಧಾರಕರಾದ ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ರಾಮಕೃಷ್ಣ ವಿವೇಕಾನಂದ, ಮುಂತಾದವರ ವಿಚಾರಗಳು, ಹಿಂದೂ ಜೀವನ ಪದ್ಧತಿ, ನಂಬಿಕೆ, ನೀತಿ ತೀರ್ಥಕ್ಷೇತ್ರಗಳು ಇವೆಲ್ಲವುಗಳ ಸುದೀರ್ಘ ಪ್ರಸ್ತಾಪ ಇದರಲ್ಲಿ ಬರುತ್ತದೆ.

"ಧರ್ಮಸಂರಕ್ಷಣೆ" ಕೂಡ ಹಿಂದೂಧರ್ಮವನ್ನು ರಕ್ಷಿಸುವಲ್ಲಿ ಮಾಸ್ತಿಯವರಿಗಿರುವ ತೀವ್ರ ಕಾಳಜಿಯನ್ನು ಬಿಂಬಿಸುವ ಕೃತಿ. ಇದರಲ್ಲೂ ಭಾರತೀಯ ಧಾರ್ಮಿಕ ಆಕರಗಳಾದ, ಉಪನಿಷತ್ತುಗಳ ಸಾರವನ್ನು ವಿವರಿಸುವ ಭಾಗಗಳಿವೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಪೌರಾಣಿಕ ಕಥೆಗಳು, ಅವುಗಳಲ್ಲಿನ ವಿಸಂಗತಿಗಳು, ತರ್ಕದ ಬೆನ್ನೆಲುಬಿಲ್ಲದ ಪ್ರಸಂಗಗಳು, ಅವುಗಳಲ್ಲಿ ಇರಬಹುದಾದ ಸಾಂಕೇತಿಕತೆ, ಹಿಂದೂ ಧಾರ್ಮಿಕ ಆಚರಣೆಗಳಲ್ಲಿನ ಮೂಢ ನಂಬಿಕೆಗಳು, ಗೊಡ್ಡು ಸಂಪ್ರದಾಯಗಳು, ಜಾತಿ ವ್ಯವಸ್ಥೆಯಲ್ಲಿರುವ ತೊಡಕುಗಳು, ಅಸ್ಪೃಶ್ಯತೆಯ ಆಚರಣೆಯಿಂದಾಗಿರುವ ಅನರ್ಥಗಳು, ಗುರುಪೀಠಗಳು, ಅವುಗಳಲ್ಲಿರುವ ಸಂಕುಚಿತ ದೃಷ್ಟಿ, ಪವಾಡವೆನ್ನುವಂಥ ಸಂದರ್ಭಗಳ ಅರ್ಥಹೀನತೆ ಇವೆಲ್ಲವುಗಳ ವಸ್ತುನಿಷ್ಠ ವಿವೇಚನೆ ಇದರಲ್ಲಿದೆ. ಇದನ್ನು ಓದಿದಾಗ ಮಾಸ್ತಿಯವರ ನಿರ್ಮಮ ವಿಶ್ಲೇಷಣೆ ಎದ್ದು ಕಾಣುತ್ತದೆ. ವರ್ಣವ್ಯವಸ್ಥೆಯ ಲೋಪ ದೋಷಗಳ ಪೂರ್ಣ ಅರಿವಿರುವ ಮಾಸ್ತಿಯವರು, ಸೂಚಿಸಿರುವ ಕೆಲವೊಂದು ಪರಿಷ್ಕಾರಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಂಡು ಆಚರಣೆಗೆ ತಂದರೆ ಅದರಿಂದ ಹಿಂದೂ ಧರ್ಮದ ರಕ್ಷಣೆಯಾಗುವದರಲ್ಲಿ ಸಂಶಯವಿಲ್ಲ. ಮಾಸ್ತಿಯವರ ಮುಖ್ಯ ಆಶಯ, ಈ ಧರ್ಮವನ್ನು ಟೀಕಿಸುವವರು ಒಳಗಿದ್ದುಕೊಂಡು ಟೀಕಿಸಬೇಕೇ ಹೊರತು, ಹೊರಗಿನಿಂದ ಅಲ್ಲ. ಒಟ್ಟಾರೆ ಧರ್ಮ ಹಾಗೂ ಸಮಾಜದ ವಿಚಾರಗಳನ್ನು ಬಲ್ಲ ಉದಾರ ಮನಸ್ಸಿನ ಚಿಂತನೆಗಳು ಈ ಎರಡೂ ಗ್ರಂಥಗಳಲ್ಲಿ ಎಂದಿನಂತೆ ಅಕ್ಲಿಷ್ಟವಾದ, ಪ್ರಸನ್ನವಾದ, ಸರಳ ಮನೋಹರ ಗದ್ಯದಲ್ಲಿ ಮೂಡಿವೆ.

೦

ಅಧ್ಯಾಯ ೮

ಪತ್ರಕರ್ತ ಮಾಸ್ತಿ

ಸಾಹಿತಿ ಮಾಸ್ತಿ ಪತ್ರಕರ್ತರೂ ಆಗಿದ್ದರು ಎಂಬ ಸಂಗತಿ, ಅವರ ಸಮೃದ್ಧ ಬದುಕಿನ ಬಹುಮುಖ್ಯ ಅಂಶ. 'ಜೀವನ' ಮಾಸ ಪತ್ರಿಕೆಯ ಸಂಪಾದಕರಾಗಿ ಅದನ್ನು ಇಪ್ಪತ್ತೊಂದು ವರ್ಷಕಾಲ ಯಶಸ್ವಿಯಾಗಿ ನಡೆಸಿದರು. ಧಾರವಾಡದಲ್ಲಿ ಕುಂಟುತ್ತ ಸಾಗಿದ್ದ ಪತ್ರಿಕೆಯನ್ನು ೧೯೪೪ ರಲ್ಲಿ ಬೆಂಗಳೂರಿಗೆ ತಂದು, ತಮ್ಮ ಮನೆಯನ್ನೇ ಪತ್ರಿಕಾ ಕಛೇರಿಯಾಗಿ ಮಾಡಿದ ಕೀರ್ತಿ ಅವರದೇ. ಬೇಂದ್ರೆ, ಆರ್. ಆರ್. ದಿವಾಕರ್, ವಿಶ್ವೇಶ್ವರಯ್ಯ, ಎ.ಆರ್.ಕೃ ಮತ್ತು ನವರತ್ನ ರಾಮರಾಯರನ್ನು ಕುರಿತು ವಿಶೇಷ ಸಂಚಿಕೆಗಳನ್ನು ಹೊರತಂದರು. ಸಂಪಾದನೆಯ ಕೊನೆಯ ವರ್ಷ ೨೫ ವರ್ಷ ಮುಗಿಸಿದ ನೆನಪಿಗೆ ಉತ್ಸವ ಸಂಚಿಕೆ ಹೊರತಂದರು.

ತಾವು ಪ್ರತಿ ತಿಂಗಳೂ ಬರೆಯುತ್ತಿದ್ದ ಸಂಪಾದಕೀಯ ಟಿಪ್ಪಣಿಗಳಲ್ಲಿ ಬಹಳಷ್ಟನ್ನು ಆಯ್ದು ೨೫೦೦ ಪುಟಗಳಲ್ಲಿ ಐದು ಸಂಪುಟಗಳಾಗಿ ಪ್ರಕಟಿಸಿದರು. ಸಂಪಾದಕೀಯಗಳನ್ನು ಹೀಗೆ ಪುಸ್ತಕರೂಪದಲ್ಲಿ ಪ್ರಕಟಿಸಿದವರಲ್ಲಿ ಮಾಸ್ತಿಯವರೇ ಮೊದಲಿಗರು. ಅವರ ಸಂಪಾದಕೀಯ ಟಿಪ್ಪಣಿಗಳಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಸಮಕಾಲೀನ ಬದುಕಿನ ದಾಖಲೆಗಳಾದ ಇವು ಸಾರ್ವಜನಿಕ ಪ್ರಾಮುಖ್ಯದ ಹಲವು ನೂರು ವಿಷಯಗಳನ್ನು ಕುರಿತಿವೆ. ರಾಜ್ಯ, ದೇಶ ಮತ್ತು ಜಾಗತಿಕ ವಿಷಯಗಳಿಗೆ ಸಂಬಂಧಿಸಿದ ಇವನ್ನು ಮಾಸ್ತಿಯವರು ಕರ್ನಾಟಕ ಜೀವನ,

ರಾಷ್ಟ್ರಜೀವನ ಹಾಗೂ ಲೋಕ ಜೀವನ ಎಂದು ವಿಂಗಡಿಸಿದ್ದಾರೆ. ಹೀಗೆ ಸಾಹಿತ್ಯಿಕ ಪತ್ರಿಕೆಯಲ್ಲಿ ಸಾಹಿತ್ಯೇತರ ವಿಷಯಗಳ ಬಗ್ಗೆ ಸಂಪಾದಕೀಯ ಟಿಪ್ಪಣಿ ಬರೆಯುವುದನ್ನು ಕೆಲವರು ಆಕ್ಷೇಪಿಸಿದಾಗ ಮಾಸ್ತಿಯವರು–"ಸಾಹಿತ್ಯ ಜೀವನವನ್ನೆಲ್ಲಾ ಒಳಗೊಳ್ಳುವ ತತ್ವ, ಅದು ರಾಜಕೀಯ ಬಿಟ್ಟು ನಡೆಸಿಯೇನು ಎನ್ನುವಂತಿಲ್ಲ"–[೩೮] ಎಂದು ಸಮರ್ಥ ರೀತಿಯಲ್ಲಿ ಉತ್ತರಿಸಿದರು. ಮಾಸ್ತಿಯವರ ಸಂಪಾದಕೀಯ ಟಿಪ್ಪಣಿಗಳು ಒಳಗೊಂಡಿರುವ ವಿಷಯಗಳ ಶೀರ್ಷಿಕೆಗಳನ್ನು ಹೆಸರಿಸಿದರೇ ಸಾಕು, ಅವುಗಳ ವ್ಯಾಪ್ತಿ ತಿಳಿಯುತ್ತದೆ. ಅಮೆರಿಕದ ನೀಗ್ರೋ ಸಮಸ್ಯೆ, ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ, ಅಣುಬಾಂಬ್ ಪರೀಕ್ಷೆಗಳು, ಸೈಪ್ರಸ್ ಸಮಸ್ಯೆ, ಅರಬ್ ರಾಜಕೀಯ, ಚೀಣಾದ ದುಷ್ಟತನ, ಪಾಕೀಸ್ತಾನದ ದುರ್ವರ್ತನೆ, ಕಾಶ್ಮೀರ ಸಮಸ್ಯೆ, ಕಾಂಗ್ರೆಸ್‌ನ ಒಳಜಗಳ, ಮುಂಧ್ರಾ ವ್ಯವಹಾರ, ಕರ್ನಾಟಕ ಏಕೀಕರಣ, ಕರ್ನಾಟಕದಲ್ಲಿ ಕನ್ನಡ ಬಳಕೆ, ಭಾರತದ ಭಾಷಾಸಮಸ್ಯೆ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಸಾಹಿತ್ಯ ಅಕಾಡೆಮಿಯಲ್ಲಿ ಪ್ರಶಸ್ತಿಯ ಆಯ್ಕೆವಿಧಾನ ಹೀಗೆ ಅಂದಿನ ಹಲವು ನೂರು ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸಂಪಾದಕೀಯ ಟಿಪ್ಪಣಿಗಳನ್ನು ಬರೆದಿದ್ದಾರೆ. ವಿಷಯದ ಪೂರ್ವಾಪರಗಳನ್ನು ಸಮರ್ಪಕವಾಗಿ ವಿಶ್ಲೇಷಿಸುವ ಜಾಣ್ಮೆ, ಎಂಥ ಸಮಯದಲ್ಲೂ ಉದ್ವೇಗಕ್ಕೆ ಒಳಗಾಗದೆ ಸಂಯಮದಿಂದ ಬರೆಯುವ ವ್ರತ, ನಿಷ್ಕೃಷ್ಟವಾದ ಆದರೆ ಅಕ್ಲಿಷ್ಟವಾದ ಭಾಷೆ–ಇವು ಮಾಸ್ತಿಯವರ ಸಂಪಾದಕೀಯ ಬರಹದ ಕೆಲವೊಂದು ವಿಶಿಷ್ಟಗುಣಗಳು.

ಸರಕಾರವಾಗಬಹುದು, ಇಲ್ಲವೆ ಬೇರೆ ಯಾರೇ ಪ್ರತಿಷ್ಠಿತ ವ್ಯಕ್ತಿಗಳಾಗಿರಬಹುದು, ಅವರಿಗೆ ಅಸಮಾಧಾನವಾಗುತ್ತದೆ ಎನ್ನುವ ಕಾರಣಕ್ಕೆ ತಮಗೆ ಸರಿ ಕಂಡದ್ದನ್ನು ಎಂದೂ ಹೇಳಲು ಹಿಂಜರಿದಿಲ್ಲ ಹಾಗೂ ಯಾರದೇ ಮತ್ತು ಯಾವುದೇ ಮುಲಾಜಿಗೆ ಎಂದೂ ಒಳಗಾಗಿಲ್ಲ. ರಾಜಾಜಿಯವರ ವಿಷಯಕ್ಕೆ ಅವರಿಗೆ ಅಪಾರವಾದ ಗೌರವ. ಹೀಗಿದ್ದೂ ಆಂಧ್ರ ಪ್ರಾಂತ್ಯದ ಉದ್ಘಾಟನೆಯ ದಿನ, ಆಂಧ್ರ ತಮಿಳು ನಾಡಿನಿಂದ ಬೇರೆಯಾಯಿತಲ್ಲ ಎಂದು ರಾಜಾಜಿ ವ್ಯಥೆ ಪಟ್ಟರೆಂಬ ವಿಷಯಕ್ಕೆ ಮಾಸ್ತಿಯವರ ಟಿಪ್ಪಣಿ ಹೀಗಿದೆ– "ಮದ್ರಾಸ್ ಶಾಸನ ಸಭೆಯಲ್ಲಿ ತೆಲುಗಿನಲ್ಲಿ ಪ್ರಶ್ನೆ ಕೇಳಿದರೆ, ಉತ್ತರ ಕೊಡುವುದಕ್ಕೆ ಏರ್ಪಾಟು ಮಾಡದೆ, ನೋಟೀಸು ಕೇಳಿದ ರಾಷ್ಟ್ರನಾಯಕರು, ಆಂಧ್ರ ಜನತೆಗೆ ಆಂಧ್ರ ಪ್ರಾಂತ ಒಂದಾಗದೆ ಕ್ಷೇಮವಿಲ್ಲ ಎಂಬುದನ್ನು ರುಜು ಮಾಡಿಕೊಟ್ಟರು...

ಆ ಜನ ಬೇರೆ ಆದ ದಿನ ಅಯ್ಯೋ ಆದಿರಲ್ಲ ಎಂದು ವ್ಯಥೆ ಪಟ್ಟರು. ಇದು ಕಪಟ ಇರಲಾರದು. ಅದೂರ ದೃಷ್ಟಿ"[೩೯] ಎಂದು ಬರೆಯುತ್ತಾರೆ.

ರಾಜಾಜಿ.ಯವರ ಸ್ವಾರ್ಥವನ್ನು ಹೀಗೆ ಬಯಲಿಗೆಳೆಯುತ್ತಾರೆ: ಆಂಧ್ರ ಬೇರೆಯಾಗಿ ಹೋದ ಮೇಲೆ ಮದ್ರಾಸ್ ಪ್ರಾಂತಕ್ಕೆ ಸೇರಿದ್ದ ಕನ್ನಡ ಮತ್ತು ಮಲೆಯಾಳಿ ಪ್ರದೇಶಗಳೂ ಎಲ್ಲಿ ಕೈಬಿಟ್ಟು ಹೋಗುತ್ತವೋ ಎಂದು ಆತಂಕಕ್ಕೆ ಒಳಗಾದ ರಾಜಾಜಿ, ಶಾಸನ ಸಭೆಯ ವ್ಯವಹಾರವೆಲ್ಲ ತಮಿಳಿನಲ್ಲಿ ನಡೆಯಬೇಕೆಂದು ಹೇಳಿ ನಮ್ಮ ಪ್ರಾಂತವನ್ನು ನಾವೇ ದುರ್ಬಲಗೊಳಿಸುವುದು ಬೇಡ ಎಂದು ಎಚ್ಚರ ಹೇಳಿದರು.

ಆಚಾರ್ಯರು, ಮೇಧಾವಿಗಳು, ವ್ಯವಹಾರ ಕುಶಲರು, ಉಕ್ತಿ ಚತುರರು, ಆದರೂ ಈ ಮಾತಿನಲ್ಲಿ ಅವರ ಸ್ವಾರ್ಥ ಮುಖವಿಟ್ಟು ಕಾಣುತ್ತದೆ.

ಇವರು ನಮ್ಮ ಪ್ರಾಂತ ಎನ್ನುವಾಗ ನಮ್ಮ ಪದದಿಂದ ಯಾರನ್ನು ನಿರ್ದೇಶಿಸುತ್ತಾರೆ? ಇವರ ಮಾತಿನ ಸರಣಿಯನ್ನು ನೋಡಿದರೆ, ಇವರು ನಮ್ಮ ಎನ್ನುವುದು ತಮಿಳರನ್ನು ಮಾತ್ರ. ಕನ್ನಡಿಗರು, ಮಲೆಯಾಳಿಗಳು ಇವರಿಗೆ ತಮ್ಮ ಜನರಲ್ಲ."[೪೦]

ಮಾಸ್ತಿಯವರಮನೆ ಮಾತು ತಮಿಳು. ಆದ್ದರಿಂದ ಅವರಿಗೆ ಕನ್ನಡ ದೇಶದ ಬಗ್ಗೆ ಪ್ರೀತಿ ಇಲ್ಲ ಎನ್ನುವ ಜನ ಇದನ್ನು ಓದಬೇಕು. ತಮಗೆ ನ್ಯಾಯವಾಗಿ ದೊರೆಯ ಬೇಕಾಗಿದ್ದ ಮಂತ್ರಿ ಪದವಿಯ ಬಡ್ತಿ ತಪ್ಪಿಹೋಗಲು ಕಾರಣರಾದವರಲ್ಲಿ ಒಬ್ಬರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಭಾಷಾವಾರು ಪ್ರಾಂತ ನಿರ್ಮಾಣವಾದ ಸಂದರ್ಭದಲ್ಲಿ ತಾವು ಅರಸೊತ್ತಿಗೆಯನ್ನು ಸಮಾಧಾನ ಮನಸ್ಸಿನಿಂದ ಬಿಟ್ಟುಕೊಟ್ಟು ಎಲ್ಲರಂತೆ ಭಾರತದ ಸಾಮಾನ್ಯ ಪ್ರಜೆಯಂತೆ ಬಾಳಲು ಸಿದ್ಧ ಎಂದು ಹೇಳಿದ್ದನ್ನು ಮನಃಪೂರ್ವಕವಾಗಿ ಪ್ರಶಂಸಿಸುತ್ತ' ಅವರನ್ನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಆಹ್ವಾನಿಸಲಿ ಎಂದು ಸೂಚಿಸಿ, "ಒಡೆಯರಿಗಿಂತ ಹೆಚ್ಚು ಯೋಗ್ಯತೆ ಉಳ್ಳ ಒಬ್ಬ ಮಹನೀಯರು, ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ದೊರೆಯುವುದು ಕಷ್ಟ"[೪೧] ಎಂದು ಬರೆಯುತ್ತಾರೆ.

ಸಂಪಾದಕರಾಗಿ ಅವರು ತೋರಿದ ನಿಷ್ಪಕ್ಷಪಾತತನಕ್ಕೆ ಇನ್ನೊಂದು ನಿದರ್ಶನ- ಚೆನ್ನಬಸವನಾಯಕ ಕಾದಂಬರಿಯ ಬಗ್ಗೆ ವಿವಾದ ಉಂಟಾದ ಸಂದರ್ಭ. ಪತ್ರಿಕೆಯಲ್ಲಿ ಕೆಲವರು ಕಾದಂಬರಿಯನ್ನು ಸಮರ್ಥಿಸಿ ಲೇಖನ ಬರೆಯುತ್ತೇವೆಂದು ಹೇಳಿದಾಗ, ಮಾಸ್ತಿ ಸಂಪಾದಕನ ನೈತಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳದೆ, ಸಂಪಾದಕೀಯ ಟಿಪ್ಪಣಿಗಾಗಲಿ, ಲೇಖನಕ್ಕಾಗಲಿ ಅವಕಾಶ ಕೊಡಲಿಲ್ಲ. ಹೀಗೆ ಮಾಡಿ ಅವರು ಪತ್ರಿಕಾವೃತ್ತಿಯ ಘನತೆಯನ್ನು ಎತ್ತಿ ಹಿಡಿದರು. ಈ ಸಂಪಾದಕೀಯ ಬರಹಗಳನ್ನು ಕುರಿತು ಎಚ್ಚೆಸ್ಕೆ ಹೇಳಿರುವ ಮಾತು ತೀರ ಸತ್ಯವೆನಿಸುತ್ತದೆ- "ಅಡಕೆಯ ಫಲ

ಕೊಯ್ಯುವವರು, ಒಂದು ಮರದ ತುದಿಯಿಂದ ಇನ್ನೊಂದು ಮರಕ್ಕೆ ಜಿಗಿಯುವಂತೆ, ಒಂದು ವಿಚಾರವನ್ನು ಚರ್ಚಿಸುತ್ತ, ಆದರಿಂದ ಇನ್ನೊಂದು ವಿಚಾರಕ್ಕೆ ಜಿಗಿದು ಅವೆರಡಕ್ಕೂ ಇರುವ ಸಂಬಂಧವೇನೆಂಬುದನ್ನು ತೋರುವುದು ಮಾಸ್ತಿಯವರ ಟಿಪ್ಪಣಿಗಳ ವೈಶಿಷ್ಟ್ಯ."[೨೮]

ಕೆಲವೊಂದು ವಿಷಯಗಳಲ್ಲಿ, ಉದಾಹರಣೆಗೆ ಆರ್ಥಿಕ ವಿಚಾರಗಳಾಗ ಬಹುದು, ಅಥವಾ ವರ್ಣವ್ಯವಸ್ಥೆಯಂಥ ವಿಚಾರವಾಗಬಹುದು- ತಮ್ಮ ದೃಷ್ಟಿಕೋನದಿಂದಲೇ ವಿಚಾರ ಮಾಡಿ ಸಮರ್ಥನೆ ಮಾಡಿ ಬರೆದಿರುವುದನ್ನು ಒಪ್ಪಲಾಗದಿದ್ದರೂ, ಭಾಷಾವಾರು ಪ್ರಾಂತರಚನೆ, ಕನ್ನಡದ ಬಳಕೆ, ಇಂಗ್ಲಿಷಿನ ಸ್ಥಾನ ಇಂಥವುಗಳನ್ನು ಸಮರ್ಥಿಸಿ ಬರೆದ ಟಿಪ್ಪಣಿಗಳು ಇಂದಿಗೂ ಪ್ರಸ್ತುತವಾದವು. ಒಟ್ಟಿನಲ್ಲಿ ಇವು ಸಾಹಿತ್ಯಿಕ ಸತ್ವದಿಂದ ಕೂಡಿದ ವಿಚಾರಗಳಾಗಿವೆ.

○

ಅಧ್ಯಾಯ ೯

ಮಾಸ್ತಿಯವರ ಗದ್ಯದ ರೀತಿ

ಹೊಸಗನ್ನಡ ಗದ್ಯವನ್ನು ರೂಪಿಸಿದ ಶಿಲ್ಪಿಗಳಲ್ಲಿ ಮಾಸ್ತಿಯವರಿಗೂ ಗಣ್ಯಸ್ಥಾನವಿದೆ. ಅವರ ಬಹುಪಾಲು ಕೃತಿಗಳು ಗದ್ಯದಲ್ಲಿವೆ. ಹಾಗಾಗಿ ಗದ್ಯ ಅವರ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮ. ಗದ್ಯವನ್ನು ಕಥನಕ್ಕೆ ಚಿಂತನೆಗೆ ವಿಚಾರಕ್ಕೆ ವಿಮರ್ಶೆಗೆ ಮಾಸ್ತಿಯವರು ಬಳಸಿದ್ದಾರೆ.

ಮಾಸ್ತಿಯವರ ಗದ್ಯದ ಬಹು ಪ್ರಮುಖ ಗುಣ ಅದರ ಸರಳತೆ. ಅರ್ಥವ್ಯಕ್ತಿಯೇ ಅವರ ಉದ್ದೇಶ. ವಾಗಾಡಂಬರಕ್ಕಾಗಿ ಎಂದೂ ಅವರು ಮಾತನ್ನು ಬಳಸಿಲ್ಲ. ಹಾಗಾಗಿ ಅವರಲ್ಲಿ ದೊಡ್ಡ, ಸಂಸ್ಕೃತ ಭೂಯಿಷ್ಠವಾದ ಆಲಂಕಾರಿಕ ಭಾಷೆಯ ಪ್ರಯೋಗವನ್ನು ಕಾಣುವುದು ದುಸ್ತರ. ಆಲೋಚನೆಯಲ್ಲಿ ಸ್ಪಷ್ಟತೆ ಇರುವುದರಿಂದ, ಅವರ ಭಾಷೆ ಯಾವತ್ತೂ ಸಂದಿಗ್ಧತೆಯತ್ತ, ಅಸ್ಪಷ್ಟತೆಯತ್ತ ವಾಲುವುದಿಲ್ಲ. ಯಾವ ಉದ್ದೇಶವನ್ನು ಸಾಧಿಸಬೇಕೆಂದಿದೆಯೋ, ಅದನ್ನು ಅತ್ಯಂತ ಸಮರ್ಥವಾಗಿ, ಸೊಗಸಾಗಿ ಸಾಧಿಸುವ ಶಕ್ತಿ ಆ ಗದ್ಯಕ್ಕಿದೆ. ಸರಳವೇ ಎಂದರೂ ಅದು ತೀರ ಅಲಂಕಾರ ರಹಿತವಲ್ಲ, ಬೇಕೆಂದಾಗ ಅದು ಉಪಮೆ, ದೀರ್ಘೋಪಮೆ, ದೃಷ್ಟಾಂತ, ಗಾದೆ ಮಾತುಗಳು, ಸಾಮತಿ ಇವೆಲ್ಲವನ್ನೂ ಬಳಸಿಕೊಂಡು ತನ್ನ ಸೊಗಸನ್ನು ಹೆಚ್ಚಿಸಿಕೊಳ್ಳಬಲ್ಲುದು. ಅವರ ಕಥನ ಗದ್ಯದಲ್ಲಿ, ಇದಕ್ಕೆ ನಿದರ್ಶನಗಳು ದೊರೆಯುತ್ತವೆ.

'ಒಂದು ಹಳೆಯ ಕತೆ'ಯಲ್ಲಿ ಸಂಜೆಯ ಸಮಯದಲ್ಲಿ ತಮ್ಮ ಆಶ್ರಮಕ್ಕೆ

ಬಂದ ಸುಂದರ ಸ್ತ್ರೀಯನ್ನು ದೀಪದ ಬೆಳಕಿನಲ್ಲಿ ಕಂಡಾಗ ಸನ್ಯಾಸಿಗಾದ ಬೆರಗನ್ನು ಈ ದೃಷ್ಟಾಂತ ಬಹು ಚೆನ್ನಾಗಿ ಅಭಿವ್ಯಕ್ತಿಸುತ್ತದೆ.

"ಆಷಾಢಮಾಸದಲ್ಲಿ ಪ್ರಯಾಣಿಗನು ನಡುದಾರಿಯಲ್ಲಿ ಮಳೆಗೆ ಸಿಕ್ಕಿ, ಈ ಮಳೆ ನಿಲ್ಲುವ ಹಾಗಿಲ್ಲ ಎಂದು ನೈರುತ್ಯಕ್ಕೆ ತಿರುಗಿ ದಟ್ಟ ದಟ್ಟವಾಗಿ ಬರುವ ಕಾರ್ಮುಗಿಲನ್ನು ಕಂಡು, ಇದೇನು ಕಪ್ಪು ಎಂದುಕೊಳ್ಳುವ ವೇಳೆಗೆ ಆ ದಟ್ಟವಾದ ಕಾರ್ಮುಗಿಲ ಮೇಲೆ ಇಂದ್ರನು ವಜ್ರದಿಂದ ಕೆತ್ತಿ ಬರೆಯುವ ಸೆಳೆಮಿಂಚಿನ ಸಹಿಸಲಾರದ ಪ್ರಭೆಯಿಂದ ಆವನ ಕಣ್ಣು ಮುಚ್ಚುವಂತೆ, ಈ ಸುಂದರಿಯ ರೂಪಿನಿಂದ ಸನ್ಯಾಸಿಯ ಕಣ್ಣು ಮುಚ್ಚಿತು."

ಇದಿಷ್ಟೂ ಒಂದು ದೀರ್ಘವಾಕ್ಯ. ಆದರೆ ವಾಕ್ಯದ ದೀರ್ಘತೆ ಎಲ್ಲಿಯೂ ಅರ್ಥ ವ್ಯಕ್ತಿಗೆ ತೊಡಕಾಗಿಲ್ಲ, ಇಲ್ಲಿ ಬರುವ ದೃಷ್ಟಾಂತ ಸನ್ಯಾಸಿಗಾದ ಬೆರಗನ್ನು ತುಂಬ ಸಮರ್ಥವಾಗಿ ವರ್ಣಿಸುತ್ತದೆ.

ಇದೇ ಕಥೆಯಲ್ಲಿ ಇಲ್ಲಿಂದ ಮುಂದಕ್ಕೆ ಆ ಹೆಣ್ಣನ್ನು ವರ್ಣಿಸುವ ದೀರ್ಘ ವಾಕ್ಯಗಳು ಬರುತ್ತವೆ. ಬೇಕಾದರೆ ಅವರು ಸಣ್ಣ ಸಣ್ಣ ವಾಕ್ಯಗಳಲ್ಲೇ ಅಷ್ಟೇ ಪರಿಣಾಮಕಾರಿಯಾಗಿಯೂ ವರ್ಣಿಸಬಲ್ಲರು. 'ಕಲ್ಮಾಡಿಯ ಕೋಣ'ದಲ್ಲಿ ಮುನಿಯನ ಕರುವನ್ನು ವರ್ಣಿಸುವುದು ಹೀಗೆ– "ಮುನಿಯನ ಕರು ಚೆನ್ನಾಗಿತ್ತು. ದೊಡ್ಡದಾದ ಕಣ್ಣು, ಅಂದವಾದ ಮೂಗು; ಕೋಡು ಮೋಸಾಗಿ ಬರುತ್ತಿತ್ತು. ಅಗಲವಾದ ಮುಖ; ಇದ್ದುದು ಇದ್ದಂತೆ ಕಿರಿದಾಗಿ ಸಣ್ಣದಾಗಿದೆ; ಕೊನೆಯಲ್ಲಿ ಮುಸುಡಿ ಬೊಂಬೆಯಲ್ಲಿ ಬರೆದಂತೆ ಕಾಣುತ್ತಿತ್ತು."

ಕ್ರಿಯಾಪದವೇ ಇಲ್ಲದ ಇಂಥ ಸಣ್ಣ ಸಣ್ಣ ವಾಕ್ಯಗಳು ಹೇರಳವಾಗಿ ಬರುತ್ತವೆ. ಸಂಭಾಷಣೆಯಲ್ಲಿ ಇಂಥ ಚುರುಕಾದ ಮಾತಿನ ಸರಣಿಗೆ "ಇಂದಿರೆಯೋ? ಅಲ್ಲವೊ." ಕಥೆಯನ್ನು ನೋಡಬಹುದು.

ಸಾಮತಿ, ದೃಷ್ಟಾಂತ, ಉಪಮೆಗಳೇ ಅಲ್ಲದೆ ಮಹೋಪಮೆಗಳನ್ನು ಕೂಡಾ ಬಳಸುತ್ತಾರೆ. "ಕವಿಯ ಬಾಳ ಕೊನೆಯ ದಿನ"ದಲ್ಲಿ ಬಾಳಪಥದಲ್ಲಿ ಮನುಷ್ಯನ ಪಯಣವನ್ನು ವರ್ಣಿಸುವುದು ಹೀಗೆ– "ಬದುಕು ಒಂದು ರಥ. ಒಂದೊಂದು ರಥದಲ್ಲಿ ಒಬ್ಬೊಬ್ಬರು ನಾವು ಕುಳಿತಿದ್ದೇವೆ. ಒಂದೊಂದು ರಥವನ್ನು ಕುದುರೆಗಳ ಒಂದು ಹಿಂಡು ವೇಗವಾಗಿ ಸೆಳೆಯುತ್ತಿದೆ. ನೆಲವೂ ಅಷ್ಟು ಚೆನ್ನಾಗಿಲ್ಲ, ಅಲ್ಲಲ್ಲಿ ಹಳ್ಳ ಕೊಳ್ಳ; ಇಲ್ಲಿ ಗುಡ್ಡ, ಇಲ್ಲಿ ನೀರು; ಮಧ್ಯೆ ದಾರಿ, ರಥದಲ್ಲಿ ಕುಳಿತ ನಾವು ನಿಲ್ಲಿಸಲಾಗದ ಈ ಕುದುರೆಗಳನ್ನು ಹಳ್ಳಗಳ ಮಧ್ಯೆ, ಗುಡ್ಡಗಳ ತಗ್ಗಿನಲ್ಲಿ, ನೀರಿನ ಅಂಚಿನಲ್ಲಿ, ದಾರಿ ಎಲ್ಲಿದೆ ಎಂದು ನೋಡಿಕೊಂಡು ತಿರುಗಿಸುತ್ತಿರಬೇಕು. ದಾರಿ

ಎತ್ತ ಹೋದರೆ ಚೆನ್ನವೆಂದು ನಾವೇನು ಬಲ್ಲೆವು? ಎತ್ತ ಎಂದು ಯೋಚಿಸುವುದಕ್ಕೂ ಹೊತ್ತಿರುವುದಿಲ್ಲ. ಸದ್ಯ ಎದುರಿಗಿರುವ ಹಳ್ಳವನ್ನು ತಪ್ಪಿಸಿದರೆ, ಗುಡ್ಡವನ್ನು ಸುತ್ತಿಸಿದರೆ ಸಾಕು; ದಾರಿ ಒಂದನ್ನು ಹಿಡಿದರೆ ಸಾಕು. ಹೀಗೆ ಓಡಿಯಾಡಿ ಮನುಷ್ಯನು ಜೀವನವನ್ನು ಮುಗಿಸಬೇಕು." (ಪುಟ ೨೭೬)

ಭಾಷೆಯನ್ನು ಬಳಸುವ ರೀತಿಯಲ್ಲಿಯೇ ಧ್ವನಿರಮ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಒಂದು ಸಣ್ಣ ಉದಾಹರಣೆ. 'ಕಲ್ಮಾಡಿಯ ಕೋಣ'ದಲ್ಲಿ ಮುನಿಯನಿಗೆ ತನ್ನ ಪ್ರೀತಿಯ ಕರುವನ್ನು ಮಾರಿಗೆ ಬಲಿ ಕೊಡಲು ಸಾಧ್ಯವಿಲ್ಲವೆಂದು ಗೌಡರಿಗೆ ಹೇಳಲು ಧೈರ್ಯ ಬರಲಿಲ್ಲ, ಅದಕ್ಕೆ ಕಾರಣ "ಮಾರಿಯ ಕೋಪ ಹೇಗಾದರೂ ತಡೆದುಕೊಳ್ಳಬಹುದು. ಮಾರಿಯ ಕಣ್ಣು ಎಷ್ಟಾದರೂ ಕಲ್ಲಿನಲ್ಲಿ ಮಾಡಿರುವುದರಿಂದ ಅರಳುವ ಹಾಗಿಲ್ಲ, ಗೌಡರ ಕಣ್ಣು ಜೀವಂತ ದೇಹದಲ್ಲಿರತಕ್ಕದ್ದು. ಅದು ಅರಳಿದರೆ ಮಾರಿಯ ಅಪ್ಪನ ಕಣ್ಣಿನಂತಿರುವುದು."

ಗಾದೆಮಾತುಗಳನ್ನು ವ್ಯಂಜಕಶಕ್ತಿಯ ಹೆಚ್ಚಳಕ್ಕಾಗಿ ಬಳಸುವುದುಂಟು. 'ಎಸರು ಕುದಿಯದೆ ಬೇಳೆ ಬೇಯುವುದುಂಟೆ" (ಚೆನ್ನಬಸವನಾಯಕ), "ಏರಿ ಇಲ್ಲದ ಕೆರೆಲಿ, ಬೇರು ಇಲ್ಲದ ತಾವರೆ," "ಆಗ ಕದಿಯೋ ಅಕ್ಕನಿಗೆ ಬೆಳೆ ಕದಿಯೊ ಕುಕ್ಕುರಿ," "ಉಪ್ಪಿಲ್ಲದ ಗಂಜಿ ಉಂಡು ತೆಪ್ಪಗಿದ್ದ ಮನೆಮಗಾ, ತುಪ್ಪಾ ಬೋನ ಉಂಡು ತಿಪ್ಪೆ ಏರಿ ಬೊಗಳಿದ ಅಳಿಯ" (ಚಿಕವೀರರಾಜೇಂದ್ರ). ಇಂಥ ಗಾದೆಮಾತುಗಳು ಬೇಕಾದ ಹಾಗೆ ಬರುತ್ತವೆ.

ಭಾಷೆಯನ್ನು ಬಳಸುವ ಕ್ರಮದಲ್ಲಿಯೇ ಮನುಷ್ಯನ ಹೃದಯದ ಭಾವನೆಗಳೆಲ್ಲವನ್ನೂ ಸಾರ್ಥಕವಾಗಿ ವ್ಯಂಜಿಸಬಲ್ಲರು. ಮಗುವಿನಿಂದ ಹಿಡಿದು ಮಹಾತ್ಮನವರೆಗೆ, ಹರೆಯದ ಹೆಣ್ಣಿನ ಒಲವಿನ ಉತ್ಕಟ ಭಾವನೆಗಳಿಂದ ಹಿಡಿದು ವಿರಾಗಿಣಿಯ ಮನೋಭಾವನೆಗಳವರೆಗೆ, ತೀರಾ ಸಾಮಾನ್ಯ ಮನುಷ್ಯನಿಂದ ತೊಡಗಿ ಅಧಿಕಾರದ ಚುಕ್ಕಾಣಿ ಹಿಡಿದಿರುವವರ ವರೆಗೆ ಎಲ್ಲ ರೀತಿಯ ಮನಸ್ಥಿತಿಗಳನ್ನು ಅದೇ ಸರಳವಾದ ಕನ್ನಡ ಮಾತಿನಲ್ಲಿ ವ್ಯಂಜಿಸಬಲ್ಲರು. ವಿಸ್ತಾರದ ಭಯದಿಂದ ಅವಕ್ಕೆ ನಿದರ್ಶನಗಳನ್ನು ಕೊಡದೆ ಅಂಥ ವ್ಯಕ್ತಿಗಳನ್ನು ಮಾತ್ರ ಹೆಸರಿಸಬಹುದು. ಅದು ದುಷ್ಯಂತನ ಮಗ ಭರತನಾಗಬಹುದು, ವಾಮದೇವ ದ್ವೈಪಾಯನನಾಗಬಹುದು, ಮಲ್ಲಿಗೆಯಾಗಬಹುದು, ಶಕುಂತಲೆಯಾಗಬಹುದು, ಕೊಗ್ಗರ ಹೆಣ್ಣಾಗಬಹುದು, ಹೈದರ್ ಆಗಬಹುದು.

ಮಾಸ್ತಿಯವರ ವೈಚಾರಿಕ ಗದ್ಯ ಮತ್ತು ವಿಮರ್ಶಾ ಗದ್ಯವೂ ತನ್ನ ಗುರಿಯನ್ನು ಸಾಧಿಸವಲ್ಲಿ ಮೈಲಿಗಲ್ಲನ್ನೇ ನಿರ್ಮಿಸಿದೆ ಎನ್ನಬಹುದು. ವಿಚಾರ

ಸ್ಪಷ್ಟತೆಗೆ ಹೆಸರಾದ ಮಾಸ್ತಿಯವರು ತಾವು ಹೇಳಬೇಕಾದ ವಿಚಾರವನ್ನು ನಿಖರವಾದ ಮಾತುಗಳಲ್ಲಿ, ಆಬಾಲ ವೃದ್ಧರಾದಿಯಾಗಿ, ಅರ್ಥ ಮಾಡಿಕೊಳ್ಳಲು ಅನುಕೂಲವಾಗುವಂತೆ ಹೇಳುತ್ತಾರೆ. ಅದು ಬಸವಣ್ಣನವರು ಹೇಳುವಂತೆ "ಸ್ಫಟಿಕದ ಶಲಾಕೆ"ಯಂತೆ ನೇರ, ಸ್ಪಷ್ಟ, ಶುದ್ಧ. ಅವರ ವಿಚಾರಗಳನ್ನು, ಅಭಿಪ್ರಾಯಗಳನ್ನು ನಾವು ಒಪ್ಪದೆ ಇರುವುದು ಸಾಧ್ಯ; ಆದರೆ ವಿಚಾರಗಳನ್ನು, ಗೊಂದಲಗೊಳಿಸುತ್ತಾರೆಂಬ, ಗೋಜಲುಗೊಳಿಸುತ್ತಾರೆಂಬ ಆಕ್ಷೇಪವನ್ನು ಯಾರೂ ಮಾಡುವಂತಿರುವುದಿಲ್ಲ. 'style is the man' ಎಂಬ ಉಕ್ತಿಗೆ ಉದಾಹರಣೆ ಎಂಬಂತೆ ಮಾಸ್ತಿಯವರ ಸರಳ, ನೇರ ವ್ಯಕ್ತಿತ್ವ ಅವರ ಗದ್ಯದಲ್ಲಿ ಮೂರ್ತಿಮತ್ತಾಗಿ ಮೂಡಿ ಬಂದಿದೆ.

○

ಅಧ್ಯಾಯ ೧೦
ಮುಗಿವು

ಮಾಸ್ತಿಯವರ ಸಾಹಿತ್ಯ ಗುಣ, ಗಾತ್ರ ಎರಡರಲ್ಲೂ ಮಹತ್ತಾದುದು. ಕಾವ್ಯ, ನಾಟಕ, ಕತೆ, ಕಾದಂಬರಿ, ವಿಮರ್ಶೆ, ಜೀವನ ಚರಿತ್ರೆ ಮೊದಲಾದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಕೃತಿರಚನೆಯೇ ಅಲ್ಲದೆ, ಉಪನ್ಯಾಸಗಳು, ಸಂಪಾದಕೀಯ ಬರಹ, ರಾಜಕೀಯ ಮತ್ತು ಧಾರ್ಮಿಕ ಚಿಂತನೆಗಳು, ಇಂಗ್ಲಿಷಿನಿಂದ ಸಂಸ್ಕೃತದಿಂದ ಅನುವಾದಗಳು, ಗ್ರಂಥ ಸಂಪಾದನೆಗಳು ಹೀಗೆ ಒಟ್ಟಾರೆಯಾಗಿ ನೂರಿಪ್ಪತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ಕನ್ನಡ ನುಡಿ ಸರಸ್ವತಿಗೆ ಕಾಣಿಕೆಯಾಗಿ ನೀಡುವುದರ ಮೂಲಕ ನಿಜವಾದ ಅರ್ಥದಲ್ಲಿ ಕನ್ನಡ ಸಾಹಿತ್ಯವನ್ನು ಸಂಪನ್ನಗೊಳಿಸಿದ್ದಾರೆ. ಒಂದು ಜೀವಮಾನಕ್ಕೆ ಇದೇನೂ ಕಡಿಮೆ ಸಾಧನೆಯಲ್ಲ, ಕನ್ನಡದಲ್ಲಿ ಮಾತನಾಡುವುದೆಂದರೆ, ಬರೆಯುವುದೆಂದರೆ ಅಪಮಾನವೆಂದು ಭಾವಿಸಿದ್ದ ಕಾಲದಲ್ಲಿ ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದ ಮಾಸ್ತಿಯವರು ಕಛೇರಿಯ ಕಡತಗಳ ನಡುವೆ ಕಳೆದುಹೋಗದೆ ತಮ್ಮ ಪ್ರತಿಭಾ ಶಕ್ತಿಯಿಂದ ಕರ್ನಾಟಕದ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸುವುದರ ಮೂಲಕ ನಾಡಿನಲ್ಲಿ ಮೂಡಿಸಿದ ಎಚ್ಚರ

ಸಾಮಾನ್ಯವಾದುದಲ್ಲ. "ಶ್ರೀ"ಯವರ ಬಗ್ಗೆ ಅವರೇ ಹೇಳಿದ ಮಾತುಗಳನ್ನು ಬಳಸಿ-ಹೇಳುವುದಾದರೆ "ನುಡಿಯದೆ ಮತ್ತೆ ಕಲಿಸಿದಿರಿ. ದುಡಿದು ಕಲಿಸಿದಿರಿ, ಮನದರಕೆಗಳನೆಚ್ಚರಿಸಿ ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ". ಕರ್ನಾಟಕದ ಜನತೆಯಲ್ಲಿ ಸಾಹಿತ್ಯ ಸ್ಫುರಣ ಮತ್ತು ಸಾಂಸ್ಕೃತಿಕ ಜಾಗ್ರತಿ ಮೂಡಿಸಿದರು.

ಕನ್ನಡಕ್ಕಾಗಿ ಇಷ್ಟೆಲ್ಲಾ ಕೆಲಸ ಮಾಡಿದ ಮಾಸ್ತಿಯವರು ಅದನ್ನೊಂದು ವಿಶೇಷವೆಂದೇ ಪರಿಗಣಿಸಿಲ್ಲ, ತನ್ನ ಮಾತನ್ನು ಜನ ಕೇಳಿದರೆ ಇಲ್ಲವೆ ಎಂಬ ಬಗ್ಗೆ ಅವರು ನಿರ್ಲಿಪ್ತರು. ತನ್ನದು ಕೇವಲ ಒಬ್ಬ 'ಮೋಜನ್'ನ ಕೆಲಸ ಎಂಬುದು ಅವರೆಣಿಕೆ. ಅದಕ್ಕೆ ಅವರದೇ ವಿವರಣೆ-'ಮುಸಲ್ಮಾನರಲ್ಲಿ ಮೋಜನ್ ಎಂದೊಬ್ಬ ಮನುಷ್ಯ ಇರುತ್ತಾನಂತೆ. ಬೆಳಗಾಗ ಜನರನ್ನು ಪ್ರಾರ್ಥನೆಗೆ ಕೂಗಿ ಎಬ್ಬಿಸುವುದೇ ಅವನ ಕೆಲಸ. 'ನಾನು ಕೂಗಿದಾಗ ಹೆಚ್ಚು ಜನ ಕೇಳಲಿಲ್ಲ' ಎಂಬ ಮಾತನ್ನು ಅವನು ಹೇಳುವಂತಿಲ್ಲ, ಇತರರು ಮಲಗಿದ್ದಾಗ ಕೂಗಿ ಎಬ್ಬಿಸುವ ಕೆಲಸ ಅವನದು. ಕನ್ನಡ ನಾಡಿನಲ್ಲಿ ನಾನು ಮಾಡಿದುದು ಈ ಮೋಜನ್ ಕೆಲಸ."[೪೨]

ಮಾಸ್ತಿಯವರು ಬರೆಯಲು ಪ್ರಾರಂಭಿಸಿದಾಗ ಆಧುನಿಕ ಕನ್ನಡದಲ್ಲಿ ಇದ್ದದ್ದು ತೀರ ಕಡಿಮೆ. ಆದರೆ ಮುಂದಿನವರಿಗೆ ಮಾಸ್ತಿಯವರ ಅಪಾರವಾದ ಸಾಹಿತ್ಯವಿದೆ. ದೈವದ, ವಿಧಿಯ ಕೈವಾಡವನ್ನು ಕುರಿತು ಹೇಳುತ್ತಲೇ ಬದುಕಿನ ಮಹತ್ವವನ್ನು ಸಾರುವ, ಮನುಷ್ಯನ ಒಳ್ಳೆಯತನ, ಘನತೆ, ಉದಾತ್ತತೆಯನ್ನು ಚಿತ್ರಿಸುತ್ತ ಬದುಕಿನಲ್ಲಿ ಪ್ರೀತಿ, ಭರವಸೆಗಳನ್ನು ಮೂಡಿಸುವ, ಮಾನವ ಪ್ರೀತಿ, ಕರುಣೆಗಳನ್ನು ಚಿತ್ರಿಸುತ್ತ ಬದುಕಿನಲ್ಲಿ ಆಸಕ್ತಿ, ಉತ್ಸಾಹ ಮೂಡಿಸುವ ಮಾಸ್ತಿ ಸಾಹಿತ್ಯ ಎಲ್ಲ ಕಾಲಕ್ಕೂ ಜನರಿಗೆ ಸಂತೋಷವನ್ನು ನೀಡುವ ಸಾಹಿತ್ಯ. ಅವರ ಹಲವಾರು ಕೃತಿಗಳು ಕಾಲದ ಪರೀಕ್ಷೆಯಲ್ಲಿ ಉಳಿದು ಬರುತ್ತವೆಂಬುದು ಸಾಧಾರಣ ಸಂಗತಿಯಂತೂ ಅಲ್ಲ.

○

ಅಡಿಟಿಪ್ಪಣಿಗಳು

೧. ಗಿರಡ್ಡಿಗೋವಿಂದರಾಜ-ಕನ್ನಡ ಕಥಾಪರಂಪರೆ ಮತ್ತು ಮಾಸ್ತಿ - ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ-ಪುಟ ೨೫

೨. ಕುರ್ತಕೋಟಿ, ಕೆ.ಡಿ. ಯುಗಧರ್ಮ ಹಾಗೂ ಸಾಹಿತ್ಯದರ್ಶನ. ಪು. ೧೯೬

೩. ಮಾಸ್ತಿ: ಸಣ್ಣ ಕತೆಗಳು ಭಾಗ ೧೪-ಮುನ್ನುಡಿ

೪. ಜಿ. ಎಚ್. ನಾಯಕ, ಮಾಸ್ತಿಯವರ ಕಥೆಗಳಲ್ಲಿ ಸಂಘರ್ಷದ ಸ್ವರೂಪ-ಮಾಸ್ತಿ ಅವರ ಸಾಹಿತ್ಯ ಒಂದು ಅಧ್ಯಯನ, ಪು. ೫೨

೫. ಅದೇ ಪು. ೨೩

೬. ನೋ. ಸಂ. ತಿಮ್ಮೇಗೌಡ-ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ ಪುಟ ೧೨೭

೭. ಅದೇ ಪುಟ. ೧೨೭

೮. ಕೆ. ಸತ್ಯನಾರಾಯಣ-ಸ್ಥಿತ್ಯಂತರಗಳ ಶತಮಾನದ ಕತೆಗಾರ, ಮಾಸ್ತಿ ಸಾಹಿತ್ಯ ಸಮಗ್ರದರ್ಶನ. ಪು. ೧೧.

೯. ಅದೇ ಪುಟ. ೧೧

೧೦. ಎಲ್. ಎಸ್. ಶೇಷಗಿರಿರಾವ್-ಮಾಸ್ತಿ ಜೀವನ ಮತ್ತು ಸಾಹಿತ್ಯ ಪು. ೧೩೧

೧೧. ರಾಜೇಂದ್ರ ಚೆನ್ನಿ–ಮಾಸ್ತಿಯವರ ಸಣ್ಣಕತೆಗಳು–ಒಂದು ಅಧ್ಯಯನ, ಸಾಹಿತ್ಯ ವಿಮರ್ಶೆ ೮೪, ಪು. ೧೬೫

೧೨. ಪುರುಷೋತ್ತಮ ಬಿಳಿಮಲೆ. ಮಾಸ್ತಿಯವರ ಕತೆಗಳಲ್ಲಿ ಸಾಮಾಜಿಕ ಸಂಘರ್ಷಣೆಯ ನಿರ್ವಹಣೆ, ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ – ಪು ೨೭

೧೩. ಗಿರಡ್ಡಿಗೋವಿಂದರಾಜ–ಕನ್ನಡ ಕಥಾಪರಂಪರೆ ಮತ್ತು ಮಾಸ್ತಿ–ಮಾಸ್ತಿಯವರ ಸಾಹಿತ್ಯ. ಒಂದು ಅಧ್ಯಯನ – ಪುಟ ೨೭.

೧೪. ಯಶವಂತ ಚಿತ್ತಾಲ–ಸಣ್ಣಕತೆಗಳು – ೫ರ ಪ್ರಸ್ತಾವನೆ ಪು. ೧೦

೧೫. ಗಿರಡ್ಡಿಗೋವಿಂದರಾಜ–ಕನ್ನಡ ಕಥಾಪರಂಪರೆ ಮತ್ತು ಮಾಸ್ತಿ–ಮಾಸ್ತಿಯವರ ಸಾಹಿತ್ಯ. ಒಂದು ಅಧ್ಯಯನ – ಪುಟ ೪೫.

೧೬. ಎ. ಎನ್. ಮೂರ್ತಿರಾವ್ – ಮಾಸ್ತಿಯವರ ಕಥೆಗಳು

೧೭. ಕುರ್ತುಕೋಟಿ ಕೆ.ಡಿ. ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು – 'ಶ್ರೀನಿವಾಸ' ಪುಟ. ೧೪೪

೧೮. ಅದೇ ಪು. ೧೪೭

೧೯. ಟಿ.ಪಿ. ಅಶೋಕ – ಚಿಕವೀರ ರಾಜೇಂದ್ರ ಕಾದಂಬರಿಯಲ್ಲಿ ದುರಂತ ಪ್ರಜ್ಞೆ–ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ.

೨೦. ಅದೇ ಪು. ೬೩

೨೧. ಅದೇ ಪು. ೫೦

೨೨. ಮ.ನ.ಜವರಯ್ಯ – ಮಾಸ್ತಿಯವರ ಐತಿಹಾಸಿಕ ಕಾದಂಬರಿ ಮತ್ತು ಅದರ ಐತಿಹಾಸಿಕತೆ–ಸಾಹಿತ್ಯ ವಿಮರ್ಶೆ ೮೪. ಪುಟ ೧೮೨–೧೮೩

೨೩. ಅದೇ ಪು. ೧೯೭

೨೪. ಅದೇ ಪು. ೧೭೪

೨೫. ಅದೇ ಪು. ೧೭೪

೨೬. ಗೀತಾ ನಾಗಭೂಷಣ – ಮಾಸ್ತಿಯವರ ಚಿಕವೀರರಾಜೇಂದ್ರ – ಸಾಹಿತ್ಯ ವಿಮರ್ಶೆ ೮೫ – ಪುಟ ೫೦.

೨೭. ಸಾ.ಶಿ. ಮರುಳಯ್ಯ–ಮಾಸ್ತಿಯವರ ಕಾವ್ಯಗಳು. ಪುಟ. ೪೩

೨೮. ಎಚ್. ಎಸ್. ವೆಂಕಟೇಶಮೂರ್ತಿ–ಕನ್ನಡ ಕಥನ ಕವನಗಳು. ಪು. ೧೦೩

೨೯. ವಿ. ಚಂದ್ರಶೇಖರ ನಂಗಲಿ–ಮಾಸ್ತಿಯವರ ಕಾವ್ಯ–ಮಾಸ್ತಿ ಸಾಹಿತ್ಯ

ಸಮಗ್ರದರ್ಶನ. ಪು. ೯೮
೩೦. ಎಲ್. ಎಸ್. ಶೇಷಗಿರಿ ರಾವ್-ಮಾಸ್ತಿ ಜೀವನ ಮತ್ತು ಸಾಹಿತ್ಯ, ಪುಟ ೨೦೨
೩೧. ಕೆ.ಡಿ. ಕುರ್ತುಕೋಟಿ-ಗದ್ಯ ಶಿಲ್ಪಿ ಮಾಸ್ತಿ-ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ ಪು. ೧೬೬
೩೨. ಗೋ. ಕೃ. ಅಡಿಗ-ರಾಮನವಮಿ-ಶ್ರೀನಿವಾಸ ಪು. ೨೦೧
೩೩. ಮಾಸ್ತಿ-ಸಾಹಿತ್ಯ ಪ್ರೇರಣೆ- ಪುಟ. ೩೯
೩೪. ಗಿರೀಶ್ ಕಾರ್ನಾಡ್-ಕಾಕನ ಕೋಟೆ-ಶ್ರೀನಿವಾಸ ಪು. ೨೭೬
೩೫. ಒ.ಎಲ್. ನಾಗಭೂಷಣಸ್ವಾಮಿ-ಮಾಸ್ತಿಯವರ ಸಾಹಿತ್ಯ ವಿಮರ್ಶೆಯ ನಿಲುವುಗಳು- ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ - ಪು. ೧೬೦
೩೬. ಅದೇ ಪು. ೧೬೩
೩೭. ಪ್ರಭುಸ್ವಾಮಿ ಮಠ - ಉದ್ಧೃತ-ಮಾಸ್ತಿಯವರ ವಿಮರ್ಶೆ, ಇತಿಮಿತಿಗಳು- ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ - ಪುಟ. ೧೦೮
೩೮. ಮಾಸ್ತಿ: ಉದ್ಧೃತ -ಮಾಸ್ತಿ ಸಾಹಿತ್ಯ ಸಮಗ್ರ ದರ್ಶನ- ಪುಟ ೧೫೬ ಶ್ರೀನಿವಾಸರಾಜು.
೩೯. ಜೀವನ-ಸಂಪಾದಕೀಯ - ಸಂಪುಟ - ೧ - ಪು. ೨೭೩
೪೦. ಜೀವನ-ಸಂಪಾದಕೀಯ - ಸಂಪುಟ - ೧ - ಪು. ೫೪೨
೪೧. ಜೀವನ-ಸಂಪಾದಕೀಯ - ಸಂಪುಟ - ೧ - ಪು. ೨೭೭
೪೨. ಎಲ್. ಎಸ್. ಶೇಷಗಿರಿ ರಾವ್-ಮಾಸ್ತಿವೆಂಕಟೇಶ ಅಯ್ಯಂಗಾರ್ - ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಪ್ರಕಟಣೆ - ಪುಟ ೧.

೦

ಅನುಬಂಧ ೧

ಮಾಸ್ತಿಯವರ ಬದುಕಿನ ಕೆಲವು ಮುಖ್ಯ ವರ್ಷಗಳು

(ಅ)ವ್ಯಕ್ತಿ ಜೀವನ

೧೮೯೧ – ಜೂನ್ ೬, ಜನನ. ಕೋಲಾರ ಜಿಲ್ಲೆ ಹೊಂಗೇನ ಹಳ್ಳಿಯಲ್ಲಿ

೧೯೧೧ – ಪಂಕಜಮ್ಮನವರೊಂದಿಗೆ ಮದುವೆ

೧೯೧೨ – ಬಿ.ಎ. ಪದವಿ

೧೯೧೩ – ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ

೧೯೧೪ – ಇಂಗ್ಲಿಷ್ ಎಂ.ಎ. ಪದವಿ

೧೯೧೪ – ಪ್ರೊಬೇಷನರಿ ಅಸಿಸ್ಟೆಂಟ್ ಕಮೀಷನರ್ ಆಗಿ ನೇಮಕ.

೧೯೪೨ – ಮಹಾರಾಜರಿಂದ 'ರಾಜಸೇವಾ ಪ್ರಸಕ್ತ' ಎಂಬ ಬಿರುದು

೧೯೪೪ – ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ

೧೯೮೬ – ಜೂನ್ ೬, ಮರಣ

(ಆ) ಸಾಹಿತ್ಯಿಕ ಜೀವನ

೧೯೧೧ – ಮೊದಲ ಸಣ್ಣಕತೆ 'ರಂಗನ ಮದುವೆ' ರಚನೆ

೧೯೨೦ – ಮೊದಲ ಸಣ್ಣ ಕಥಾ ಸಂಕಲನದ ಪ್ರಕಟಣೆ

೧೯೨೯ – ಬೆಳಗಾಂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

೧೯೪೨ – ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು.

೧೯೪೪-೪೮– ಪ್ರಸಿದ್ಧ ಕಥನ ಕವನಗಳ ಸಂಕಲನ 'ನವರಾತ್ರಿ' (೫ ಭಾಗಗಳು) ಪ್ರಕಟಣೆ

೧೯೪೪-೬೫– 'ಜೀವನ' ಪತ್ರಿಕೆಯ ಸಂಪಾದಕರು

೧೯೪೬ – ಮದ್ರಾಸಿನಲ್ಲಿ ನಡೆದ ಭಾರತೀಯ ದಕ್ಷಿಣ ಭಾಷಾ ಸಮ್ಮೇಳನದ ಅಧ್ಯಕ್ಷರು

೧೯೪೯ – 'ಚೆನ್ನ ಬಸವನಾಯಕ'ದ ಪ್ರಕಟಣೆ.

೧೯೫೪ – ಪೂನಾ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆದ ಭಾಷಾ ಸಮ್ಮೇಳನದಲ್ಲಿ ರಾಷ್ಟ್ರಭಾಷಾ ವಿಭಾಗದ ಅಧ್ಯಕ್ಷರು

೧೯೫೬ – 'ಚಿಕವೀರ ರಾಜೇಂದ್ರ' ಪ್ರಕಟಣೆ

೧೯೫೬ – ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ

೧೯೬೧ – ಅಖಿಲ ಭಾರತ ಬರಹಗಾರರ ಸಮ್ಮೇಳನಾಧ್ಯಕ್ಷರು

೧೯೬೪ – ಪಿ.ಇ.ಎನ್. ಉಪಾಧ್ಯಕ್ಷರು

೧೯೬೯ – ಸಣ್ಣಕಥೆಗಳು (ಭಾಗ ೧೨ / ೧೩) ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೨ – 'ಶ್ರೀರಾಮ ಪಟ್ಟಾಭಿಷೇಕ' ಕಾವ್ಯ ಪ್ರಕಟಣೆ

೧೯೭೨ – 'ಶ್ರೀನಿವಾಸ' ಅಭಿನಂದನ ಗ್ರಂಥ ಸಮರ್ಪಣೆ

೧೯೭೨ – ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೨ – ಪಿ. ಇ. ಎನ್. ಭಾರತ ವಿಭಾಗದ ಅಧ್ಯಕ್ಷರು

೧೯೭೪ – ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಪದವಿ.

೧೯೭೭ – ಮೈಸೂರು ವಿಶ್ವ ವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ

೧೯೮೩ – ಸಮಗ್ರ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿ.

೧೯೮೪ – ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ.

ಅನುಬಂಧ ೨

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕೃತಿಗಳು

ಕಥಾ ಸಾಹಿತ್ಯ

೧. ಸುಬ್ಬಣ್ಣ (ಕಿರು ಕಾದಂಬರಿ) ೧೯೨೮
೨. ಚಿನ್ನಬಸವನಾಯಕ (ಕಾದಂಬರಿ) ೧೯೪೯
೩. ಚಿಕವೀರರಾಜೇಂದ್ರ (ಕಾದಂಬರಿ) ೧೯೫೬
೪. ಶೇಷಮ್ಮ (ಕಾದಂಬರಿ) ೧೯೭೬
೫. ಮಾತುಗಾರ ರಾಮಣ್ಣ (ಕಾದಂಬರಿ)
೬. ಸಣ್ಣಕತೆಗಳು (೧೫ ಸಂಪುಟಗಳು) ೧೯೨೦-೭೯

ಕಾವ್ಯ

೭. ಬಿನ್ನಹ ೧೯೨೨
೮. ಅರುಣ ೧೯೨೪
೯. ತಾವರೆ ೧೯೩೦
೧೦. ಚೆಲುವು ೧೯೩೧
೧೧. ಮಲಾರ ೧೯೩೩

೧೨. ಗೌಡರ ಮಲ್ಲಿ ೧೯೪೦

೧೩. ರಾಮನವಮಿ ೧೯೪೧

೧೪. ಮೂಕನ ಮಕ್ಕಳು ೧೯೪೩

೧೫. ಸುನೀತ ೧೯೪೬

೧೬. ಮನವಿ ೧೯೫೧

೧೭. ನವರಾತ್ರಿ (೫ ಸಂಪುಟಗಳು) ೧೯೪೪-೪೮

೧೮. ಸಂಕ್ರಾಂತಿ ೧೯೬೯

೧೯. ಶ್ರೀರಾಮ ಪಟ್ಟಾಭಿಷೇಕ

ನಾಟಕ

೨೦. ತಾಳೀಕೋಟೆ ೧೯೨೩

೨೧. ಶಾನ್ತಾ ೧೯೨೩

೨೨. ಸಾವಿತ್ರಿ ೧೯೨೩

೨೩. ಉಷಾ ೧೯೨೭

೨೪. ಮಂಜುಳಾ ೧೯೩೦

೨೫. ಶಿವಛತ್ರಪತಿ ೧೯೩೭

೨೬. ಯಶೋಧರಾ ೧೯೩೩

೨೭. ತಿರುಪಾಣಿ ೧೯೩೭

೨೮. ಕಾಕನಕೋಟೆ ೧೯೩೮

೨೯. ಅನಾರ್ಕಲಿ ೧೯೫೫

೩೦. ಪುರಂದರದಾಸ ೧೯೬೪

೩೧. ಕನಕಣ್ಣ ೧೯೬೫

೩೨. ಭಟ್ಟರ ಮಗಳು ೧೯೬೯

೩೩. ಬಾನುಲಿ ದೃಶ್ಯಗಳು ೧೯೭೪

೩೪. ಅಜ್ಜನ ದಾರಿ ೧೯೮೩

೩೫. ಕಾಳಿದಾಸ ೧೯೭೮

೩೬. ವಿಮಲಾ ಮರಿಯಾನ್ ೧೯೮೫

ಉಪನ್ಯಾಸ ಮತ್ತು ವಿಮರ್ಶೆ

೩೭. ಸಾಹಿತ್ಯ ೧೯೩೪
೩೮. ಕನ್ನಡದ ಸೇವೆ ೧೯೩೦
೩೯. ಕರ್ನಾಟಕದ ಜನತೆಯ ಸಂಸ್ಕೃತಿ ೧೯೩೧
೪೦. ಆದಿಕವಿ ವಾಲ್ಮೀಕಿ ೧೯೭೮
೪೦. ತಾಯ್ನುಡಿಯ ತಮ್ಮಡಿ ೧೯೪೪
೪೧. ಭಾರತ ತೀರ್ಥ ೧೯೫೨
೪೨. ಕರ್ನಾಟಕದ ಜನಪದ ಸಾಹಿತ್ಯ ೧೯೫೬
೪೩. ಕನ್ನಡ ಲೆಂಕ ೧೯೫೭
೪೪. ಸಾಹಿತ್ಯದಿಂದ ಆಗುವ ಕೆಲಸ ೧೯೭೧
೪೫. ವಿಚಾರ ೧೯೭೧
೪೬. ವಿಮರ್ಶೆ (೪ ಸಂಪುಟಗಳು) ೧೯೨೬-೬೫
೪೭. ಉತ್ತರಕಾಂಡ ವಿಚಾರ (೫ ಸಂಪುಟಗಳು) ೧೯೪೬-೮೨

ಜೀವನ ಚರಿತ್ರೆ

೪೮. ರವೀಂದ್ರನಾಥ ಠಾಕೂರರು ೧೯೩೫
೪೯. ಶ್ರೀ ರಾಮಕೃಷ್ಣ ೧೯೩೬
೫೦. ಭಾವ (ಆತ್ಮ ಚರಿತ್ರೆ, ೩ ಸಂಪುಟಗಳು) ೧೯೬೮-೬೯
೫೧. ನವರತ್ನ ರಾಮರಾವ್ ೧೯೭೬

ಸಂಕೀರ್ಣ

೫೨. ಪೂಜನ (ಮುನ್ನುಡಿಗಳ ಸಂಗ್ರಹ) ೧೯೫೧
೫೩. ಚಿಂತನ ೧೯೫೨
೫೪. ನಮ್ಮ ನುಡಿ (ಭಾಷಾಶಾಸ್ತ್ರ) ೧೯೬೦
೫೫. ಸಾಹಿತ್ಯ ಲಾಲನೆ ೧೯೬೭
೫೬. ಸಂಪಾದಕೀಯ (ಐದು ಸಂಪುಟಗಳು) ೧೯೬೭
೫೭. ಸಾಹಿತ್ಯ ಪ್ರೇರಣೆ ೧೯೭೫
೫೮. ಪತ್ರಗಳು ೧೯೭೬

೫೯. ಅಂತರಗಂಗೆ ೧೯೮೨

೬೦. ಧರ್ಮಸಂರಕ್ಷಣೆ ೧೯೮೩

೬೧. ಪ್ರಸಂಗ (ಐದು ಸಂಪುಟಗಳು)

೬೨. ಅರ್ಚನ ೧೯೭೯

ಭಾಷಾಂತರ

೬೩. ಚಿತ್ರಾಂಗದ ೧೯೪೫

೬೪. ಹ್ಯಾಮ್ಲೆಟ್ ೧೯೫೮

೬೫. ಚಂಡಮಾರುತ ೧೯೫೯

೬೬. ಲಿಯರ್ ಮಹಾರಾಜ ೧೯೫೯

೬೭. ಶ್ರೀಕೃಷ್ಣ ಕರ್ಣಾಮೃತ ೧೯೫೯

೬೮. ದ್ವಾದಶ ರಾತ್ರಿ ೧೯೬೦

೬೯. ಷೇಕ್ಸ್‌ಪಿಯರ್ ದೃಶ್ಯಗಳು (೩ಸಂಪುಟಗಳು) ೧೯೬೨-೬೪

೭೦. ಸಂಕ್ಷಿಪ್ತವಾಲ್ಮೀಕಿ ರಾಮಾಯಣ ೧೯೮೧

ಸಂಪಾದಿತ

೭೧. ಬಿಜ್ಜಳರಾಯ ಚರಿತೆ ೧೯೫೪

೭೨. ಕರ್ನಾಟಕ ಭಾರತ ಕಥಾಮಂಜರಿ ೧೯೫೮ ಕುವೆಂಪು ಅವರೊಂದಿಗೆ

೭೩. ಸರ್. ಎಂ. ವಿಶ್ವೇಶ್ವರಯ್ಯನವರು ೧೯೬೦

೭೪. ರವೀಂದ್ರ ಪ್ರಶಸ್ತಿ ೧೯೬೨

೭೫. ರವೀಂದ್ರ ಪೂಜನ ೧೯೬೩

೭೬. ವಿಶ್ವಮಾನವನೆಡೆಗೆ ೧೯೬೪

ಇಂಗ್ಲಿಷಿನಲ್ಲಿ

೭೭. Sayings of Basavanna 1935

೭೮. Popular culture in Karnataka 1937

೭೯. The poetry of valmiki 1940

೮೦. Subbanna 1943

೮೧. Ravindranath Tagore 1946
೮೨. Channabasavanayaka 1957
೮೩. The Mahabharata 1973
೮೪. Rajaji (2 vols) 1975
೮೫. Essays, Addresses Etc. 1975
೮೬. Short Stories, (5 vols) 1943-68
೮೭. Srimad Bhagavad - Gita - A study 1978
೮೮. Kalidasa 1980
೮೯. Addresses 1980
೯೦. Thinking of my life 1983
೯೧. Thoughts on Religion 1983.

ಅನುಬಂಧ ೩

ಮಾಸ್ತಿಯವರನ್ನು ಕುರಿತ ಪುಸ್ತಕಗಳು

೧. ಮಾಸ್ತಿಯವರ ಮನೋಧರ್ಮ, ತಿ.ತಾ. ಶರ್ಮ ಕವಿಜನಾಶ್ರಯ ಬೆಂಗಳೂರು-೧೯೭೦

೨. ಶ್ರೀ ಮಾಸ್ತಿಯವರ ಕಥೆಗಳು: ಎ.ಎನ್. ಮೂರ್ತಿರಾವ್, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೭೧

೩. ಶ್ರೀನಿವಾಸ : (ಸಂಭಾವನಾ ಗ್ರಂಥ): ಪುರೋಗಾಮಿ ಸಾಹಿತ್ಯ ಸಂಘ ಮಲ್ಲೇಶ್ವರಂ, ಬೆಂಗಳೂರು, ೧೯೭೨

೪. ಶ್ರೀನಿವಾಸರ ಸಾಹಿತ್ಯ: ಸಂ. ಹಾ. ಮಾ. ನಾಯಕ, ಡಿ. ವಿಕೆ. ಮೂರ್ತಿ, ಮೈಸೂರು ೧೯೭೪

೫. Masti Venkatesh Iyengar. L. S. Sheshagiri Rao, Institute of Kannada Studies : ೧೯೭೪

೬. ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನದರ್ಶನ: ವಿ. ಎಂ. ಇನಾಂದಾರ್, ಬೆಂಗಳೂರು ವಿಶ್ವವಿದ್ಯಾಲಯ, ೧೯೮೦

೭. ಪ್ರಬುದ್ಧ ಕರ್ನಾಟಕ: ಮಾಸ್ತಿ ಸಂಚಿಕೆ ೧೯೮೫

೮. ಮಾಸ್ತಿಯವರ ಸಾಹಿತ್ಯ: ಒಂದು ಅಧ್ಯಯನ - ಸಂ.ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೬

೯. ಮಾಸ್ತಿ ಸ್ಮರಣೆ: ಸಂ. ನಾ. ಗೀತಾಚಾರ್ಯ: ಬಿ.ಎಂ.ಶ್ರೀ ಪ್ರತಿಷ್ಠಾನ, ೧೯೮೭

೧೦. ಡಾ. ಮಾಸ್ತಿ ಅವರ ಚಿಕವೀರ ರಾಜೇಂದ್ರ - ಒಂದು ಚಿಂತನೆ - ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೮೫

೧೧. ನಮ್ಮ ಮಾಸ್ತಿ: ಮಾವಿನಕೆರೆ ರಂಗನಾಥನ್, ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೮೮

೧೨. ಮಾಸ್ತಿ ಸಾಹಿತ್ಯ ಸಮಗ್ರದರ್ಶನ: ಸಂವಾದ ಪ್ರಕಾಶನ, ಮಲ್ಲಾಡಿ ಹಳ್ಳಿ, ಬೆಂಗಳೂರು, ೧೯೯೨

೧೩. ಮಾಸ್ತಿ ಜೀವನ ಮತ್ತು ಸಾಹಿತ್ಯ: ಎಲ್. ಎಸ್. ಶೇಷಗಿರಿರಾವ್. ಡಾ. ಮಾಸ್ತಿ ಶತಮಾನೋತ್ಸವ ಸಮಿತಿ, ಬೆಂಗಳೂರು: ೧೯೯೨

೧೪. ಮಾಸ್ತಿಯವರ ನಾಟಕಗಳು: ಜಿ. ಎನ್. ರಂಗನಾಥರಾವ್, ಬೆಂಗಳೂರು ವಿಶ್ವವಿದ್ಯಾಲಯ ೧೯೭೮.

೦

'ಮಾಸ್ತಿ' ಅವರನ್ನು ಪರಿಚಯಿಸುವುದೆಂದರೆ ಹೊಸಗನ್ನಡ ಸಾಹಿತ್ಯದ ಹುಟ್ಟು, ಬೆಳವಣಿಗೆಗಳನ್ನೇ ಪರಿಚಯಿಸಿದಂತೆ. ನವೋದಯ ತಲೆಮಾರಿನ ಹಿರಿಯ ಸಾಹಿತಿಗಳಾದ ಅವರು ಹಲವು ಪ್ರಕಾರಗಳಲ್ಲಿ ಕಾರ್ಯಮಾಡಿ, ಹೊಸಗನ್ನಡ ಸಾಹಿತ್ಯಕ್ಕೆ ಒಂದು ಗಟ್ಟಿ ಬುನಾದಿಯನ್ನು ಹಾಕಿಕೊಟ್ಟಿದ್ದು ಈಗ ಇತಿಹಾಸ.

'ಮಾಸ್ತಿ' – ಸಣ್ಣಕತೆಯ ಜನಕರೂ ಅಹುದು. ಅವರ 'ಜೀವನ' ಪತ್ರಿಕೆ ಅಂದಿನ ಸಾಹಿತಿಗಳಿಗೆ ಬರಹದ ವೇದಿಕೆಯಾಗಿ, ಯುವಕರಿಗೆ ದಾರಿದೀಪವಾಗಿ ಕಾರ್ಯಮಾಡಿದ್ದನ್ನು ಮರೆಯುವಂತಿಲ್ಲ. ಅವರ ಗದ್ಯ ಅವರದೇ ಎನ್ನುವಷ್ಟು ವಿಶಿಷ್ಟವಾದುದು.

ಬೆಲೆ: ರೂ. ೩೦-೦೦